ಮಾತು ತಮ್ಮ ಮುಂದೆ ಹೇಳುತ್ತೇನೆ. ಮುಂದೆ ಇಂತಹ ಪರಿಸ್ಥಿತಿ ಉದ್ಭವವಾಗಬಾರದು, ಆಗತಕ್ಕಂಥದ್ದು ಒಳ್ಳೆಯದು ಅಲ್ಲ ಎಂದು ಕೂಡ ತಮಗೆ ನಾನು ತಿಳಿಸುತ್ತಿದ್ದೇನೆ. ಈಗ ನಾವು ಯಾವುದೋ ಒಂದು ಕುಂಟು ನೆಪ ಹೇಳಿ ಮುಂದಕ್ಕೆ ಹಾಕತಕ್ಕಂಥ ಪ್ರಶ್ನೆಗೆ ಹೆಚ್ಚಿಗೆ ಒಂದು ಜವಾಬ್ದಾರಿ ಇದೆ. ನಮ್ಮ ಸದಸ್ಯರ ಹಕ್ಕು, ಇದು ಸದಸ್ಯರಿಗೆ ಒದಗಿಸಬೇಕಾದಂತಹ ಎಲ್ಲಾ ಪ್ರತಿಯೊಂದು ಸಹ ಅವರ ಹಕ್ಕು ಎನ್ನತಕ್ಕಂಥದ್ದನ್ನು ತಮ್ಮ ಮೂಲಕ ಹೇಳುತ್ತೇನೆ.

ಅಧ್ಯಕ್ಷರು:- ಸಗೀರ್ ಅಹಮದ್‌ರವರೇ, ನೀವು ಸುಮಾರು ಈಗ 40 ನಿಮಿಷ ಮಾತನಾಡಿದ್ದೀರಿ, ನಿಮ್ಮ ಪಕ್ಷಕ್ಕೆ ಇಷ್ಟು ಸಮಯ ಎಂದು ನಿಗಧಿ ಮಾಡಿದ್ದೇವೆ. ಅದರ ಆಧಾರದ ಮೇಲೆ ನಿಮ್ಮ ಮುಖಂಡರು ನಿಮಗೆ ತಿಳಿಸಿರುತ್ತಾರೆ. ನಿಮಗೆ ಎಷ್ಟು ಸಮಯ ಇರುತ್ತದೆ, ನೀವು ಹೆಚ್ಚು ಹೊತ್ತು ತೆಗೆದುಕೊಂಡರೆ ನಿಮ್ಮ ಪಕ್ಷದಲ್ಲಿ ಇತರೆ ಸದಸ್ಯರಿಗೆ ಬೇಡಿಕೆಗಳ ಮೇಲೆ ಪಾಲ್ಗೊಳ್ಳುವವರಿಗೆ ತೊಂದರೆಯಾಗುತ್ತದೆ. ಆದ್ದರಿಂದ ದಯಮಾಡಿ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನೀವು ಮಾತನಾಡುವುದಿದ್ದರೆ ನಮಗೂ ಕೇಳುವುದಕ್ಕೆ ಇಷ್ಟ. ಏಕೆಂದರೆ ಸಮಯ ಇಲ್ಲದೆ ಇರುವುದರಿಂದ ಬೇಗ ಮುಗಿಸಬೇಕೆಂದು ವಿನಂತಿ.

ಶ್ರೀ ಸಿ.ಆರ್.ಸಗೀರ್ ಅಹಮದ್:- ನನಗೆ ವ್ಯಥೆ ಏನೆಂದರೆ, ನಾನು ಮಾತನಾಡುವುದಕ್ಕೆ ಹೊರಟಾಗಲೆಲ್ಲಾ ಸದನವನ್ನು ಮುಂದೂಡಿದ್ದೀರಿ. ಮತ್ತೆ ಎಲ್ಲಾದರೂ ಸದನ ಮುಂದೂಡುತ್ತೀರೋ ಎನ್ನುವ ಭಯ.

ಅಧ್ಯಕ್ಷರು:- ನೀವು ಮಹಾ ಪುರುಷರು, ಬೇರೆ ಸಾಮಾನ್ಯ ಜನ ಮಾತನಾಡುವಾಗ ಹಾಗೆ ಆಗುವುದಿಲ್ಲ. ದಯಮಾಡಿ ಮುಂದುವರೆಸಿ.

6. ವಿತ್ತೀಯ ಕಾರ್ಯಕಲಾಪಗಳು.

1996-97ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ – (ಮುಂದುವರಿದ ಚರ್ಚೆ)

+ ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು):- ಸನ್ಮಾನ್ಯ ಅಧ್ಯಕ್ಷರೆ, ನಗರಾಭಿವೃದ್ಧಿ ಇಲಾಖೆಯ ಬೇಡಿಕೆ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಿರುವಂತಹ ಈ ಸಂದರ್ಭದಲ್ಲಿ ನಗರ ಸಭಾ ಮತ್ತು ಪುರಸಭೆಗಳ ವ್ಯಾಪ್ತಿಯಲ್ಲಿ ನಾಗರೀಕ ಸವಲತ್ತುಗಳನ್ನು ಒದಗಿಸಿ ಕೊಡುವ ಬಗ್ಗೆ ಸರ್ಕಾರ ರೂಪಸಿರುವಂತಹ ಕಾರ್ಯಕ್ರಮಗಳ ನ್ಯೂನತೆಗಳ ಬಗ್ಗೆ ತಮ್ಮ ಮುಖಾಂತರ ನಾನು ಸರ್ಕಾರದ ಗಮನಕ್ಕೆ ತರುವಂತಹ ಪ್ರಯತ್ನ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಉಪ ಸಭಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ವಿಶೇಷವಾಗಿ, ನಗರಸಭೆ, ಪುರಸಭೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ

ಕರ್ನಾಟಕ ರಾಜ್ಯ ಸರ್ಕಾರ ಒಂದು ಸಂಸ್ಥೆ ಪ್ರಾರಂಭ ಮಾಡಿದೆ. ಇದು ಕರ್ನಾಟಕ ಒಳಚರಂಡಿ ಮತ್ತು ಕುಡಿಯುವ ನೀರಿನ ಒಂದು ಸಂಸ್ಥೆ ಪ್ರಾರಂಭವಾಗಿ ಈ ರಾಜ್ಯದ ಅನೇಕ ಪಟ್ಟಣ ಪ್ರದೇಶಗಳಲ್ಲಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಈ ಯೋಜನೆ ಎಷ್ಟು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳುವುದಕ್ಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆ, 1994-95ನೇ ಸಾಲಿನಲ್ಲಿ ಈ ಕೊಳವೆ ಬಾವಿ ಮುಖಾಂತರ ಕುಡಿಯುವ ನೀರು ಒದಗಿಸಿಕೊಡುವಂತಹ 49 ಯೋಜನೆಗಳು ಹಮ್ಮಿಕೊಂಡಿದ್ದರೆ, 1995-96ನೇ ಸಾಲಿನಲ್ಲಿ 65 ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ರಾಜ್ಯದ ಎಲ್ಲಾ ಪಟ್ಟಣ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಪುರಸಭೆ ನಗರ ಸಭೆ ವ್ಯಾಪ್ತಿಯಲ್ಲಿ 155 ಯೋಜನೆಗಳನ್ನು ಕುಡಿಯುವ ನೀರಿಗಾಗಿ ಹಮ್ಮಿಕೊಂಡಿದ್ದಾರೆ. ಸನ್ಮಾನ್ಯ ಉಪಾಧ್ಯಕ್ಷರೆ, ವಿಚಿತ್ರವಾದ ಒಂದು ಸ್ಥಿತಿ ಎಂದರೆ, ವಿಷಯ ಸಮಿತಿಯ ಸದಸ್ಯನಾಗಿ ಮಾನ್ಯ ಮಾಜಿ ನಗರಾಭಿವೃದ್ಧಿ ಸಚಿವರಾದ ಧರ್ಮಸಿಂಗ್‌ರವರ ನೇತೃತ್ವದಲ್ಲಿ ವಿಷಯ ಸಮಿತಿಯ ಸಭೆ ಸದಸ್ಯನಾಗಿ ಅನೇಕ ವಿಚಾರಗಳನ್ನು ತಿಳಿದುಕೊಳ್ಳುವಂತಹ ಒಂದು ಅವಕಾಶ ಸಿಕ್ಕಿತು. ಇವತ್ತು ನಾವು ಈ ಸಮಿತಿಯ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿದಂತಹ ಸಂದರ್ಭದಲ್ಲಿ ನಾಲ್ಕೈದು ವಿಚಾರಗಳನ್ನು ನಾವು ಈ ಕುಡಿಯುವ ನೀರಿನ ಯೋಜನೆ ಬಗ್ಗೆ ನಮ್ಮ ಅಭಿಪ್ರಾಯವನ್ನು ಕೊಟ್ಟಿದ್ದೇವೆ. ಅದಕ್ಕೆ ಸರ್ಕಾರ ಒಪ್ಪಿಗೆ ಕೊಟ್ಟಿದೆ ನಾವು ಮಂಡಿಸಿರುವಂತಹ ವರದಿ ಬಗ್ಗೆ ಸರ್ಕಾರ ಕೂಲಂಕಷವಾಗಿ ಪರಿಶೀಲಿಸಿ ಆ ವರದಿಯನ್ನು ಸರ್ಕಾರ ಒಪ್ಪಿರುತ್ತದೆ. ನಾವು ಆ ವರದಿಯಲ್ಲಿ ಏನು ಹೇಳಿದ್ದೇವೆಂದರೆ, ಯೋಜನೆಗೆ ನಿಗಧಿಪಡಿಸಿರುವಂತಹ ಸಮಯದಲ್ಲಿ ಆ ಯೋಜನೆ ಕೆಲಸ ಪೂರೈಸುವ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು, ಜೊತೆಗೆ ಈ ಕರ್ನಾಟಕ ಒಳಚರಂಡಿ ಮತ್ತು ಕುಡಿಯುವ ನೀರಿನ ಸಂಸ್ಥೆಗೆ ಮೂರು - ಮೂರು ತಿಂಗಳಿಗೆ ಇಂಜಿನಿಯರ್‌ಗಳನ್ನು ಬದಲಾವಣೆ ಮಾಡುವಂತಹ ಅಭ್ಯಾಸ ಸರ್ಕಾರದಲ್ಲಿ ಇವತ್ತು ಇದೆ. ಇದು ಆಗಬಾರದು, ಇದರಿಂದ ಏನಾಗುತ್ತದೆ ಎಂದರೆ ಉದಾಹರಣೆಗೆ ನಾನು ಆ ಅಧಿಕಾರಿಗಳ ಹೆಸರನ್ನು ಬಳಸುವುದಕ್ಕೆ ಹೋಗುವುದಿಲ್ಲ. ಆರೇಳು ತಿಂಗಳ ಹಿಂದೆ ಒಳಚರಂಡಿ ಮತ್ತು ಕುಡಿಯುವ ನೀರಿನ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಒಬ್ಬರು ಸರ್ಕಾರದ ಕುಡಿಯುವ ನೀರಿನ ಯೋಜನೆಗಳ ಕೆಲಸವನ್ನು ಮುಂದುವರಿಸುವುದಕ್ಕಾಗಿ ಪ್ರತ್ಯೇಕವಾಗಿ ಇಂತಿಂಥ ಯೋಜನೆಗಳಿಗೆ ಇಷ್ಟಿಷ್ಟು ಹಣವನ್ನು ಒದಗಿಸಿಕೊಟ್ಟಿರುವಂತಹ ಸಂದರ್ಭದಲ್ಲಿ ವ್ಯವಸ್ಥಾಪಕ ನಿರ್ದೇಶಕರು ನೇರವಾಗಿ ಅವರಿಗೆ ಸಂಬಂಧಪಟ್ಟಂತಹವರಿಗೆ ಅವರಿಗೆ ಹತ್ತಿರ ಇದ್ದಂತಹ ಗುತ್ತಿಗೆದಾರರಿಗೆ, ಮನಸಾರೆ ಈ ಹಣವನ್ನು ವಿತರಣೆ ಮಾಡಿದ್ದಾರೆ. ಪ್ರಾಯಶಃ ಯಾವ ಯೋಜನೆಗೆ ಈ ಹಣ ಮೀಸಲಿಟ್ಟಿತ್ತೋ ಆ ಯೋಜನೆಗೆ ಈ ಹಣ ಉಪಯೋಗವಾಗಲಿಲ್ಲ. ಅಲ್ಲಿರುವಂತಹ ನೀರಿನ ಯೋಜನೆಗಳಿಗೆ, ಆ ಗುತ್ತಿಗೆದಾರರಿಗೆ ನೇರವಾಗಿ ಈ ಹಣ ಹೋಗಿಲ್ಲ. ಇದರಿಂದ ಏನಾಗುತ್ತದೆ ಎಂದರೆ ಯೋಜನೆ ಯಶಸ್ವಿಯಾಗಿ ನಿಗಧಿತ ವೇಳೆಯಲ್ಲಿ ಪೂರೈಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಪದೇ ಪದೇ ಇಂಜಿನಿಯರ್‌ಗಳಾಗಲೀ,

ವ್ಯವಸ್ಥಾಪಕ ನಿರ್ದೇಶಕರಾಗಲಿ ಅವರಿಗೆ ಎರಡು ತಿಂಗಳಿಗೊಮ್ಮೆ ಮೂರು ತಿಂಗಳಿಗೊಮ್ಮೆ ಬದಲಾವಣೆ ಮಾಡಬಾರದು. ಅವರುಗಳ ವರ್ಗಾವಣೆ ಮಾಡಕೂಡದು ಎನ್ನುವ ಶಿಫಾರಸ್ಸು ನಾವು ವಿಷಯ ಸಮಿತಿಯಲ್ಲಿ ಮಾಡಿದ್ದೇವೆ. ಅದಕ್ಕೆ ಸರ್ಕಾರ ಒಪ್ಪಿಗೆ ನೀಡಿದೆ. ಆದುದರಿಂದ, ಇದರಿಂದ ಕೇವಲ ನಮ್ಮ ವ್ಯವಸ್ಥೆಯಲ್ಲಿ ಸರಿಪಡಿಸಿಕೊಳ್ಳುವಂತಹ ಪ್ರಯತ್ನ ನಾವು ಮಾಡುತ್ತಿದ್ದೇವೆ. ಇವತ್ತು ನಗರಸಭೆ ಪುರಸಭೆಗಳ ಆರ್ಥಿಕ ವ್ಯವಸ್ಥೆ ಯಾವ ರೀತಿಯಲ್ಲಿ ಇದೆ ಎಂದರೆ, ಪ್ರಾಯಶಃ ಸರ್ಕಾರನೂ ಆ ವಿಚಾರ ಒಪ್ಪುತ್ತದೆ. ಮುಖ್ಯಮಂತ್ರಿಗಳು ನಿನ್ನೆ ಆ ವಿಚಾರ ಹೇಳಿದ್ದಾರೆ. 50 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ತಯಾರಾಗುವಂತಹ ಒಂದು ಯೋಜನೆ ನಾಲ್ಕು ವರ್ಷಗಳಾದರೂ ಸಂಪೂರ್ಣವಾಗಿ ಪೂರೈಸದೆ, 50 ಲಕ್ಷಕ್ಕೆ ಇದ್ದಂತಹ ಯೋಜನೆ ಇವತ್ತು 150 ಲಕ್ಷಕ್ಕೆ ಹೋಗುವಂತಹ ನಿದರ್ಶನಗಳು ಈ ಪುಸ್ತಕದಲ್ಲಿವೆ. ಉದಾಹರಣೆಗಾಗಿ ಇವತ್ತು ನಾನು ಹೇಳುವುದಾದರೆ ನಮ್ಮ ಚಿಕ್ಕಮಗಳೂರು ಪಟ್ಟಣಕ್ಕೆ ಕೇವಲ 80,000ಕ್ಕೆ ಸಿದ್ಧಪಡಿಸಿದಂಥ ಒಂದು ಹೊನ್ನಮ್ಮನಳ್ಳ ಕುಡಿಯುವ ನೀರಿನ ಯೋಜನೆಗೆ ನಾವು ಇವತ್ತು 1.68 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದಕ್ಕೆ ಕಾರಣ ಪ್ರಗತಿಯಲ್ಲಿ ವಿಳಂಬ, ಕುಡಿಯುವ ನೀರಿನ ಯೋಜನೆಗಳಲ್ಲಿ ಇಂಜಿನಿಯರ್‌ಗಳ ಬದಲಾವಣೆ, ಗುತ್ತಿಗೆದಾರರಿಗೆ ನೀಡಬೇಕಾದ ಹಣದ ಬಗ್ಗೆ ಸಮಯ ನಿಗಧಿಪಡಿಸಿ ಸರ್ಕಾರ ಆದೇಶ ನೀಡಿದರೂ ಸಹ ಅಲ್ಲಿರುವಂತಹ ವ್ಯವಸ್ಥಾಪಕ ನಿರ್ದೇಶಕರು ಆ ಹಣವನ್ನು ಬೇರೆ ಕಡೆ ವರ್ಗಾವಣೆ ಮಾಡಿರುವುದರಿಂದ ಈ ಯೋಜನೆ ವಿಳಂಬವಾಗಿ 80 ಲಕ್ಷಕ್ಕೆ 80 ಲಕ್ಷದಷ್ಟೇ ಹಣ ಜಾಸ್ತಿಯಾಗಿದೆ. ಆ ಯೋಜನೆಯಿಂದ ಸರ್ಕಾರದ ಮೇಲೆ ಹೊರೆಯಾಗಿದೆ. ಇದು ಕೇವಲ ಚಿಕ್ಕಮಗಳೂರು ಪಟ್ಟಣಕ್ಕೆ ಸೇರಿರುವಂಥ ವಿಚಾರ ಅಲ್ಲ, ಅಥವಾ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿರುವಂಥ ವಿಚಾರ ಅಲ್ಲ. ಕರ್ನಾಟಕ ಒಳಚರಂಡಿ ಮತ್ತು ಕುಡಿಯುವ ನೀರಿನ ನಿಗಮದ ವತಿಯಿಂದ ಏನು 155 ಯೋಜನೆಗಳನ್ನು ಸರ್ಕಾರ ಹಮ್ಮಿಕೊಂಡಿದೆ, ಈ ಎಲ್ಲಾ ಯೋಜನೆಗಳ ಸ್ಥಿತಿಗತಿಗಳ ಬಗ್ಗೆ ನಾವು ಇವೊತ್ತು ಹೇಳುವುದಾದರೆ ಈ ಹೊರೆ ಇವೊತ್ತು ಬರೀ ಸರ್ಕಾರದ್ದೇ ಆಗುವುದಿಲ್ಲ. ಈ ಹೊರೆ ನಗರಸಭೆ ಮತ್ತು ಪುರಸಭೆಗಳ ಮೇಲೆ ಬೀಳುತ್ತದೆ. ಸಾರ್ವಜನಿಕರಿಂದ ಏನು ಹಣ ಮೂವತ್ತು ರೂಪಾಯಿ ಟ್ಯಾಕ್ಸ್ ಅಥವಾ ನೀರಿನ ಕರವನ್ನು ಸಂಗ್ರಹಿಸುತ್ತಿದ್ದೇವೆ ಅವರ ಹಣ ಪೋಲಾಗುತ್ತಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ.

ಇನ್ನು ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಗುಲಬರ್ಗಾ ನಗರಕ್ಕೆ ಮತ್ತು ಬಿಜಾಪೂರ ನಗರಕ್ಕೆ ಒಳಚರಂಡಿ ವ್ಯವಸ್ಥೆ ಮತ್ತು ಕುಡಿಯುವ ನೀರಿನ ಒಂದು ವ್ಯವಸ್ಥೆ ಮಾಡಿ ಕೊಟ್ಟಿರುವಂಥ ಈ ಸಂದರ್ಭದಲ್ಲಿ ನಾನು ನಗರಾಭಿವೃದ್ಧಿ ಸಚಿವನಾಗಿದ್ದಾಗ ನಾಲ್ಕು ವರ್ಷಗಳಾದರೂ ಸಹಿತ ಈ ಕೆಲಸವನ್ನು ಪೂರೈಸುವುದಕ್ಕೆ ಸಾಧ್ಯವಾಗಲಿಲ್ಲ. ನಾನು ಸ್ವತಃ ಬಿಜಾಪುರಕ್ಕೆ ಭೇಟಿ ನೀಡಿದಾಗ, ಅಲ್ಲಿಯ ಒಳಚರಂಡಿ ವ್ಯವಸ್ಥೆಗಾಗಿ ಅಲ್ಲಿಯ ರಸ್ತೆಗಳು, ಅಲ್ಲಿಯ ಬೀದಿಗಳು ಅಗೆದಿರುವಂಥ ಸಂದರ್ಭದಲ್ಲಿ ವಾಹನ ಸಂಚಾರಕ್ಕೆ, ಸಾರ್ವಜನಿಕರ ಸಂಚಾರಕ್ಕೆ

ಅಡಚಣೆ ಉಂಟಾದ ಸಂದರ್ಭದಲ್ಲಿ ಆ ತಕ್ಷಣವೇ ನನ್ನ ಕೈಯಲ್ಲಿ, ನನ್ನ ಸರ್ಕಾರದ ಕೈಯಲ್ಲಿ ಏನಾಗುತ್ತದೆ ಅದನ್ನು ಮಾಡಿ, ನಾನು ಆ ಸಂದರ್ಭದಲ್ಲಿ ಹಣವನ್ನು ಬಿಡುಗಡೆ ಮಾಡುವಂಥ ಪ್ರಯತ್ನವನ್ನು ಮಾಡಿದೆ. ಆದರೂ ಸಹಿತ ಇವೊತ್ತಿನವರೆಗೆ ಆ ಯೋಜನೆ ಯಶಸ್ವಿ ಆಗಲಿಕ್ಕೆ ಸಾಧ್ಯವಾಗಲಿಲ್ಲ. ಅನೇಕ ದೂರುಗಳು ಬಂದಿರುವಂಥ ಸಂದರ್ಭದಲ್ಲಿ ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಗುಲಬರ್ಗಾ ನಗರದಲ್ಲಿ ಭೀಮಾ ನದಿಗೆ ಬ್ಯಾರೇಜ್ ನಿರ್ಮಿಸಿದಂಥ ಸಂದರ್ಭದಲ್ಲಿ, ಅನೇಕ ಇಂಜನಿಯರ್‌ಗಳ ಲೋಪದೋಷಗಳು ಇವೆ ಎಂದು ವರದಿಯನ್ನು ಸಿದ್ಧಪಡಿಸಿ, ತನಿಖೆ ನಡೆಸಿ ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿರುವಂಥ ಸಂದರ್ಭದಲ್ಲಿ ಆ ಇಂಜಿನಿಯರ್‌ಗಳ ಮೇಲೆ ಸರ್ಕಾರ ಕಾನೂನಿನ ಕ್ರಮ ಜರುಗಿಸುವಂಥ ನಿರ್ಣಯ ಮಾಡಿತ್ತು. ಜೊತೆಗೆ ಈ ಪ್ರಕರಣವು ಸಿ.ಓ.ಡಿ. ತನಿಖೆಗೆ ಒಪ್ಪಿಸಬೇಕೆಂದು ಕೂಡ ನಿರ್ಣಯ ಮಾಡಿತ್ತು. ಆದರೆ ಸರ್ಕಾರ ತೆಗೆದುಕೊಂಡಿರುವಂಥ ಈ ನಿರ್ಣಯದ ಮೇಲೆ ಕ್ರಮದ ಬಗ್ಗೆ ಏನೂ ಸುದ್ಧಿ ಇಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಕರ್ನಾಟಕ ಒಳಚರಂಡಿ ಸಂಸ್ಥೆಯಿಂದ ಮಾಡುವಂಥ ಕೆಲಸಗಳಲ್ಲಿ ಯಾವ ರೀತಿ ಲೋಪದೋಷಗಳು ಕಂಡು ಬರುತ್ತವೆ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮುಂಗಡ ಹಣ ಪಾವತಿ ಮಾಡುವಂಥದ್ದು ಸರ್ಕಾರದಲ್ಲಿ ಕಾನೂನು ಇದೆಯೋ? ಇದು ಬಹಳ ಮುಖ್ಯವಾಗಿ ನಾವು ಆಲೋಚನೆ ಮಾಡಬೇಕು. ಕೊಳವೆ ಖರೀದಿ ಮಾಡುವುದಕ್ಕೆ ರಾಜ್ಯ ಸರ್ಕಾರದಿಂದ 58 ಲಕ್ಷ ರೂಪಾಯಿ ಹಣವನ್ನು ಪಾವತಿ ಮಾಡಿದೆ. ಆ ಕೊಳವೆ ಬಾವಿಗಳ ಸ್ಥಿತಿಗತಿಗಳು ಉತ್ತಮವಾಗಿವೆ ಎನ್ನುವುದಕ್ಕೆ ಟೆಸ್ಟಿಂಗ್ ಇರುತ್ತದೆ, ಪ್ರೆಶರ್ ಟೆಸ್ಟ್ ಮಾಡುವಂಥದ್ದು ಆಗಿಲ್ಲ ಎನ್ನುವ ದೂರು, ಶಾಸಕರು ದೂರಿರುವಂಥ ವಿಚಾರ ಇರಬೇಕು, ಆ ಭಾಗದ ಜನರು ದೂರಿರುವಂಥ ವಿಚಾರ ಇರಬೇಕು, ಆ ನಗರಸಭೆಗೆ ಸಂಬಂಧಪಟ್ಟ ಅಧ್ಯಕ್ಷರ, ಉಪಾಧ್ಯಕ್ಷರ ದೂರು ಇರಬಹುದು ಅದರ ತನಿಖೆಗೆ ಸರ್ಕಾರ ಆದೇಶ ಹೊರಡಿಸಿದರೂ ಸಹಿತ ಅಂತಹ ಇಂಜಿನಿಯರ್‌ಗಳ ಮೇಲೆ ಇವೊತ್ತಿನವರೆಗೆ ಯಾವುದೇ ಕ್ರಮವನ್ನು ಜರುಗಿಸಲಿಕ್ಕೆ ಸಾಧ್ಯವಾಗಿಲ್ಲ. ನಾನು ಇದನ್ನೆಲ್ಲಾ ಏತಕ್ಕೆ ಹೇಳುತ್ತೇನೆಂದರೆ ಇವೊತ್ತು ನಗರಸಭೆ, ಪುರಸಭೆಯ ಆರ್ಥಿಕ ಸ್ಥಿತಿಗಳ ಬಗ್ಗೆ ನಾವು ಈ ರೀತಿ ಒಂದು ಗಂಭೀರ ವಿಚಾವನ್ನು ಇಂತಹ ಒಂದು ನಿಗಮದ ಮೇಲೆ ಇಡದಿದ್ದಾಗ ಸಾರ್ವಜನಿಕರ ದುಡ್ಡು ಪೋಲಾಗುತ್ತಿದೆ ಎಂದು ನಾನು ಭಾವಿಸುತ್ತೇನೆ. ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ಒಂದು ವಿಚಾರವನ್ನು ಹೇಳಿದ್ದಾರೆ ಅದಕ್ಕಾಗಿ ನಾವು ನಿಜವಾಗಿಯೂ ಅವರಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸಬೇಕು. ನಗರಸಭೆಯ, ಪುರಸಭೆಯ ಆರ್ಥಿಕ ಸ್ಥಿತಿಯ ಬಗ್ಗೆ ಅವರು ಬಹಳ ಚಿಂತನೆ ಮಾಡಿದ್ದಾರೆ. ಅವರ ಜೊತೆ ಇವೊತ್ತು ಸರ್ಕಾರ ಕೂಡ ಅದರ ಬಗ್ಗೆ ಗಂಭೀರವಾದ ಚಿಂತನೆ ಮಾಡಬೇಕಾದಂಥ ಸಂದರ್ಭ ಇದೆ. ಇವೊತ್ತು ಯಾವುದೇ ಪುರಸಭೆಯಾಗಲೀ ನಗರಸಭೆಯಾಗಲೀ ಆರ್ಥಿಕವಾಗಿ ಬಹಳ ದುರ್ಬಲವಾಗಿದೆ. ಇದಕ್ಕೆ ಶಕ್ತಿ ತುಂಬುವಂಥ ಕೆಲಸ ಸರ್ಕಾರ ಮಾಡಬೇಕಾಗುತ್ತದೆ. ಅಕ್ಟ್ರಾಯ್ ಮಾಡುತ್ತೇವೆ ಎನ್ನುವಂಥ ವಿಚಾರ ಅವರು ಹೇಳಿದ್ದಾರೆ. ಆದರೆ ಪುರಸಭೆ,

ನಗರಸಭೆಗಳ ಆರ್ಥಿಕ ಸ್ಥಿತಿಯನ್ನು ತಾವು ನೋಡಿದಾಗ ತಾವು ಏನು ಶೇಕಡಾ 15ರಷ್ಟು ಹಣ ಪುರಸಭೆ, ನಗರಸಭೆಗಳು ಕುಡಿಯುವ ನೀರಿನ ಯೋಜನೆಗೆ ಪಾವತಿ ಮಾಡಬೇಕು ಎಂದು ಕಾನೂನು ನಿಯಮಾವಳಿಗಳನ್ನು ಮಾಡಿದ್ದೀರಿ, ಆದರೆ ಯಾವ ಪುರಸಭೆ, ನಗರಸಭೆಗಳೂ ಶಕ್ತಿಶಾಲಿಯಾಗಿಲ್ಲ. ಸರ್ಕಾರಕ್ಕೆ ಶೇ. 15ರಷ್ಟು ಒದಗಿಸುವುದರ ಬಗ್ಗೆ ಅವರಿಗೆ ಯಾವುದೇ ರೀತಿ ಶಕ್ತಿ ಇಲ್ಲ. ಆದುದರಿಂದ ವಿಶೇಷವಾಗಿ ನಾವು ವಿಷಯ ಸಮಿತಿಯಲ್ಲಿ ಒಂದು ನಿರ್ಣಯವನ್ನು ಮಾಡಿ, ನಮ್ಮ ವರದಿಯನ್ನು ಸಲ್ಲಿಸುವಂಥ ಸಂದರ್ಭದಲ್ಲಿ ನಾವು ಸರ್ಕಾರವನ್ನು ಕೇಳಿಕೊಂಡಿದ್ದೇವೆ. ಇನ್ನು ಮುಂದಿನ ದಿವಸಗಳಲ್ಲಿ ಯಾವುದೇ ಒಂದು ಕುಡಿಯುವ ನೀರಿನ ಯೋಜನೆಯಾಗಲಿ, ಯಾವುದೇ ಒಳಚರಂಡಿ ವ್ಯವಸ್ಥೆಯಾಗಲೀ, ಇದರ ಬಗ್ಗೆ ಸರ್ಕಾರಕ್ಕೆ ನೂರಕ್ಕೆ ನೂರರಷ್ಟು ಹಣವನ್ನು ಭರಿಸಿ ಈ ಯೋಜನೆಗಳನ್ನು ಹಮ್ಮಿಕೊಳ್ಳಬೇಕು, ಅದರ ಖರ್ಚು ವೆಚ್ಚಗಳನ್ನು ಸರ್ಕಾರ ವಹಿಸಿಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿದೆ. ಆ ಸಮಿತಿಯ ಶಿಫಾರಸ್ಸುಗಳಿಗೆ ಸರ್ಕಾರ ಒಪ್ಪಿಗೆ ನೀಡಿದೆ. ಆದುದರಿಂದ ಸರ್ಕಾರ ಇದರ ಬಗ್ಗೆ ಗಂಭೀರವಾದ ಚಿಂತನೆ ಮಾಡಿ ಇದು ಮೂಲಭೂತವಾದಂಥ ಒಂದು ಹಕ್ಕು. ಇದು ರಾಜ್ಯದ ರಾಷ್ಟ್ರದ ಮೂಲಭೂತವಾದ ಹಕ್ಕು ಎಂದರೆ ಕುಡಿಯುವ ನೀರನ್ನು ಒದಗಿಸುವ ಜವಾಬ್ದಾರಿ ಸರ್ಕಾರಕ್ಕೆ ಇದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ನೀರಾವರಿ ಸಚಿವರು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಎಗಚಿ ಜಲಾಶಯದಿಂದ ಚಿಕ್ಕಮಗಳೂರು ಪಟ್ಟಣಕ್ಕೆ ನೀರು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ನೀರಾವರಿ ಇಲಾಖೆಯವರು ಹೇಳಿದ್ದಾರೆಂದು ಹೇಳಿದರು. ಆದರೆ ಕುಡಿಯುವ ನೀರಿನ ಯೋಜನೆ ಸಾಧ್ಯ ಇದೆ ಎಂದು ಸರ್ಕಾರಿ ಆದೇಶ ಹೊರಡಿಸಿದಂಥ ನಿದರ್ಶನಗಳು ಸಹಿತ ಇದೆ. ನಮ್ಮ ಮುಖ್ಯಮಂತ್ರಿಗಳು ಮತ್ತು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುವಂಥ ಪ್ರಯತ್ನವನ್ನು ಮಾಡುತ್ತೇನೆ. ಅಧ್ಯಕ್ಷರೇ, ನಮ್ಮ ಜಿಲ್ಲೆಯಲ್ಲಿ ಐದು ನದಿಗಳು ಹುಟ್ಟುತ್ತವೆ. ಆದರೂ ಸಹಿತ ಇವೊತ್ತು ಒಂದು ತೊಟ್ಟು ನೀರನ್ನು ಕೂಡ ನಾವು ಉಪಯೋಗಿಸಿಕೊಳ್ಳುವಂಥ ಸ್ಥಿತಿಯಲ್ಲಿಲ್ಲ. ಒಂದು ಉದಾಹರಣೆ ಹೇಳುತ್ತೇನೆ ''ಸಮುದ್ರ ಎಲ್ಲಾ ನೆಂಟಸ್ಥನ ಆದರೆ ಉಪ್ಪಿಗೆ ಬಡತನ'' ಎಂದು ಹೇಳಿದ ಹಾಗೆ ಇದೆ. ಇವೊತ್ತು ಒಂದು ನೂರು ಗ್ಯಾಲನ್ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ನಾವು ಸರ್ಕಾರದಲ್ಲಿ ಬೇಡಿಕೆ ಇಡುತ್ತಿದ್ದೇನೆ. ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಭಾರಿ ನೀರಾವರಿ ಸಚಿವರಾಗಲೀ, ಭಾರೀ ನೀರಾವರಿ ಇಲಾಖೆಯ ಅಧಿಕಾರಿಗಳಾಗಲೀ, ಕೂತು ಸಮಾಲೋಚನೆ ಮಾಡಿ, ಈ ಜಿಲ್ಲೆಯಲ್ಲಿ 43 ಯೋಜನೆಗಳಿಗೆ ಒಪ್ಪಿಗೆ ನೀಡಿದ್ದೇವೆ. ಆದರೆ ಇವೊತ್ತು ಚಿಕ್ಕಮಗಳೂರು ಪಟ್ಟಣದ ಸ್ಥಿತಿಗತಿಗಳ ಬಗ್ಗೆ ಹೇಳುವುದಾದರೆ ಇದು ಕೇವಲ ಚಿಕ್ಕಮಗಳೂರು ವಿಚಾರವಷ್ಟೇ ಅಲ್ಲ ಎಂದು ಇವೊತ್ತು ಹೇಳಬಯಸುತ್ತೇನೆ. ಇವೊತ್ತು ಕುಡಿಯುವ ನೀರಿನ ವ್ಯವಸ್ಥೆ ಪಟ್ಟಣದ ಪ್ರದೇಶದಲ್ಲಿ ಹೇಗಿದೆ ಎಂದರೆ ರಸ್ತೆ ಬದಿಯಲ್ಲಿ ಚರಂಡಿಗಳು ಇವೆ, ಅದರ ಪಕ್ಕ ನಾವು ಗುಂಡಿ ತೋಡಿಕೊಂಡು ಅಲ್ಲಿ ಏನು ಕೊಳವೆಗಳು ಹೋಗಿದ್ದಾವೆ ಆ ಕೊಳವೆಗಳಿಂದ ನೀರು

ತುಂಬುವಂಥ ವ್ಯವಸ್ಥೆ ಇದ್ದು, ಪಟ್ಟಣದ ಪ್ರದೇಶಗಳ ನಾಗರೀಕರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆದ ಕಾರಣ ಮಾನ್ಯ ಮಂತ್ರಿಗಳು ಪಟ್ಟಣದ ಪ್ರದೇಶಗಳ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ ಎಂದು ಕೇಳಿಕೊಳ್ಳುತ್ತೇನೆ. ಕುಡಿಯುವ ನೀರಿನ ಯೋಜನೆಗಳಿಗೆ ತಾವು ಆದ್ಯತೆ ಮಾಡಿ ಈ ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಕೆಲವು ಕಡೆ ಎರಡನೆಯ ಹಂತದ ಯೋಜನೆಗಳನ್ನು ಹಮ್ಮಿಕೊಂಡಂಥ ಸ್ಥಿತಿಯಲ್ಲಿ ತಾವು ಇದ್ದೀರಿ, ಆ ಯೋಜನೆಗಳನ್ನು ಪೂರ್ತಿ ಮಾಡಬೇಕು. ಮತ್ತೆ ಈ ಮಲೇರಿಯಾ ರೋಗವನ್ನು ಹಬ್ಬಿಸುವಂಥ ಯೋಜನೆ ಇವೊತ್ತು ಯಾರು ಹಾಕಿಕೊಡುತ್ತಿದ್ದಾರೆಂದರೆ ನಗರಸಭಾ, ಪುರಸಭೆಯವರು ಹಾಕಿಕೊಡುತ್ತಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ ಸ್ವಚ್ಛ ನೀರು ಸಿಗದೇ ಇರುವುದರಿಂದ ನಾಗರೀಕರು ಈ ಕಳಪೆ, ಕಲುಷಿತ ನೀರನ್ನು ಕುಡಿದು ಮಲೇರಿಯಾ ರೋಗಕ್ಕೆ ತುತ್ತಾಗುವಂಥ ಒಂದು ಸಂದರ್ಭ ಅನೇಕ ಪಟ್ಟಣದ ಪ್ರದೇಶಗಳ ವ್ಯಾಪ್ತಿಯಲ್ಲಿ ನಮಗೆ ನೋಡುವುದಕ್ಕೆ ಸಿಗುತ್ತಿದೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ವಿಶೇಷವಾಗಿ ಚಿಕ್ಕಮಗಳೂರು ಪಟ್ಟಣಕ್ಕೆ ಈ ಎಗಚಿ ನದಿಯಿಂದ ನೀರು ಕೊಡುವ ಬಗ್ಗೆ ಚಿಂತನೆ ಮಾಡಬೇಕು. ಇದು ನಮ್ಮ ದುರಾದೃಷ್ಟ, ನಮ್ಮ ಪ್ರದೇಶದಲ್ಲಿ ಅಣೆಕಟ್ಟು ಆಗುತ್ತದೆ, ನಮ್ಮ ಜಾಗದಲ್ಲಿ ನೀರು ಬರುತ್ತದೆ, ಚಿಕ್ಕಮಗಳೂರು ಜಿಲ್ಲೆಯಿಂದ, ಚಿಕ್ಕಮಗಳೂರು ಗ್ರಾಮಾಂತರ ಪ್ರದೇಶದಿಂದ ನೀರು ಬರುತ್ತದೆ. ರೈತರಿಗೆ ಅನುಕೂಲವಾಗುವಂತೆ ಒಂದು ಅಣೆಕಟ್ಟು ಎಗಚಿ ಜಲಾಶಯದಿಂದ ನೀರು ಒದಗಿಸುವ ಯೋಜನೆ ಇದೆ. ಕೇವಲ ನಮಗೆ ಬೇಕಾಗಿರುವುದು ನಾಲ್ಕು ಎಂ.ಟಿ.ಡಿ. ನೀರು. ನನಗನಿಸುತ್ತದೆ. ಅರ್ಧ ಟಿಎಂಸಿಯಷ್ಟು ಸಹಿತ ನೀರು ಚಿಕ್ಕಮಗಳೂರು ಪಟ್ಟಣಕ್ಕೆ ಜಾಸ್ತಿಯಾಗುತ್ತದೆ. ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿದರೆ ನಾವೇನು ಮಾಡಬೇಕು ಮಾನ್ಯ ಅಧ್ಯಕ್ಷರೇ? ಇನ್ನು ಯಾವ ರೀತಿಯಲ್ಲಿ ಅವರ ಮನವನ್ನು ಒಲಿಸಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ನಾನು ತಮ್ಮ ಮುಖಾಂತರ ಉಪಸ್ಥಿತರಿರುವ ನಗರಾಭಿವೃದ್ಧಿ ಸಚಿವರಲ್ಲಿ ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳವರಲ್ಲಿ ನನ್ನ ಜನತೆಯ ಪರವಾಗಿ ಇವೊತ್ತು ವಿನಂತಿ ಮಾಡಿಕೊಳ್ಳುವುದೇನೆಂದರೆ ದಯಮಾಡಿ ಚಿಕ್ಕಮಗಳೂರು ಪಟ್ಟಣಕ್ಕೆ ಯಾವ ರೀತಿಯಿಂದಲಾದರೂ ನೀರು ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಇವೊತ್ತು ರಾಜ್ಯದ ನಾನಾ ಪಟ್ಟಣಗಳು ಬಹಳ ಬೆಳೆಯುತ್ತಿರುವುದರಿಂದ ನೀರಿನ ಅಭಾವ ಬಹಳ ಇದೆ. ಆದುದರಿಂದ ಚಿಕ್ಕಮಗಳೂರಿನ ಈ ಯೋಜನೆಗೆ ಒಪ್ಪಿಗೆ ಕೊಡಬೇಕೆಂದು ನಾನು ಅಧ್ಯಕ್ಷರ ಮುಖಾಂತರವಾಗಿ ಕೇಳಿಕೊಳ್ಳುತ್ತೇನೆ.

5.00 ಪಿ.ಎಂ.

ತಮಗೇ ತಿಳಿದಿರುವ ಹಾಗೆ ಪೌರ ಕಾರ್ಮಿಕರು ಇಂದು ಮುಷ್ಕರ ಹೂಡಿದ್ದು ಅವರಿಗೆ ನಮ್ಮ ಮುಖ್ಯಮಂತ್ರಿಗಳು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಾನು ಇದರ ಬಗ್ಗೆ ಒಂದು ಸಲಹೆಯನ್ನು ಉತ್ಸಾಹೀ ಮಂತ್ರಿಗಳಾದ ಶ್ರೀ ಬಚ್ಚೇಗೌಡರಿಗೆ

ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಪೌರ ಕಾರ್ಮಿಕರ ಸಂಖ್ಯೆ ಬಗ್ಗೆ ಬಹಳ ಹಿಂದೆಯೇ ಸರ್ಕಾರದವರು ಅನುಮತಿ ಕೊಟ್ಟು ಇಂಥಿಂಥ ಪುರಸಭೆಗಳಿಗೆ ಜನರನ್ನು ನೇಮಕ ಮಾಡಿಕೊಳ್ಳಬೇಕೆನ್ನುವ ಸೂಚನೆಯನ್ನು ಕೊಟ್ಟಿದ್ದರು. ಆದರೆ ಅವರ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಇದುವರೆಗೆ ಸಾಧ್ಯವಾಗಿಲ್ಲ. ಆದರೆ ಎಷ್ಟು ಜನರು ನಿವೃತ್ತಿ ಹೊಂದಿದ್ದಾರೆ ಅಂಥ ಖಾಲಿ ಹುದ್ದೆಗಳನ್ನಾದರೂ ಶೀಘ್ರವಾಗಿ ತುಂಬಿದರೆ ಪಟ್ಟಣ ಪ್ರದೇಶಗಳಲ್ಲಿ ಉತ್ತಮವಾದ ಕೆಲಸಗಳನ್ನು ಮಾಡಿಸಬಹುದು. ಇನ್ನು ನಗರಸಭೆ ಮತ್ತು ಪುರಸಭೆಗಳ ಆರ್ಥಿಕ ಸ್ಥಿತಿಯ ಬಗ್ಗೆ ಹೇಳಬೇಕೆಂದರೆ ಆಕ್ಟ್ರಾಯ್‌ನ್ನು ಈಗ ನಿಲ್ಲಿಸಿರುವುದರಿಂದ ಇವುಗಳ ಆರ್ಥಿಕ ಸ್ಥಿತಿ ಬಹಳ ದುರ್ಬಲವಾಗಿದೆ. ಆಕ್ಟ್ರಾಯ್ ಹೋದ ನಂತರ ವಹಿವಾಟಿನ ತೆರಿಗೆಯನ್ನು ಶೇಕಡ 2ರಷ್ಟು ವಿಧಿಸಿದರೆ, ಇದು ಎಷ್ಟು ಎನ್ನುವುದರ ಬಗ್ಗೆ ತಾವು ಒಂದು ನಿರ್ಣಯವನ್ನು ಮಾಡಿದಿರಿ, ಶೇಕಡ 15ರಷ್ಟು, ವರ್ಷಕ್ಕೊಮ್ಮೆ ನಾವು ಏರಿಸುತ್ತೇವೆಂದು ಹೇಳಿದಿರಿ. ಇದನ್ನು ಶೇಕಡ 15ರಿಂದ 20ರಷ್ಟು ತಾವು ಏರಿಸಿದರೆ ಮತ್ತು ಆ ನಿಟ್ಟಿನಲ್ಲಿ ತಾವು ಪ್ರಯತ್ನ ಮಾಡಿದರೆ ಅದರಿಂದ ಪುರಸಭೆ ಮತ್ತು ನಗರಸಭೆಗಳಿಗೆ ಸ್ವಲ್ಪ ಶಕ್ತಿ ತುಂಬಿದ ರೀತಿ ಆಗುತ್ತದೆ. ಇದರ ಜೊತೆಗೆ ಈ 15 ವರ್ಷಗಳ ಹಿಂದೆ, ವಾಹನ ತೆರಿಗೆಯಿಂದ ಬರುವಂಥ ಆದಾಯದಲ್ಲಿ ಪುರಸಭೆ ಮತ್ತು ನಗರಸಭೆಗಳಿಗೆ ಕೇವಲ ಶೇಕಡ 1ರಷ್ಟು ಒದಗಿಸಿಕೊಡುತ್ತಿದ್ದೀರಿ. ನಾವು ವಿಷಯ ಸಮಿತಿಯಲ್ಲಿ ನಿರ್ಣಯ ಮಾಡಿದ ಹಾಗೆ ಇದನ್ನು ಶೇಕಡ 8ರಿಂದ 10ಕ್ಕೆ ಹೆಚ್ಚಿಸಿ ನಗರಸಭೆ ಮತ್ತು ಪುರಸಭೆಗಳಿಗೆ ಒದಗಿಸಿಕೊಡಬೇಕೆಂದು ನಾನು ಹೇಳುತ್ತೇನೆ. ಇನ್ನೊಂದು ಮುಖ್ಯವಾದ ವಿಷಯವೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಈ ನಮ್ಮ ಜಿಲ್ಲಾ ಪಂಚಾಯತ್ ಕಾಯಿದೆಯಲ್ಲಿ ಯಾವ ಗ್ರಾಮದಲ್ಲಿ ಯಾವ ಆಸ್ತಿಯನ್ನು ನೊಂದಾಯಿಸುತ್ತಾರೋ, ಸ್ಟಾಂಪ್ ಶುಲ್ಕ ನೇರವಾಗಿ ಆ ಗ್ರಾಮ ಪಂಚಾಯತಿಗೆ ಅಥವಾ ತಾಲ್ಲೂಕು ಪಂಚಾಯತಿಗೆ ಹೋಗುವಂತೆ ಸರ್ಕಾರ ಆದೇಶ ಹೊರಡಿಸಿದೆ. ಪುರಸಭೆ ಮತ್ತು ನಗರಸಭೆಗಳಲ್ಲಿಯೂ ಸಹ ಈ ನಗರಸಭಾ ವ್ಯಾಪ್ತಿಯಲ್ಲಿ ನೊಂದಾಯಿಸುವಂಥ ಆಸ್ತಿಯ ಮೇಲೆ ಬರುವಂಥ ಸ್ಟಾಂಪ್ ಶುಲ್ಕವನ್ನು ನೇರವಾಗಿ ನಗರಸಭೆ ಕೊಡುವಂತೆ ಸರ್ಕಾರ ನಿರ್ಣಯ ಮಾಡಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಪೌರ ಕಾರ್ಮಿಕರ ಏಳಿಗೆ ಬಗ್ಗೆ ನಮ್ಮದೇ ಆದಂಥ ಸರ್ಕಾರ ಹಿಂದಿನ ಬಜೆಟ್‌ನಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿತ್ತು. ಪೌರ ಕಾರ್ಮಿಕರಿಗೆ ಪುಕ್ಕಟೆಯಾಗಿ ನಿವೇಶನವನ್ನು ಒದಗಿಸಿಕೊಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಂದು ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಈ ಹೇಳಿಕೆಯನ್ನು ನಮ್ಮ ಅರ್ಥ ಸಚಿವರಾದ ಸಿದ್ಧರಾಮಯ್ಯನವರು ಹೇಳಿದ್ದಾರೆ. ಆದರೆ ಈ ಕಾರ್ಯಕ್ರಮ ಯಶಸ್ವಿಯಾಗಿಲ್ಲ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕೆಂದು ಹೇಳುತ್ತಿದ್ದೇನೆ. ಇನ್ನು ಮನೆಗಂದಾಯ ನಿಗಧಿಪಡಿಸುವುದರ ಸಂಬಂಧವಾಗಿ ಈಗಾಗಲೇ ಶಿವಮೊಗ್ಗ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ನಾನು ಮಂತ್ರಿಗಳಲ್ಲಿ ಕೇಳುವುದೇನೆಂದರೆ ಈ ಅಸೆಸ್ಸಿಂಗ್ ಆಫೀಸರ್‌ಗಳನ್ನು ನೇಮಿಸುವಂಥ

ಸಂದರ್ಭದಲ್ಲಿ ಮೇಲ್ವಿಚಾರಕರನ್ನು ನೇಮಿಸುತ್ತಿಲ್ಲ. ಇಲ್ಲಿ ಒನ್ ಮ್ಯಾನ್ ಶೋ ರೀತಿಯಲ್ಲಿ ಆಗಿಬಿಡುತ್ತದೆ, ಈ ಅಸೆಸ್ಸಿಂಗ್ ಆಫೀಸರ್ ಒಂದು ಬೀದಿಗೆ ಹೋಗಿ ಅಲ್ಲಿ ಒಂದು ಮನೆಯಲ್ಲಿದ್ದವನಿಗೆ ಹೇಳುತ್ತಾನೆ, ನಿನ್ನ ಮನೆ ಮೇಲೆ 1,600-00 ಟ್ಯಾಕ್ಸ್ ವಿಧಿಸಬೇಕಾಗುತ್ತದೆ, ನೀನು ನನ್ನನ್ನು ನನ್ನ ಕೊಠಡಿಯಲ್ಲಿ ಬಂದು ನೋಡು ಎಂದು ಹೇಳಿಬಿಡುತ್ತಾನೆ. ಆದ್ದರಿಂದ ಅಸೆಸ್ಸಿಂಗ್ ಆಫೀಸರ್‌ಗಳನ್ನು ನೇಮಿಸುವಾಗ ಇವರನ್ನು ಮೇಲ್ವಿಚಾರಣೆ ಮಾಡಲು ಮೇಲ್ವಿಚಾರಕರನ್ನು ನೇಮಕ ಮಾಡಿದ್ದೇ ಆದರೆ ಈ ನ್ಯೂನತೆಗಳು ಆಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಈ ಕ್ಷೇತ್ರಗಳ ವಿಂಗಡಣೆ ಆಗಿ 6 ತಿಂಗಳುಗಳಾಗಿದೆ, ನಗರಸಭೆ ಮತ್ತು ಪುರಸಭೆ ಚುನಾವಣೆಗಳು ನಡೆದಿವೆ, ಅನೇಕ ಗ್ರಾಮಾಂತರ ಪ್ರದೇಶಗಳನ್ನು ನಗರಸಭೆ ಮತ್ತು ಪುರಸಭೆ ವ್ಯಾಪ್ತಿಯೊಳಗೆ ಸೇರಿಸಿಕೊಳ್ಳಲಾಗಿದೆ. ಆ ಭಾಗದಿಂದ ಎರಡು ರೀತಿಯ ಚುನಾಯಿತ ಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ. ಒಂದು ಕಡೆ ನಗರಸಭೆಗೆ ಒಬ್ಬ ಆಯ್ಕೆಯಾಗಿರುವಂಥ ಸಂದರ್ಭದಲ್ಲಿ ಇನ್ನೊಂದು ಕಡೆ ಗ್ರಾಮ ಪಂಚಾಯತಿ ಸದಸ್ಯರು ಸಹ ಆ ಭಾಗದಿಂದ ಆಯ್ಕೆಯಾಗಿದ್ದಾರೆ. ಜಿಲ್ಲಾ ಪಂಚಾಯತಿಯ ಸದಸ್ಯರು ಸಹ ಆ ಭಾಗದಿಂದ ಆಯ್ಕೆಯಾಗಿದ್ದಾರೆ. ಅವರ ಅಸ್ತಿತ್ವದ ಬಗ್ಗೆ ಸರ್ಕಾರ ಇಲ್ಲಿಯವರೆವಿಗೆ ಯಾವುದೇ ರೀತಿಯ ಕಾನೂನನ್ನಾಗಲೀ ಅಥವಾ ಆದೇಶವನ್ನಾಗಲೀ ಇವೊತ್ತಿನವರೆಗೆ ಸರ್ಕಾರ ಅಳವಡಿಸಿರುವುದಿಲ್ಲ. ಆ ನಿಟ್ಟಿನಲ್ಲಿ ಈ ಸದಸ್ಯರ ಅಸ್ತಿತ್ವ ಏನು ಎನ್ನುವ ಪ್ರಶ್ನೆ ಈ ಸರ್ಕಾರದ ಮುಂದೆ ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಮಾಡುತ್ತಾರೆ ಎಂದು ನನ್ನ ಗಮನಕ್ಕೆ ಮತ್ತು ಸದನದ ಗಮನಕ್ಕೆ ತರಬೇಕಾಗುತ್ತದೆ.

ಈಗ ಸರ್ಕಾರ ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ, ನಗರ ಪ್ರದೇಶಗಳಲ್ಲಿ ಅಕ್ರಮವಾಗಿ ನಿರ್ಮಿಸಿರುವಂಥ ಮನೆಗಳನ್ನು ಸಕ್ರಮಗೊಳಿಸುತ್ತೇವೆ, ಇದಕ್ಕಾಗಿ ನಿಗಧಿಪಡಿಸಿರುವ ಶುಲ್ಕವನ್ನು ನಿಗಧಿಪಡಿಸಿದ ದಿನಾಂಕದೊಳಗೆ ಕೇವಲ ಬೆಂಗಳೂರು ಪಟ್ಟಣದಲ್ಲಿ ಅನೇಕ ಕಡೆ ಮುಖ್ಯಮಂತ್ರಿಗಳೇ ಸ್ವತಃ ಈ ಖಾತೆ ಬದಲಾವಣೆ ಮಾಡಿ ಅವರಿಗೆ ಹಕ್ಕು ಪತ್ರ ನೀಡುವಂತೆ ಪ್ರಚಾರ ಮಾಡಿದ್ದಾರೆ. ಬಹಿರಂಗವಾಗಿ ಇಡೀ ರಾಜ್ಯದಲ್ಲಿ ಇದರ ಬಗ್ಗೆ ಪ್ರಚಾರವನ್ನು ಕೊಟ್ಟಿದ್ದಾರೆ. ನಗರಸಭಾ ಮತ್ತು ಪುರಸಭಾ ವ್ಯಾಪ್ತಿಯಲ್ಲಿ ಈ ಕಡುಬಡವರು ಕಂದಾಯ ಜಮೀನುಗಳಲ್ಲಿ ಮನೆಗಳನ್ನು ಅಕ್ರಮವಾಗಿ ಕಟ್ಟಿರುವಂಥದ್ದರ ಬಗ್ಗೆ ಸಕ್ರಮಗೊಳಿಸುವಂತೆ ಸಮಿತಿ ರಚನೆ ಆದರೂ ಸಹ ಯಾವ ಪಟ್ಟಣದ ಪ್ರದೇಶದಲ್ಲಿಯೂ ಸಹ ಇವೊತ್ತಿನವರೆಗೆ ಆ ಸಭೆ ನಡೆದಿರುವುದಿಲ್ಲ. ಆ ಕಡು ಬಡವರಿಗೆ ಇದರಿಂದ ಯಾವುದೇ ರೀತಿಯ ಲಾಭವಾಗಿರುವುದಿಲ್ಲ. ಇದರ ಬಗ್ಗೆ ಸರ್ಕಾರ ಅವರೇ ಹೇಳಿರುವಂತೆ ಅವರೇ ಆಡಿರುವ ಮಾತಿನಂತೆ ನಡೆಯುವಂತೆ ತಮ್ಮ ಮುಖಾಂತರವಾಗಿ ಅವರಲ್ಲಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ನಾನು ಹೇಳುವಂಥ ವಿಚಾರಗಳು ಇನ್ನೂ ಬಹಳಷ್ಟು ಇದೆ. ಆದರೆ ಸಮಯಾವಕಾಶ ತಾವು ಹೆಚ್ಚು ಕೊಡುವುದಿಲ್ಲವಾದ್ದರಿಂದ ಮತ್ತು ಇನ್ನೂ ನನ್ನ ಹಲವಾರು ಮಿತ್ರರು

ಮಾತನಾಡಬೇಕಾಗಿರುವುದರಿಂದ ಮುಖ್ಯವಾದ ಒಂದು ವಿಚಾರವನ್ನು ಮಾತ್ರ ಹೇಳಲಿಚ್ಛಿಸುತ್ತೇನೆ. ಇವೊತ್ತು ನಗರಸಭೆ ಮತ್ತು ಪುರಸಭೆಗಳಿಗೆ ಟ್ಯಾಕ್ಸಿನ ಮುಖಾಂತರ ಬರಬೇಕಾಗಿರುವಂಥ ಬಾಕಿ ಹಾಗೆ ಇದೆ. ಇದಕ್ಕೆ ಸರ್ಕಾರದವರು ಬಹಳ ಆರ್ಥಿಕವಾಗಿ ದುರ್ಬಲವಾಗಿರುವ ನಗರಸಭೆ ಮತ್ತು ಪುರಸಭೆಗಳ ಬಗ್ಗೆ ನಾವು ಚಿಂತನೆ ಮಾಡುವವರು ಎಂದು ಹೇಳುತ್ತಾರೆ. ಕೋಟ್ಯಾಂತರ ರೂ.ಗಳ ಹಣ ಸಾರ್ವಜನಿಕರಿಂದ ನಗರಸಭೆ ಮತು ಪುರಸಭೆಗಳಿಗೆ ಬರುವಂತೆ ಬಾಕಿ ಹಣ ಅದು 1 ರೂ. ಟ್ಯಾಕ್ಸ್ ಆಗಿರಬಹುದು ಅಥವಾ ಕುಡಿಯುವ ನೀರಿನ ಮೇಲೆ ಹಾಕಿದ ಕರ ಇರಬಹುದು, ಕೋಟ್ಯಾಂತರ ರೂ.ಗಳು ಬಾಕಿ ಉಳಿದಿದೆ. ಇದರ ಬಗ್ಗೆ ದಯಮಾಡಿ ಸರ್ಕಾರ ಯಾವ ನಿರ್ದೇಶನ ನೀಡುತ್ತದೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಈ ಬೇಡಿಕೆ ಇಟ್ಟು ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಯು.ಆರ್.ಸಭಾಪತಿ (ಉಡುಪಿ):- ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದ ವಿವಿಧ ಇಲಾಖೆಗಳ ಬೇಡಿಕೆ ಬಗ್ಗೆ ಚರ್ಚಿಸುವುದಾದರೆ ಯಾವು ಇಲಾಖೆಯು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲವೆಂದು ನನ್ನ ಪ್ರಮುಖವಾದ ಆರೋಪ. ಆಡಳಿತದ ಲೋಪದೋಷಗಳು, ವಿವಿಧ ಇಲಾಖೆಯಲ್ಲಿ ಭ್ರಷ್ಟಾಚಾರದ ಹಗರಣಗಳು, ಅಧಿಕಾರಿಗ ಮತ್ತು ಮಂತ್ರಿಗಳ ನಿರ್ಲಕ್ಷ್ಯತನ, ಇವೆಲ್ಲವನ್ನೂ ಕೂಲಂಕಷವಾಗಿ ನಾವು ಪರಾಂಭರಿಸುವುದಾದರೆ ಹಿಂದಿನ ಎಲ್ಲಾ ಸರ್ಕಾರಗಳಿಗಿಂತ ಈ ಸರ್ಕಾರ ಬಹಳ ಮುಂದಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ:- ಅಭಿವೃದ್ಧಿಯಲ್ಲಿ ಮುಂದಿದೆ.

ಶ್ರೀ ಯು.ಆರ್.ಸಭಾಪತಿ:- ಅಭಿವೃದ್ಧಿಯಲ್ಲಿ ಅಲ್ಲ ನಾನು ಹೇಳಿದ್ದುದು. ನಾನು ಹೇಳಿದ್ದುದು ಆಡಳಿತದ ಲೋಪದೋಷಗಳಲ್ಲಿ, ವಿವಿಧ ಇಲಾಖೆಗಳಲ್ಲಿ ಭ್ರಷ್ಟಾಚಾರದ ಹಗರಣಗಳಲ್ಲಿ, ಅಧಿಕಾರಿಗಳು ಮತ್ತು ಮಂತ್ರಿಗಳ ನಿರ್ಲಕ್ಷ್ಯತನದಲ್ಲಿ ಹಿಂದಿನ ಎಲ್ಲಾ ಸರ್ಕಾರಗಳಿಗಿಂತ ಈ ಸರ್ಕಾರ ಮುಂದಿದೆ ಎಂದು ಹೇಳಿದೆ.

ಒಬ್ಬ ಮಾನ್ಯ ಸದಸ್ಯರು:- ಬಂಗಾರಪ್ಪನವರ ಕಾಲಕ್ಕಿಂತ ಹೆಚ್ಚಿನ ಅಭಿವೃದ್ಧಿ ಆಗಿದೆ. ನೀವೇ ಯೋಚನೆ ಮಾಡಿ.

ಶ್ರೀ ಯು.ಆರ್.ಸಭಾಪತಿ:- ಅದನ್ನೇ ನಾನು ಯೋಚನೆ ಮಾಡಿ ಹೇಳುತ್ತಿದ್ದೇನೆ. ಒಂದೊಂದಾಗಿ ಹಗರಣವನ್ನು ಹೇಳುತ್ತೇನೆ, ಆಗ ನೀವು ಉತ್ತರಿಸಿ. ನೀವು ಏನು ಮಾಡಿದ್ದೀರಿ ಎಂಬುದನ್ನು ಹೇಳುತ್ತೇನೆ. ಕಳೆದ ಅಧಿವೇಶನದಲ್ಲಿ ನಾವು ಏನು ಚರ್ಚಿಸಿದ್ದೇವೆ, ನಿಮ್ಮ ಇಲಾಖಾವಾರು ವಿಷಯ ಸಮಿತಿಯಲ್ಲಿ ನಾವು ಏನು ಕಳೆದ ವರ್ಷದಿಂದಲೂ ಚರ್ಚೆ ಮಾಡಿಕೊಂಡು ಬಂದಿದ್ದೇವೋ ಇದರ ಬಗ್ಗೆ ಸ್ವಲ್ಪವಾದರೂ ಕೂಡ ಕಾಳಜಿಯನ್ನಾಗಲೀ ಸ್ವಲ್ಪವಾದರೂ ಕೂಡ ಬದ್ಧತೆಯನ್ನಾಗಲೀ ಈ ಸರ್ಕಾರವಾಗಲೀ, ಮಂತ್ರಿಗಳಾಗಲೀ, ಅಧಿಕಾರಿಗಳಾಗಲೀ ವಹಿಸಿದ್ದಾರೆ ಎನ್ನುವುದಾದರೆ

ಇದಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡುವಾಗ ಸ್ಪಷ್ಟಪಡಿಸಬೇಕು. ಅಷ್ಟೇ ಅಲ್ಲ, ಆಡಳಿತದ ಅಧಿಕಾರ ಹೊತ್ತ ಮಂತ್ರಿಗಳ ನಿರ್ಲಕ್ಷ್ಯತನದಿಂದ ಅಧಿಕಾರಿಗಳೂ ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿರ್ಲಕ್ಷ್ಯತನ ತೋರಿಸಿಬಿಟ್ಟಿದ್ದಾರೆ. ಇವರ ಭ್ರಷ್ಟಾಚಾರದ ಹಗರಣಗಳ ಬಗ್ಗೆ ನಾವು ಎಷ್ಟೋ ಬಯಲಿಗೆ ತಂದಿದ್ದೇವೆ. ಆದರೆ ಅದಕ್ಕೆ ಉತ್ತರ ಸಿಗಲಿಲ್ಲ. ಕಳೆದ ಸಲ ತೋಟಗಾರಿಕಾ ಇಲಾಖೆಗೆ ಸಂಬಂಧಪಟ್ಟಂತಹ ಒಂದು ದೊಡ್ಡ ಹಗರಣವನ್ನು ನಾನು ಹೊರಗೆ ತಂದಿದ್ದೆ. ಅರಿಯರ್ಸ್ ಸ್ಕ್ಯಾಂಡಲ್, ಬಡ್ತಿ ಕೊಡುವಂತಹ ವಿಶೇಷವಾದಂತಹ, ವಿಚಿತ್ರವಾದಂತಹ ಒಂದು ಕೋಟ್ಯಾಂತರ ರೂಪಾಯಿ ಹಗರಣವನ್ನು ನಾನು ಬಯಲಿಗೆ ತಂದಿದ್ದೆ. ಏನು ಮಾಡಿದಿರಿ? ಅದನ್ನು ಸಂಪೂರ್ಣವಾಗಿ ಮುಚ್ಚಿಬಿಟ್ಟಿರಿ. ಅದರ ಬಗ್ಗೆ ಒಂದು ತನಿಖೆಯಾಗಲಿ ಅದರ ವರದಿಯನ್ನಾಗಲಿ ಈ ಸದನದಲ್ಲಿ ಇಡುತ್ತಾರೆ ಎನ್ನುವ ನಂಬಿಕೆ ನನ್ನಲ್ಲಿ ಇಲ್ಲ. ಏತಕ್ಕೆ ಇಟ್ಟಿಲ್ಲಾ, ಕಾರಣ ಇಷ್ಟೇ ಅಧಿಕಾರಿಗಳು, ಆಡಳಿತದರು ಇಬ್ಬರು ಹೊಂದಾಣಿಕೆ ಮಾಡಿಕೊಂಡಿದ್ದಾರೆ ಎನ್ನುವ ಸಂಶಯ ನನ್ನಲ್ಲಿ ವ್ಯಕ್ತವಾಗುತ್ತಿದೆ. ಇತ್ತೀಚೆಗೆ ಎಲ್ಲಾ ಕಡೆಯಲ್ಲಿ ಬಲಾತ್ಕಾರ, ಚೌಕಾಸಿ, ಉದಾಹರಣೆಗೆ ಅರಾಜಕತೆ ಎನ್ನುವುದನ್ನು ಏಕೆ ನಾನು ಸ್ಪಷ್ಟವಾಗಿ ಹೇಳುತ್ತೇನೆ ಎಂದರೆ ಎಲ್ಲೆಂದರಲ್ಲಿ ಆಕ್ರಮಣ ಮಾಡಿಕೊಂಡು ಕುಳಿತುಕೊಳ್ಳುವುದು. ಜಮೀನಿನಲ್ಲಿ ಹೋಗುವುದು ಆಕ್ರಮಣ ಮಾಡಿ ಕುಳಿತುಕೊಳ್ಳುವುದು. ಕಂದಾಯ ಇಲಾಖೆಯವರ ಹತ್ತಿರ ಕೇಳೋಣವೆ ಕಂದಾಯ ಇಲಾಖೆಯವರು ನಗರಾಭಿವೃದ್ಧಿ ಇಲಾಖೆಯವರ ಹತ್ತಿರ ಕೇಳಿ ಅದು ಮುನಿಸಿಪಾಲಿಟಿದು ಎಂದು ಹೇಳುತ್ತಾರೆ. ಮುನಿಸಿಪಾಲಿಟಿಯವರ ಹತ್ತಿರ ಕೇಳಿದರೆ, ಇಲ್ಲ ಅದನ್ನು ಎವಿಕ್ಟ್ ಮಾಡುವಂತಹ ಅಧಿಕಾರ ನಮ್ಮಲ್ಲಿ ಇಲ್ಲ. ಅದನ್ನು ಕಂದಾಯ ಇಲಾಖೆಯವರೇ ಮಾಡಬೇಕು ಎಂದು ಹೇಳುತ್ತಾರೆ. ನ್ಯಾಷನಲ್ ಹೈವೇ ನೋಡಿ, ಪಿ.ಡಬ್ಲ್ಯೂ.ಡಿ ರೋಡ್ ನೋಡಿ ಅಥವಾ ಜಿಲ್ಲಾ ಪಂಚಾಯತ್ ರೋಡ್ ನೋಡಿ ಅದರ ಪಕ್ಕದ ರೋಡ್ ಮಾರ್ಜಿನ್ ಎಂದು ಬಿಟ್ಟಿದ್ದಾರಲ್ಲ ಅದನ್ನೆಲ್ಲಾ ಆಕ್ರಮಣ ಮಾಡಿಕೊಂಡು ಕುಳಿತುಕೊಂಡಿದ್ದಾರೆ. ಇಲ್ಲಿ ಬಿ.ಡಿ.ಎ.ದ ಒಂದು ಬಹಳ ದೊಡ್ಡ ಹಗರಣವನ್ನು ಹೇಳುತ್ತೇನೆ, 1988ರಲ್ಲಿ ಸಾರಕ್ಕಿ 4ನೇ ಫೇಸ್‌ನಲ್ಲಿ ಡಾಲರ್ ಯೋಜನೆಯಲ್ಲಿ ಶಾಸಕರಿಗೆ ನಿವೇಶನವನ್ನು ಅಲಾಟ್ ಮಾಡಿದ್ದು ಮಂಜೂರಾಗಿದೆ. ಅದರಲ್ಲಿ 11 ಜನ ಮಾಜಿ ಶಾಸಕರಲ್ಲಿ ಒಬ್ಬರು ಹಾಲಿ ಶಾಸಕರು, ಒಬ್ಬರು ಮಂತ್ರಿಗಳು ಇದ್ದಾರೆ, ಅವರು ಉದಾಸಿಯವರು. ಅವರಿಗೂ ಒಂದು ನಿವೇಶನ ಅಲಾಟ್ ಆಗಿದೆ. ಇಲ್ಲಿ ಇವರು ಮಂತ್ರಿಗಳಾಗಿದ್ದರೂ ಕೂಡ ಇವತ್ತು ಆ ನಿವೇಶನದ ಒಳಗೆ ಹೋಗುವುದಕ್ಕೆ ಇವರಿಂದ ಆಗಲಿಲ್ಲ. ಕಾರಣ ಏಕೆ ಎಂದರೆ ಅಲ್ಲಿ ಒಬ್ಬ ಇದ್ದಾನೆ, ಇವರಿಗೆ ಮಿತ್ರ, ಇನ್ನೊಬ್ಬ ಮಂತ್ರಿಗಳ ಶಿಷ್ಯರ ಒಬ್ಬರ ಪ್ರೇರೇಪಣೆಯಿಂದ ಇದು ನನ್ನ ಸ್ಥಳ ಎಂದು ಹೇಳಿಕೊಂಡು ಕುಳಿತುಕೊಳ್ಳುವಂತಹ ಒಂದು ಪರಿಸ್ಥಿತಿ ಇದೆ. ಉದಾಸಿಯವರು ಒಬ್ಬ ಲೋಕೋಪಯೋಗಿ ಸಚಿರವಾಗಿದ್ದುಕೊಂಡು ಒಬ್ಬರು ಕ್ಯಾಬಿನೇಟ್ ಮಂತ್ರಿಗಳಿಗೆ ಅಲಾಟ್ ಆದಂತಹ ನಿವೇಶನದೊಳಗೆ ಅವರಿಗೆ ಪ್ರವೇಶ ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಇವತ್ತಿನ ಸರ್ಕಾರದ ಆಡಳಿತ ಎಲ್ಲಿಯವರೆಗೆ ಬಂದಿದೆ? ಈ ಮಂತ್ರಿಗಳವರಿಗೆ

ಈ ಅಧಿಕಾರಿಗಳ ಮೇಲೆ ಏನಾದರೂ ಹಿಡಿತವಿದೆಯೇ? ಇನ್ನು ಪೊಲೀಸ್‌ನವರ ಹತ್ತಿರ ಕೇಳುವುದಕ್ಕೆ ಹೋದರೆ ಇದರಲ್ಲಿ ಪ್ರಭಾವಿ ರಾಜಕೀಯ ಹಿನ್ನೆಲೆಯಿದೆ, ನಾವು ಕೈಹಾಕುವುದಕ್ಕೆ ಆಗುವುದಿಲ್ಲ ಎಂದು ಅವರು ಹೇಳುತ್ತಾರೆ. ಕೋರ್ಟ್ ಆದೇಶ ಮಾಡಿ ಎವಿಕ್ಟ್ ಮಾಡಿ ಎಂದು ಹೇಳಿದರೂ ಕೂಡ ಆ ಪೊಲೀಸ್‌ನವರು ಹತ್ತಿರ ಬರುವುದಿಲ್ಲ. ಹಾಗಾದರೆ ಇದರ ಅರ್ಥ ಏನು ಸ್ವಾಮಿ? ಇದಕ್ಕೆ ಬಿ.ಡಿ.ಎ.ನವರು ರಸ್ತೆ, ಒಳಚರಂಡಿ, ನೀರು ಸರಬರಾಜು ವ್ಯವಸ್ಥೆ ಹೀಗೆ ಮೂಲಭೂತವಾದ ವ್ಯವಸ್ತೆ ಮಾಡಿದ್ದರೂ ಕೂಡ ಇವತ್ತು ಆ 11 ಜನರಿಗೆ ಆ ಪ್ರದೇಶದ ಒಳಗೆ ಹೋಗುವುದಕ್ಕೆ ಆಗಿಲ್ಲ. ಬಿ.ಡಿ.ಎ.ನವರು ಕೊಟ್ಟಿರತಕ್ಕಂಥ ಈ ರೀತಿಯ ಒಂದು ಕೋಟ್ಯಾಂತರ ರೂಪಾಯಿಯ ಒಂದು ನಿವೇಶನದೊಳಗೆ ಶಾಸಕರಿಗೆ, ಮಂತ್ರಿಗಳಿಗೆ ಹೋಗುವುದಕ್ಕೆ ಆಗುವುದಿಲ್ಲ ಎಂದರೆ ಇದರ ಹಿನ್ನೆಲೆಯಲ್ಲಿ ಯಾರಿದ್ದಾರೆ? ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳನ್ನು ನಿಮ್ಮನ್ನು ಕೇಳುತ್ತಿದ್ದೇನೆ. ಇವತ್ತು ನಿಮ್ಮ ಅಧಿಕಾರಾವಧಿಯಲ್ಲಿ, ನಿಮ್ಮ ಒಬ್ಬ ಕ್ಯಾಬಿನೆಟ್ ಮಂತ್ರಿಗೆ ಅಲಾಟ್ ಆದಂತಹ ನಿವೇಶನದೊಳಗೆ ಹೋಗುವುದಕ್ಕೆ ಆಗದಂಥ ಪರಿಸ್ಥಿತಿ ನಿರ್ಮಾಣ ಆಗಿರಬೇಕಾದರೆ, ಅಧಿಕಾರಿಗಳು ಯಾವ ಇನ್‌ಫ್ಲೂಯೆನ್ಸ್ ಪಡೆದುಕೊಂಡಿದ್ದಾರೆ? ನಿಮ್ಮ ಪೊಲೀಸ್ ಅಧಿಕಾರಿಗಳಾಗಲಿ, ನಿಮ್ಮ ಕಂದಾಯ ಇಲಾಖೆಯವರಾಗಿಲಿ, ಬಿಡಿಎನವರು ನಿಮ್ಮ ಒಟ್ಟಿಗೆ ಇದ್ದಾರೋ ಅಥವಾ ಕೇಂದ್ರ ಸರ್ಕಾರದ ಅಧೀನದಲ್ಲಿ ಇದ್ದಾರೋ ಎನ್ನುವುದನ್ನು ತಾವು ಸ್ಪಷ್ಟಪಡಿಸಬೇಕು. ಇವತ್ತು ಏಕೆ ನಾನು ಇದನ್ನು ಹೇಳುತ್ತಿದ್ದೇನೆ, ಪರ್ಟಿಕ್ಯುಲರ್ ಕೇಸ್ ಬಗ್ಗೆ ಹೇಳುತ್ತಿದ್ದೇನೆ, 1988ರಲ್ಲಿ ಸಾರಕ್ಕಿ 4ನೇ ಫೇಸ್‌ನಲ್ಲಿ 11 ಜನ ಮಾಜಿ ಶಾಸಕರಿಗೆ ಅಲಾಟ್‌ಮೆಂಟ್ ಆಗಿದೆ. ಅದು ಸರ್ವೇ ನಂಬರ್ ಒಂದು, ನಾನು ಅದನ್ನು ಕೊಡುತ್ತೇನೆ. ಇದರಲ್ಲಿ ಸುಬ್ರಮಣ್ಯ ಶೆಟ್ಟಿ, ದಿವಂಗತ ಭಾಸ್ಕರ ಶೆಟ್ಟಿಯವರಿಗೆ ಅಲಾಟ್ ಆದದ್ದು, ಇನ್ನೊಂದು ಎ.ಎನ್.ದೇಸಾಯಿ, ಮಿ:ಎನ್.ಬಿ.ತಿಪ್ಪೇರುದ್ರಪ್ಪ, ಶ್ರೀ ಹೆಚ್.ಪುಟ್ಟದಾಸ್, ಶ್ರೀ ಸಿ.ಎಂ.ಉದಾಸಿ, ಶ್ರೀ ಟಿ.ಚೌಡಯ್ಯ, ಶ್ರೀ ಎಲ್.ಎನ್.ನಾಯಕ್, ಶ್ರೀ ಎಂ.ವಿ.ಕಾಳೇಗೌಡ, ಶ್ರೀ ಎ.ವಿ.ದೇಸಾಯಿ, ಶ್ರೀ ಜಗನ್ನಾಥ ರೈ ಚಂದ್ರಿಕೆ, ಶ್ರೀ ಎಫ್.ಎ.ಕೊಪ್ಪದ್, ಶ್ರೀ ವೀರಪ್ಪ ಮಾರ್ ಎ.ಪಾಟೀಲ್ ಈ 12 ಜನರಿಗೆ ಅಲಾಟ್‌ಮೆಂಟ್ ಆಗಿದೆ. ಇದು ಆದದ್ದು 1988ರಲ್ಲಿ. ನಂತರ ಬಿ.ಡಿ.ಎ.ನವರು ಇದಕ್ಕೆ ಮೂಲಭೂತ ಸೌಕರ್ಯಗಳನ್ನೆಲ್ಲಾ ಒದಗಿಸಿದ್ದಾರೆ. ಒದಗಿಸಿದಾದಮೇಲೆ 1996ಕ್ಕೆ ಇವರೆಲ್ಲಾ ನಿವೇಶನದೊಳಗೆ ಹೊಕ್ಕಬೇಕು ಎಂದರೆ, ಅದಕ್ಕೇ ಆವರಣ ಗೋಡೆ ಹಾಕಬೇಕು ಎಂದು ಹೋದರೆ ಸರ್ವೇ ನಂಬರ್‌ನಲ್ಲಿ ಒಬ್ಬ ಶಾಂತರಾಜು ಎನ್ನುವ ಒಬ್ಬ ಅಲ್ಲಿ ಪಕ್ಕದಲ್ಲಿ ಇನ್ನೊಂದು 5 ಎಕರೆ ಜಮೀನು ಆಕ್ರಮಣ ಮಾಡಿ ಅದರಲ್ಲಿ ಮನೆಸಹ ಕಟ್ಟಿಕೊಂಡಿದ್ದಾನೆ. ಅವನ ಮೇಲೆ ಏನೂ ಆ್ಯಕ್ಷನ್ ತೆಗೆದುಕೊಂಡಿಲ್ಲ. ಈಗ ಈ ಭಾಗದ ಜಮೀನಿನಲ್ಲಿ ಕೂಡ ಅದರ ಒಳಗಡೆ ಹೋಗುವುದಕ್ಕೆ ಬಿಡುವುದಿಲ್ಲ. ಯಾವುದೇ ಕೋರ್ಟ್‌ನ ಆದೇಶ ಇಲ್ಲ ಈ ಸರ್ವೇ ನಂಬರ್ ಒಳಗೆ ಹೋಗುವುದಕ್ಕೆ. ಹಾಗಾದರೆ ಮಾಜಿ ಶಾಸಕರಿಗೆ ಅಲಾಟ್ ಆಗಿ ಬಿ.ಡಿ.ಎ.ದವರು ಇಷ್ಟು ಹಣ ವೆಚ್ಚ ಮಾಡಿದಮೇಲೂ ಇವತ್ತು ಇವರು ಹೋಗುವುದಕ್ಕೆ ಆಗದಿದ್ದರೆ ಅಧಿಕಾರಿಗಳು ಏನು ಮಾಡುತ್ತಿದ್ದಾರೆ?

ಯಾರ ಜೊತೆ ಶಾಮೀಲಾಗಿದ್ದಾರೆ?

ಶ್ರೀ ಜೆ.ಹೆಚ್.ಪಟೇಲ್:- ಈಗ ಇದರಲ್ಲಿ ಇರತಕ್ಕಂಥವರು ಯಾವ ಅಥಾರಿಟಿಯಿಂದ ಮೇಲೆ ಬಂದಿದ್ದಾರೆ? ಯಾವಾಗ ಬಂದರು? ಅದರ ಬಗ್ಗೆ ಏನೂ ಹೇಳದೆ ನೀವು 88ರ ಕೇಸನ್ನು 96ರಲ್ಲಿ ನಿಮ್ಮ ಸರ್ಕಾರದಲ್ಲಿ ಎಂದು ಹೇಳಿದರೆ ಏನು?

ಶ್ರೀ ಯು.ಆರ್.ಸಭಾಪತಿ:- ನಾನು ಹೇಳುತ್ತಿದ್ದೇನೆ, ಇತ್ತೀಚೆಗೆ ನಿಮ್ಮ ಸರ್ಕಾರ ಬಂದಮೇಲೆ ನಿಮ್ಮ ಉದಾಸಿಯವರು ಅದರ ಒಳಗಡೆ ಹೋಗುವುದಕ್ಕೆ ಪ್ರಯತ್ನಪಟ್ಟರು. ಆಗ ಪೊಲೀಸ್ ಅಧಿಕಾರಿಗಳೂ ಕೂಡ ಸ್ಪಷ್ಟವಾಗಿ ಏನು ಹೇಳುತ್ತಾರೆಂದರೆ, ನಿಮ್ಮ ಸರ್ಕಾರದೊಳಗೆ ಹಿರಿಯರೆಲ್ಲಾ ನಮಗೆ ಹೇಳಿದ್ದಾರೆ ಅದನ್ನು ಟಚ್ ಮಾಡುವುದು ಬೇಡ ಎಂದು.

ಶ್ರೀ ಎಂ.ನಾರಾಯಣಸ್ವಾಮಿ:- ಅವರದು ಇರಲಿ, ನಿಮ್ಮದು ಏನು ಹೇಳಿ ಸ್ವಾಮಿ, ಉದಾಸಿಯವರದು ಇರಲಿ, ತಾವು ಏನು ಹೇಳುತ್ತೀರಿ ದಯಮಾಡಿ ಡಿಮ್ಯಾಂಡ್ ಮೇಲೆ ಮಾತನಾಡಿ ಉತ್ತರ ಕೊಡುವಾಗ ಸರ್ಕಾರ ಉತ್ತರ ಕೊಡುತ್ತದೆ. ಈಗ ಉದಾಸಿಯಿಂದ ಹಿಡಿದುಕೊಂಡು 80ರಿಂದ ಹಿಡಿದುಕೊಂದು 96ರವರೆಗೆ ಬಂದು ಡೆಲ್ಲಿಗೆ ಹೋಗಿ....

ಶ್ರೀ ಯು.ಆರ್.ಸಭಾಪತಿ:- ನಿಮಗೆ ಅರ್ಥ ಆಗುವುದಿದ್ದರೆ ಅರ್ಥ ಮಾಡಿಕೊಳ್ಳಿ. ಇಲ್ಲದೆ ಇದ್ದರೆ ದಯವಿಟ್ಟು ಕುಳಿತುಕೊಳ್ಳಿ. ಇವತ್ತು ನಿಮ್ಮ ಲೋಕೋಪಯೋಗಿ ಸಚಿವರು, ಕ್ಯಾಬಿನೇಟ್ ಸಚಿವರಾದ ಉದಾಸಿಯವರೇ ಆ ಜಾಗಕ್ಕೆ ಪ್ರವೇಶ ಮಾಡುವುದಕ್ಕೆ ಆಗುವುದಿಲ್ಲ. ಇನ್ನೊಬ್ಬ ಯಾರೋ ಇನ್‌ಫ್ಲೂಯೆನ್ಸ್ ಮಾಡಿ ತಡೆ ಹಿಡಿಯುತ್ತಾನೆ ಎಂದರೆ ನಿಮ್ಮ ಯೋಗ್ಯತೆ ಎಲ್ಲಿಯವರೆಗೆ ಬಂತು? ಒಬ್ಬ ಜನಸಾಮಾನ್ಯರಿಗೆ ಆದ ಅನ್ಯಾಯವನ್ನು.......

ಶ್ರೀ ಎಂ.ನಾರಾಯಣಸ್ವಾಮಿ:- ನಿಮ್ಮ ಆವೇಶ ವಿಧಾನ ಸೌಧದಲ್ಲಿ ಅಲ್ಲ..

ಶ್ರೀ ಯು.ಆರ್.ಸಭಾಪತಿ:- ಆವೇಶ ಅಲ್ಲ, ನೀವು ಮಾಡಿದಂತಹ ಹಣೆಬರಹ ಇದರಲ್ಲಿ ತೋರಿಸುತ್ತಿದೆ.

ಶ್ರೀ ಎಂ. ನಾರಾಯಣಸ್ವಾಮಿ:- ನಿಮ್ಮ ಹಣೆಬರಹ ಅಲ್ಲಿ ಕುಳಿತಿದ್ದೀರಿ, ನೀವು ಸರಿಯಾಗಿ ಮಾತನಾಡಿ.

ಶ್ರೀ ಜೆ.ಹೆಚ್.ಪಟೇಲ್:- ನೀವು ಅಷ್ಟೊಂದು ಕೂಗಾಟ ಮಾಡಿಬಿಟ್ಟರೆ ನೀವು ಏನು ಕೇಸ್ ಹೇಳಿದ ಹಾಗೆ ಆಗುತ್ತದೆ? If there is any lapse on the part of our Government we are prepared to rectify it. ಅದು ಬಿಟ್ಟು 88ರಲ್ಲಿ ಯಾರಿಗೋ ಅಲಾಟ್ ಆಯಿತು ಅದು ಯಾವಾಗ ಬೇರೆಯವರಿಗೆ ಹಸ್ತಾಂತರವಾಯಿತು. ಲೀಗಲಿ ಏನಾದರೂ ಆರ್ಡರ್ ಇದೆಯೇ ಅಥವಾ ಮಾಡಿಫೈ ಆಗಿದೆಯೋ? ಆದೇನು ಅನ್ ಆಥಾರೈಸ್‌ಡ್ ಅಕ್ಯುಪೇಷನ್ನೇ? ಅದು ಏನೂ ಇಲ್ಲದೆ

ಏಕ್‌ದಂ 88ರ ವಿಷಯ ತಗೆದುಕೊಂಡು 96ರಲ್ಲಿ ಎಂದು ಹೇಳಿ ದೊಡ್ಡದಾಗಿ ಕಾಗದ ಹರಿದು ಬಿಟ್ಟರೆ ಆಯಿತೇ? ಹಾಗೆ ಅಲ್ಲ. ತಾವು ಸರಿಯಾದ ವಿಷಯ ತಿಳಿಸಿದರೆ ಸರಿಪಡಿಸುತ್ತೇವೆ.

ಶ್ರೀ ಯು.ಆರ್.ಸಭಾಪತಿ:- ನಾನು ಓದಿಹೇಳುತ್ತೇನೆ.

"MLAs have been allotted sites at Sarakki IV phase during 1988. Layout has been formed and facilities like roads, drainage etc. have been provided by the BDA. Only during 1996 when some of the allottees commenced construction after obtaining approved plans, Sri Shantaraju of Sarakki has been intermediating the allottees and obstructing the construction work on the pretext that part of the dollar scheme layout, i.e storm water drain, I Main, II Main belongs to him. Sri Shantaraju has cut open 30 feet wide road" 30 ಅಡಿ ಅಗಲದ ಒಂದು ರಸ್ತೆಯನ್ನು ಸಹ ಕಟ್ ಮಾಡಿಕೊಂಡು ಹೋಗಿದ್ದಾನೆ, ಯಾವುದು ಬಿಡಿಎ ನಿವೇಶನದವರು ಮೂಲಭೂತ ಸೌಕರ್ಯವಾಗಿ ಏನು ರಸ್ತೆ ಮಾಡಿದ್ದಾರೆ, ಏನು ನೀರು ಸರಬರಾಜು ವ್ಯವಸ್ಥೆ ಮಾಡಿದ್ದಾರೆ ಅದನ್ನು ಅನಧಿಕೃತವಾಗಿ ಶಾಂತರಾಜು ಎನ್ನುವವರು ಕಟ್ ಮಾಡಿಕೊಂಡು ಹೋಗಿದ್ದಾರೆ. ಆದರೆ ಅಧಿಕೃತವಾಗಿ ಕಟ್ಟಲಿಕ್ಕೆ ಎಂದು ಯಾರು ಹೋಗುತ್ತಾರೆ ಆಗ.....

ಶ್ರೀ ಜೆ.ಹೆಚ್.ಪಟೇ:- ಯಾವಾಗ?

ಶ್ರೀ ಯು.ಆರ್.ಸಭಾಪತಿ:- ಮೊನ್ನೆ 1996ರಲ್ಲಿ, ನೀವು ಉದಾಸಿಯವರನ್ನು ಕರೆಯಿಸಿ, ಅವರು ಉತ್ತರ ಹೇಳಲಿ, ಉದಾಸಿಯವರು ಇವತ್ತು ಹೋಗಿದ್ದಾರೆಯೇ ಕೇಳಿ Shantaraju is not the original owner of Sy.No.1 of Sarakki

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಬಿ.ಡಿ.ಎ. ಪ್ರಾಪರ್ಟಿ, ಕಾರ್ಪೊರೇಷನ್ ಪ್ರಾಪರ್ಟಿ, ಬೇರೆ ಸರ್ಕಾರದ ಪ್ರಾಪರ್ಟಿ ಏನಿದೆ ಇದರ ಬಗ್ಗೆ ಎನ್‌ಕ್ರೋಚ್‌ಮಂಟ್, ಲಿಟಿಗೇಷನ್, ಅಲಾಟ್‌ಮೆಂಟ್ ಇದು ಒಂದು ವರ್ಷದ್ದು ಎರಡು ವರ್ಷದ ವಿಚಾರವಲ್ಲ. ಬಹಳ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂತಾದ್ದು ನಮ್ಮ ಸರ್ಕಾರ ಇದನ್ನು ನಿಲ್ಲಿಸಲಿಲ್ಲ, ತಡೆಗಟ್ಟಲಿಲ್ಲ ಎನ್ನುವ ಮಾತನ್ನು ಮಾನ್ಯ ಸಭಾಪತಿಯವರು ಹೇಳುತ್ತಿದ್ದಾರೆ. ಯಾರೋ ಪುರಸ್ಕಾರವನ್ನು ಕೊಟ್ಟರು, ಯಾರೋ ಒಬ್ಬ ಅಧಿಕಾರಿ ಇಲ್ಲಿ ಕಾಲು ಇಡಬೇಡಿ ಎಂದು ಹೇಳಿದ್ದಾರೆ

ಎನ್ನುವ ಮಾತನ್ನು ಅವರು ಹೇಳಿದರು. ನಾನಾದರು ಹೇಳಲಿಕ್ಕೆ ಬಯಸುತ್ತೇನೆ, ನಮ್ಮ ಸರ್ಕಾರದಲ್ಲಿ ಬಹಳ ವರ್ಷಗಳಿಂದ ಕಾರ್ಪೊರೇಷನ್ ಆಕ್ಟ್ ಇತ್ತು, ಮುನಿಸಿಪಾಲಿಟಿ ಆಕ್ಟ್ ಇತ್ತು. ಯಾರೂ ಸಹಿತ ಕಾರ್ಯಾಚರಣೆಗೆ ತಂದಿರಲಿಲ್ಲ. ಮೊದಲನೆ ಬಾರಿಗೆ ನಮ್ಮ ಸರ್ಕಾರ ಸ್ಪೆಷಲ್ ಟಾಸ್ಕ್‌ಫೋರ್ಸನ್ನು ಮಾಡಿ ಅದಕ್ಕೆ ಒಬ್ಬ ಡಿ.ಐ.ಜಿ. ಮಟ್ಟದ ಅಧಿಕಾರಿಯನ್ನು ಹಾಕಿ, ಎಸ್.ಪಿ.ಯನ್ನು ಹಾಕಿ, ಡಿ.ವೈ.ಎಸ್.ಪಿ.ಯವರನ್ನು ಹಾಕಿ ಬೆಂಗಳೂರು ನಗರದಲ್ಲಿ ಅಗಿರತಕ್ಕಂಥ ಕಾರ್ಪೊರೇಷನ್ ಪ್ರಾಪರ್ಟಿ, ಬಿ.ಡಿ.ಎ. ಪ್ರಾಪರ್ಟಿ. ಯಾರದೋ ಪ್ರಾಪರ್ಟಿಯನ್ನು ಮತ್ತೊಬ್ಬರು ತೆಗೆದುಕೊಂಡಿರುವುದು ಎಲ್ಲವನ್ನೂ ಸಹಿತ ನಾವು ಕಂಡುಹಿಡಿದು, ಶಿಕ್ಷೆ ಮಾಡಿ ಅದನ್ನು ನಿಜವಾದ ಮಾಲೀಕರಿಗೆ ಕೊಡಬೇಕು ಎಂದು ಒಂದು ಟಾಸ್ಕ್‌ಫೋರ್ಸನ್ನು ಮಾಡಿರತಕ್ಕಂಥದ್ದು ಈ ಸರ್ಕಾರದ ಒಂದು ಸಾಧನೆ ಎನ್ನುವುದನ್ನು ಮಾನ್ಯ ಸಭಾಪತಿಯವರು ತಿಳಿದುಕೊಳ್ಳಬೇಕು. ನಿಜ ಆಗಿದೆ, ತಾವು ಏನು ಹೇಳುತ್ತಿದ್ದೀರಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾವು ಅದನ್ನು ಸರಿಮಾಡುತ್ತೇವೆ ಎಂದು. ಇದನ್ನು ಸಹಿತ ತಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. We have made a Special Task Force, most efficient Officers have been entrusted the responsibility and they are doing that job.

ಶ್ರೀ ಯು.ಆರ್.ಸಭಾಪತಿ:- ನನ್ನ ಸಮಸ್ಯೆ ಏನೆಂದರೆ, ನೀವು ಟಾಸ್ಕ್‌ಫೋರ್ಸ್ ಮಾಡಿದ್ದೀರಿ, ನಿಮ್ಮ ಹಿಂದಿನ ಸರ್ಕಾರದ್ದು ಹಾಗಲ್ಲ, ನೀವು ಹೊಸದಾಗಿ ಬಂದವರು ಬಹಳಷ್ಟು ಕೆಲಸ ಮಾಡಿದ್ದೀರಿ, ಸಾಧನೆ ಮಾಡಿದ್ದೀರಿ ಎನ್ನುವಂಥ ಬೆನ್ನುತಟ್ಟಿಕೊಳ್ಳುತ್ತಿದ್ದೀರಿ. ಆದರೆ, ಕಳೆದ ಒಂದೂವರೆ ವರ್ಷದ ಹಿಂದೆ ನಿಮ್ಮ ಸರ್ಕಾರ ಬಂದಮೇಲೆ ಆದರೂ ಇವರಿಗೆ ಅದರೊಳಗೆ ಹೋಗಲಿಕ್ಕೆ ಆಗಬೇಕಾಗಿತ್ತು. ಇವೊತ್ತಿಗೂ ಹೋಗಲಿಕ್ಕೆ ಆಗಲಿಲ್ಲ. ನಿಮ್ಮ ಟಾಸ್ಕ್‌ಫೋರ್ಸ್ ಎಲ್ಲಿ ಹೋಯಿತು? ಕಂಪ್ಲೇಂಟ್ ಕೊಟ್ಟರೆ, ಕಂಪ್ಲೇಂಟ್ ಕೊಟ್ಟಂಥ ಪೊಲೀಸ್ ಅಧಿಕಾರಿ ಹೇಳುತ್ತಾನೆ ಇಲ್ಲ, ನಿಮ್ಮವರೇ ಒಬ್ಬರು ನಮಗೆ ಫೋನ್ ಮಾಡಿ ಹೇಳಿದ್ದಾರೆ, ನೀವು ಅವರ ಹತ್ತಿರ ಮಾತನಾಡಿ, ಇವರ ಹತ್ತಿರ ಮಾತನಾಡಿ ಎಂದು ಹೇಳಿ ಹೇಳುತ್ತಾರೆ. ಹೇಳಬೇಕೇ ★★

ಶ್ರೀ ಪಿ.ಜಿ.ಆರ್.ಸಿಂಧ್ಯ:- ಪ್ರಧಾನಿಯವರ ಮಗ ಈ ಸದನದ ಸದಸ್ಯರೆ?

(ಗೊಂದಲ)

SRI K.N.NAGEGOWDA:- It is very unfortunate. I am very sorry Sir.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ದುರುದ್ದೇಶವನ್ನು

★★ ಈ ಪದಗಳನ್ನು ಉಪಾಧ್ಯಕ್ಷರ ಅನುಮತಿಯ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಇಟ್ಟುಕೊಂಡು ಯಾರದೋ ಪರವಾಗಿ ವಕೀಲಿ ಮಾಡುವುದಕ್ಕೆ ಇವರು ಬಂದಿದ್ದಾರೆ ಎಂದು ಹೇಳಿ ನಾನು ಆಪಾದನೆ ಮಾಡುತ್ತೇನೆ.

ಶ್ರೀ ಯು.ಆರ್.ಸಭಾಪತಿ:- ನಿಮ್ಮ ಉದಾಸಿಯವರ ಪರವಾಗಿಯೆ ವಕೀಲಿ ಮಾಡಿದ್ದುದು ಬೇರೆ ಯಾರ ಪರವಾಗಿಯೂ ಅಲ್ಲ, ನಾನು ಮತ್ತೆ ಮತ್ತೆ ಸಮರ್ಥನೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಪ್ರಧಾನಮಂತ್ರಿಗಳ ಮಗ ಇಲ್ಲಿ ಮಂತ್ರಿಗಳಾಗಿದ್ದಾರೆ, You give specific..... You know what it is. We don't tolerate it. Can he defend himself? You give specific charges in writing. How can you tolerate that? How can he make that statement? We don't tolerate that?

ಶ್ರೀ ಜೆ.ಹೆಚ್.ಪಟೇಲ್:- ಪಾಯಿಂಟ್ ಆಫ್ ಆರ್ಡರ್. ಏನೆಂದರೆ, ಈ ಸದನದ ಸದಸ್ಯರು ಅವರು, ಇವರು ಯಾರ ಸುದ್ದಿ ಹೇಳಿದ್ದಾರೊ ಅವರು ಸದಸ್ಯರು. ಇವರು ಯಾವುದೇ ಆಧಾರ ಇಲ್ಲದೆ ಅಥವಾ ಅವರಿಗೆ ನೋಟೀಸ್ ಕೊಡದೆ ಇಂಥಾದ್ದರ ಬಗ್ಗೆ ವಿವರಗಳನ್ನು ತಿಳಿದುಕೊಳ್ಳದೆ ಬೇಜವಾಬ್ದಾರಿಯಿಂದ ಇನ್ನೊಬ್ಬರ ಹೆಸರನ್ನು ತರುವುದು ಈ ಸದನದ ನಡವಳಿಕೆಗಳಲ್ಲಿ ಯಾವಾಗಲೂ ಇಲ್ಲ. ಆದ್ದರಿಂದ ದಯವಿಟ್ಟು ಅದನ್ನು ಕಡತದಿಂದ ತೆಗೆದುಹಾಕಿಸಿ.

ಉಪಾಧ್ಯಕ್ಷರು:- ಅದನ್ನು ಕಡತದಿಂದ ತೆಗೆದುಹಾಕಿಸಿ.

ಶ್ರೀ ಯು.ಆರ್.ಸಭಾಪತಿ:- ನಾನು ಬೇಜವಾಬ್ದಾರಿಯಿಂದ ನಡೆದಿಲ್ಲ. ನಾನು ಸಾರಿಸಾರಿ ಹೇಳಿದೆ........

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಉಪಾಧ್ಯಕ್ಷರೆ, ಈ ಸಭೆಯ ನಡವಳಿಕೆ ಏನೆಂದರೆ, ಯಾವುದೇ ಈ ಸದನದ ಸದಸ್ಯರು ಇದ್ದವರ ವಿರುದ್ಧ ಅಥವಾ ಪರ ಏನೇ ಹೇಳಬೇಕಾದರು ಕೂಡ ನಾವು ನಮ್ಮ ರೂಲ್ಸ್ ಪ್ರಕಾರ ನೋಟೀಸ್ ಕೊಟ್ಟು ಇಂತಹವರು ಇದ್ದಾರೆ ಎಂದು ಹೇಳಬೇಕಾಗುತ್ತದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅವರು As a Minister ಎಂದು ಇಲ್ಲಿ ಪದೇ ಪದೇ ಎತ್ತಿದಾಗ ಯಾರು ಅಬ್ಜೆಕ್ಟ್ ಮಾಡಲಿಲ್ಲ. ಇನ್ನೊಂದು ಪಾಪ ಅವರು ಹೆಸರನ್ನು ಹೇಳುವುದಕ್ಕೂ ತಯಾರಿರಲಿಲ್ಲ, ಇಂತಹವರೊಬ್ಬರು ಮಾಡಿದ್ದಾರೆ, ಒಬ್ಬರು ಉನ್ನತ ಅಧಿಕಾರಿಗಳು ನನಗೆ ಹೇಳಿದರು. ನಿಮ್ಮದೇ ಆದಂತ ಇನ್‌ಫ್ಲೂಯೆನ್ಸ್ ಲೀಡರ್‌ದು ಫೋನ್ ಬರುತ್ತಾ ಇದೆ ಎಂದು ಹೇಳಿ ಹೇಳುತ್ತಾ ಇದ್ದರು. ಕೃಷ್ಣಪ್ಪನವರು ಇನ್‌ಸಿಸ್ಟ್ ಮಾಡಿ ಅವರ ಹೆಸರೇನು ಹೇಳಿ ಧೈರ್ಯ ಇದ್ದರೆ ಎಂದು ಅವರು ಹೇಳಿದರು. ಅದಕ್ಕೆ ನೀವು ಕೇಳುವಾಗಲೂ ಕೂಡ ಅವರು ಮುಚ್ಚಿಡುತ್ತಿದ್ದರು, ಅವರಿಗೂ ಕೂಡ ಗೊತ್ತಿದ್ದು.....

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮುಚ್ಚಿಡತಕ್ಕಂಥ ಅವಶ್ಯಕತೆ ಇಲ್ಲ, ಇದು ಹೊರಗಡೆ ಬರಲೇಬೇಕಾಗುತ್ತದೆ. ಆದರೆ ಇದು ವ್ಯವಸ್ಥಿತವಾಗಿ ನಡೆಯುತ್ತಾ ಇರತಕ್ಕಂಥ ಅಪಪ್ರಚಾರದ ಸಂಚು. ಮಾನ್ಯ ಪ್ರಧಾನಿಗಳಿಗೆ ಕೆಟ್ಟ ಹೆಸರು ತೆಗೆದುಕೊಳ್ಳಬೇಕು ಎಂದು ಹೇಳಿ ಪ್ರಚಾರ ಮಾಡುತ್ತಾ ಇರತಕ್ಕಂಥ ಸಂಚು ಇದು. ಪ್ರಧಾನಿಗಳ ಮಗ ಇದು ಮಾಡಿದರು ಎಂದು ಇಲ್ಲಿ ಡಿಬೇಟ್ ಆಗುತ್ತಿದೆಯೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈಗ ಅವರಂತೂ ಹೇಳುವುದಕ್ಕೆ ತಯಾರಿರಲಿಲ್ಲ, ಆದರೆ ನಿಮ್ಮ ಸದಸ್ಯರೆ ಒಬ್ಬರು ಲವರಿಗೆ ಇನ್‌ಸಿಸ್ಟ್ ಮಾಡಿ ಹೆಸರೇನು ಹೇಳಿ ಹೇಳಿ ಎಂದರು ಇವರು ಹೇಳಿದರು. ಅದಕ್ಕೆ ತಾವು ಸ್ವಲ್ಪ ಆ ಕಡೆಯೂ ಕೂಡ ಗಮನ ಕೊಡಬೇಕಾಗುತ್ತದೆ. ಆ ರೀತಿ ಸದಸ್ಯರು ಕೂಡ ಇನ್‌ಸಿಸ್ಟ್ ಕೂಡ ಮಾಡಬಾರದು. ಅವರಿಗೆ ಬೇಕಾದರೆ ನೀವು ಮಾತನಾಡಿ ಎಂದರೆ ನೋಟೀಸ್ ಕೊಟ್ಟೇ ಮಾತನಾಡುತ್ತಾರೆ. ಆದರೆ ತಾವು ಒಂದನ್ನು ಮರೆಯಬಾರದು, ಅವರು ಬೇರೆ ಸದಸ್ಯರಂತೆ ಸದಸ್ಯರಲ್ಲ He is a Minister. As a Minister how he has influenced ಎಂದು ಹೇಳತಕ್ಕಂಥ ಹಕ್ಕು ಈ ಸದನಕ್ಕೆ ಇದೆ. not as a Member.

SRI P.G.R.SINDYA:- He is a Minister, he is also a Member of this House. There is a procedure. Let him give a notice and let it be debated. We are prepared for that.

SRI M.MALLIKARJUN KHARGE:- He has to tell because Demand is there. Housing Demand is there, Urban Development Demand is there and he is the concerned Minister, Bangalore Development Authority demand is there. So he can talk.

ಶ್ರೀ ಬಿ.ಎನ್.ಬಚ್ಚೇಗೌಡ:- ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಭಾಪತಿಯವರು ತಿಳಿಸಿದ ಹಾಗೆ ಈ ಒಂದು ಅಲಾಟ್‌ಮೆಂಟ್ ಎಂಟು ವರ್ಷಗಳ ಹಿಂದೆ ಆಗಿರತಕ್ಕಂಥದ್ದು ಎಂದು ಹೇಳಿದ್ದಾರೆ. ಈಗ ನಾವು ಬಂದು ಒಂದೂವರೆ ವರ್ಷ ಆಯಿತು, ಆರೂವರೆ ವರ್ಷದ ಹಿಂದೆ ಈ ಅಲಾಟ್‌ಮೆಂಟ್ ಆಗಿದೆ. ಹಿಂದೆ ಸರ್ಕಾರಗಳಿದ್ದು ಕೇಳಿಕೊಳ್ಳಿ ನಾವು ಕೂಡ ಅಲಾಟಿಸ್ಸೆ. ಶಾಸಕರಿಗೆ ವಿಶೇಷ ಸಂದರ್ಭದಲ್ಲಿ ಕೊಟ್ಟಿರತಕ್ಕಂಥ ನಿವೇಶನಗಳು, ಇದರಲ್ಲಿ ಅನೇಕ ನಿವೇಶನಗಳ ಬಗ್ಗೆ ಇವೊತ್ತು ಶಾಸಕರ ವಿರುದ್ಧವಾಗಿ ಸುಪ್ರಿಂಕೋರ್ಟಿಗೆ ಆ ಮಾಲೀಕರು ಹೋಗಿದ್ದಾರೆ. ಅದು ಸುಪ್ರಿಂಕೋರ್ಟ್‌ನ ಕಟಕಟೆ ಹತ್ತಿದೆ..... ಸ್ವಲ್ಪ ಕೇಳಿ, Wait I say, ನೀವೇಳಿದ್ದನ್ನು ನಾವು ಕೇಳಲಿಲ್ಲವೆ......

ಶ್ರೀ ಯು.ಆರ್.ಸಭಾಪತಿ:- ಈ ಪರ್ಟಿಕ್ಯುಲರ್ ಕೇಸ್ ಬಗ್ಗೆ ಹೇಳಿ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

SRI B.N.BACHEGOWDA:- Don't shout. ನೋಡಿ ನಾವು 78ರಿಂದ ಬಂದಿರುವ ಶಾಸಕರು, ಸ್ವಲ್ಪ ಹೇಳುವುದನ್ನು ಕೇಳಿ ನೀವು ಈಚೆಗೆ ಬಂದಿದ್ದೀರಿ..... Why do you shout. ಸ್ವಲ್ಪ ಹೇಳುವುದನ್ನು ಕೇಳಿ. ದಯಮಾಡಿ ಸ್ವಲ್ಪ ಕೇಳಿ, ಆವೇಶ ಮಾಡಿಕೊಳ್ಳಬೇಡಿ. ನಾನು ನಿಮಗೆ ಸಹಾಯ ಮಾಡುತ್ತೇನೆ. ಆರೂವರೆ ವರ್ಷದ ಹಿಂದೆ ಇದ್ದಂಥ ಬೇರೆ ಸರ್ಕಾರ ಅಲಾಟ್ ಮಾಡಿದ್ದುದು ಇವೊತ್ತು ಹೇಳುತ್ತಿದ್ದೀರಿ ಅವರು ಮಿನಿಸ್ಟ್ರು ಎಂದು. In the capacity as an MLA he got the site. ಈಗ ಅವರು ಮಂತ್ರಿಗಳಾಗಿದ್ದಾರೆ ಒಪ್ಪಿಕೊಳ್ಳೋಣ. ಈ ಮಧ್ಯ ತಾವು ಸರ್ವೆ ನಂಬರ್ ಮೆನ್ಷನ್ ಮಾಡಿದಿರಿ 1ನೇ ಸರ್ವೆ ನಂಬರ್ ಎಂದು. ಯಾರೋ ಓನರ್ ಇರಬಹುದು, ಓನರ್ ಏನು ಮಾಡಿದ್ದಾನೆ ಯಾವ ಸಂದರ್ಭದಲ್ಲಿ ಹೀಗೆ ಆಗಿದೆ, ಇದೇನಾದರೂ ಕೋರ್ಟಿಗೆ ಹತ್ತಿದೆಯೇ, ಇದೆಲ್ಲಾ ಸಂದರ್ಭಗಳಲ್ಲೂ ತಿಳಿಸಬೇಕಾಗುತ್ತದೆ. ಅದನ್ನು ಬಿಟ್ಟು ನೀವು ಬರೀ ಒಬ್ಬ ಮಂತ್ರಿಗಳು, ಆ ಮಂತ್ರಿ ಏನಾಗಿದ್ದಾರೆ ಅವರಿಗೆ ಯಾರೋ ಇನ್‌ಫ್ಲುಯೆನ್ಸ್ ಈ ರೀತಿ ಅಸಂಬದ್ಧವಾದದ್ದನ್ನೆಲ್ಲ ಇಲ್ಲಿ ತಾವು ದಯಮಾಡಿ ಸದನದಲ್ಲಿ ತಿಳಿಸಬಾರದು. ಹಿನ್ನೆಲೆ ಇದ್ದರೆ ಹೇಳಿ ಈ ರೀತಿ ಆಗಿದೆ ಎಂದು ನಾವೂ ತಿಳಿದುಕೊಳ್ಳೋಣ. ಏಕೆಂದರೆ ನಾವೂ ಶಾಸಕರೆ.

ಶ್ರೀ ಯು.ಆರ್.ಸಭಾಪತಿ:- ಸನ್ಮಾನ್ಯ ಸಭಾಧ್ಯಕ್ಷರೆ, ಸಂಬಂಧಪಟ್ಟ ಈ ಸರ್ವೆ ನಂಬರ್ ಮೇಲೆ ಯಾವುದೇ ಕೋರ್ಟುಕಟ್ಟಳೆಗಳು ಇಲ್ಲ. ಇದು ಸಂಪೂರ್ಣವಾಗಿ ಎಂ.ಎಲ್.ಎ.ಗಳಿಗೆ ಎಕ್ಸ್ ಎಂ.ಎಲ್.ಎ.ಗಳಿಗೆ ಅಲಾಟ್ ಆದಂತ ವಿಚಾರ. ಮತ್ತೆ ನಾನು ಈ ವಿಚಾರವನ್ನು ಯಾರ ಮೇಲೂ ಆರೋಪ ಮಾಡಬೇಕು, ದೋಷಾರೋಪಣೆ ಮಾಡಬೇಕು ಎಂಬ ದೃಷ್ಟಿಯಿಂದ ಹೇಳಿಲಿಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ:- ಅಲ್ಲಿನ ರಸ್ತೆ ಎಲ್ಲಾ ತಾವು ಹೇಳುತ್ತಿದ್ದೀರಿ, ಹಾಗಾದರೆ ಬೇರೆ ಮನುಷ್ಯ ಬಂದು ಅಲ್ಲಿ ಯಾರು ಮಾಡುತ್ತಾರೆ?

ಶ್ರೀ ಯು.ಆರ್.ಸಭಾಪತಿ:- ನೀವು ಹೋಗಿ ತನಿಖೆ ಮಾಡಿ ಗೊತ್ತಾಗುತ್ತದೆ.

ಶ್ರೀ ಬಿ.ಎನ್.ಬಚ್ಚೇಗೌಡ:- ನೀವು ಹೇಳಿ. You come out with the fact.

ಶ್ರೀ ಯು.ಆರ್.ಸಭಾಪತಿ:- ನಾನು ಆರೋಪ ಮಾಡಿದ ವ್ಯಕ್ತಿಯು ಈ ಸದನದ ಸದಸ್ಯರು ಅಲ್ಲ, ಅದನ್ನೂ ನಾನು ಹೇಳಬಯಸುತ್ತೇನೆ. ಏನೇ ಆಗಲೀ ಒಂದು ವಿಚಾರವನ್ನು ನಿಮ್ಮ ಮುಂದೆ ಇಟ್ಟಿದ್ದೇನೆ, ತನಿಖೆ ಮಾಡುವುದು ನಿಮ್ಮ ಕೆಲಸ, ನ್ಯಾಯವನ್ನು ಒದಗಿಸಿಕೊಡಿ ಅಷ್ಟೆ ನಾನು ಹೇಳುತ್ತೇನೆ, ಮತ್ತೆ ನಾನು ಹೇಳುವುದಕ್ಕೆ

ಹೋಗುವುದಿಲ್ಲ, ಸುಮ್ಮನೆ ನಾನು ಹೇಳಿದ ಕೂಡಲೆ ನಿಮ್ಮ ಸರ್ಕಾರ, ನಿಮ್ಮ ಪ್ರಧಾನಿಗಳ ಮೇಲೆ ಸುಮ್ಮನೆ ಆರೋಪ ಮಾಡಿದ್ದೇನೆ ಎಂದು ಹೇಳುತ್ತೀರಿ. ನಾನು ಹೇಳುವುದಿಲ್ಲ ಎಂದು ಹೇಳಿದರೆ ಹೇಳಿ ಹೇಳಿ ಎಂದು ಒತ್ತಾಯ ಮಾಡುತ್ತೀರಿ, ನಾನೇನು ಮಾಡಲಿ. ಅಧ್ಯಕ್ಷರೆ, ಇವೊತ್ತು ಆಡಳಿತಾತ್ಮಕವಾಗಿ ಅತ್ಯಂತ ಅಗತ್ಯವಾದಂಥ ಸುಧಾರಣೆಯನ್ನು ಸರ್ಕಾರ ಮಾಡಲೇಬೇಕಾಗಿದೆ. ನಾನು ಮತ್ತೆ ಮತ್ತೆ ಸರ್ಕಾರದ ನಿರ್ಲಕ್ಷತನ, ನಿರ್ಲಕ್ಷತನ ಎಂದು ಹೇಳುತ್ತಿದ್ದೇನೆ ಎಂದರೆ, ಇವೊತ್ತು ಅಧಿಕಾರಿಗಳು ಸ್ಪಷ್ಟವಾಗಿ ಅವರಿಗೆ ಗೊತ್ತಿದೆ, ಒಂದಲ್ಲ ಒಂದು ರೀತಿಯ ರಾಜಕೀಯ ಒತ್ತಡ ಬಂದೇ ಬರುತ್ತದೆ. ನಾವು ಯಾವುದೇ ಒಂದು ರೀತಿಯಲ್ಲಿ ಕೆಲಸವನ್ನು ಮಾಡಿಕೊಂಡು ಹೋಗಬಹುದು, ಮಂತ್ರಿಗಳನ್ನು ಮೆಚ್ಚಿಸಬಹುದು ಅಥವಾ ಶಾಸಕರನ್ನು ಬೇರೆ ರೀತಿಯಲ್ಲಿ ಮೆಚ್ಚಿಸಬಹುದು ಎನ್ನುವುದು ಇದ್ದರೆ ಅದು ತಪ್ಪು. ಇದಕ್ಕೆ ಒಂದು ರಚನಾತ್ಮಕವಾದ, ಕಟಿಬದ್ಧವಾದಂಥ ಕ್ರಮವನ್ನು ನೀವು ತೆಗೆದುಕೊಳ್ಳಲೇಬೇಕು. ಇವೊತ್ತು ನಿಮ್ಮ ಬಗ್ಗೆ, ಸದನದ ಬಗ್ಗೆ ಸದನದ ಸದಸ್ಯರುಗಳ ಬಗ್ಗೆ, ಆಡಳಿತ ನಡಸುವಂಥ ಒಂದು ಅಧಿಕಾರರೂಢ ಪಕ್ಷದ ಬಗ್ಗೆ ಗೌರವ ಬರಬೇಕಾದರೆ ಅಧಿಕಾರಿಗಳನ್ನು ಹದ್ದುಬಸ್ತಿನಲ್ಲಿಡತಕ್ಕಂಥ ಕ್ರಮ ನೀವು ಜರುಗಸದೇ ಹೋದಲ್ಲಿ ಅದು ಖಂಡಿತವಾಗಿಯೂ ಇಂತಹ ಒಂದು ಅಪವಾದಗಳಿಗೆ ನೀವು ಬಲಿಯಾಗಬೇಕು ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇನ್ನು ನಾನು ನಗರಾಭಿವೃದ್ಧಿ ವಿಚಾರದಲ್ಲಿ ಹೆಚ್ಚಿಗೆ ಮಾತನಾಡುವುದಿಲ್ಲ, ಸನ್ಮಾನ್ಯ ಸಗೀರ್ ಅಹಮದ್‌ರವರು ಒಳಚರಂಡಿ ನೀರು ಸರಬರಾಜು ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ, ಆರೋಗ್ಯ ಇಲಾಖೆಯ ಬಗ್ಗೆ ನಾನು ಹೇಳುವುದಿದ್ದರೂ ಕೂಡ, ನಾನು ಈ ಹಿಂದೆ ಸದನದಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಸಂಜಯ ಗಾಂಧಿ ಅಪಘಾತ ಆಸ್ಪತ್ರೆಯ ಬಗ್ಗೆ ನಾನು ಸ್ಪಷ್ಟವಾಗಿ ಅಲ್ಲಿ ನಡೆಯತಕ್ಕಂಥ ಅವ್ಯವಹಾರಗಳ ಬಗ್ಗೆ ಈ ಸದನದಲ್ಲಿ ಹೇಳಿದ್ದೆ, ಅಲ್ಲಿಯ ಅನೇಕ ರೀತಿಯ ಅವ್ಯವಹಾರಗಳ ಬಗ್ಗೆ ಡಾ:ತಂಗಾ ಅವರ ಸಮಿತಿ ತನ್ನ ವರದಿಯಲ್ಲಿ ಕೂಡ ಕೊಟ್ಟಿದೆ, ಅಲ್ಲಿಯ ನಿರ್ದೇಶಕರನ್ನು ತೆಗೆಸಬೇಕು ಎಂದು ಹೇಳಿ ಕಳೆದ ವರ್ಷವೆ ಇದರ ಬಗ್ಗೆ ಅಭಿಪ್ರಾಯಗಳು ಬಂದಿದ್ದರೂ ಕೂಡ, ಇವೊತ್ತು ಆ ಸಂಜಯಗಾಂಧಿ ಅಪಘಾತ ಆಸ್ಪತ್ರೆಯ ಬಗ್ಗೆ, ಅಲ್ಲಿರತಕ್ಕಂಥ ಆರೋಪದ ಬಗ್ಗೆ, ಆರೋಪಿತ ನಿರ್ದೇಶಕರ ಬಗ್ಗೆ ಯಾವುದೇ ರೀತಿಯ ಕ್ರಮಗಳನ್ನು ಕೈಗೊಳ್ಳಲಿಲ್ಲ. ಈ ಸಂಜಯಗಾಂಧಿ ಅಪಘಾತ ಆಸ್ಪತ್ರೆ ಮುನ್ನೂರಕ್ಕೂ ಹೆಚ್ಚು ಜನರಿಗೆ ಕೃತಕ ಅಂಗ ಕೊಡುವಂಥ ವ್ಯವಸ್ಥೆ, ಇವೊತ್ತು ಈ ಕೃತಕ ಅಂಗದ ಯೂನಿಟನ್ನೆ ಬಂದ್ ಮಾಡಿದ್ದಾರೆ. ಯಾಕಾಗಿ ಬಂದು ಮಾಡಿದರು, ಯಾರಿಂದಾಗಿ ಬಂದ್ ಆಯಿತು ಇದನ್ನು ನಾನು ಸ್ಪಷ್ಟವಾಗಿ ಕಳೆದ ವಿಧಾನಸಭೆಯ ಅಧಿವೇಶನದಲ್ಲಿ ಹೇಳಿದ್ದರೂ ಕೂಡ, ಇವೊತ್ತಿನವರೆಗೂ ಅವರು ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಲ್ಲ.

5.30 ಪಿ.ಎಂ.

ಎರಡು ಸಾವಿರ ಇಸವಿಯೊಳಗೆ ಎಲ್ಲರಿಗೂ ಆರೋಗ್ಯ ಕೊಡಬೇಕು ಎನ್ನತಕ್ಕಂಥದ್ದು

ವಿಶ್ವ ಆರೋಗ್ಯ ಸಂಸ್ಥೆಯ ಘೋಷಣೆಯಾಗಿದೆ. ಆರೋಗ್ಯ ಇಲಾಖೆ ಈ ದಿಸೆಯಲ್ಲಿ ಯಾವ ಹೆಜ್ಜೆಯನ್ನು ಹಾಕಿದೆ, ಯಾವ ರೀತಿಯಲ್ಲಿ ಇವತ್ತು ತನ್ನ ಅಧೀನದಲ್ಲಿರುವಂತಹ ಸರ್ಕಾರಿ ಆಸ್ಪತ್ರೆಗಳಿಗೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಯಾವ ರೀತಿಯ ಸವಲತ್ತುಗಳನ್ನು ಒದಗಿಸಿದೆ? ವೈದ್ಯರ ನೇಮಕಾತಿ, ದಾದಿಯರ ನೇಮಕಾತಿ ಆಗಿಲ್ಲ. ಪ್ರಯೋಗಶಾಲಾ ತಂತ್ರಜ್ಞರು ಇಲ್ಲ. ಗ್ರಾಮೀಣ ಆರೋಗ್ಯ ಕಾರ್ಯಕರ್ತರು ಇಲ್ಲ. ಫಾರ್ಮಸಿಸ್ಟರು ಇಲ್ಲ, ನೀವು ಪ್ರಮಾಣಾನುಗತವಾಗಿ ಹುದ್ದೆಗಳನ್ನು ಮಂಜೂರು ಮಾಡಿದರೆ ಸಾಕೆ? ಅಥವಾ ನೇಮಕಾತಿ ಬೇಕೇ ಎಂಬುದು ಮಾನ್ಯ ಆರೋಗ್ಯ ಸಚಿವರು ಇದನ್ನು ಗಂಭೀರವಾಗಿ ಪರಿಶೀಲಿಸಬೇಕು ಎಂದು ನಾನು ಹೇಳಬಯಸುತ್ತೇನೆ. ಗ್ರಾಮೀಣ ಪ್ರದೇಶಗಳಲ್ಲಿ ಒಬ್ಬ ಬಡವನು ಏನಾದರೂ ರೋಗರುಜಿನಗಳು ಬಂದರೆ ಅವನು ನಮ್ಮೊಂದಿಗೆ ಇರುವವನು ಅವನು ನಮ್ಮ ಮೇಲೆ ನಂಬಿಕೆ ಇಟ್ಟಿರುವಂಥವನು. ನಾವು ಬಡವರ ಬಗ್ಗೆ ಕಣ್ಣೀರುಗರೆದು ನಿಮಗೆ ನಾವು ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆಂದು ಹೇಳಿ ಅವರ ಹತ್ತಿರ ಓಟು ಪಡೆದುಕೊಂಡು ಇವತ್ತು ನಾವು ಇಲ್ಲಿಗೆ ಬಂದಿದ್ದೇವೆ. ನಮಗೆ ಇಲ್ಲಿ ಶಾಸನಭವನದಲ್ಲಿ ಎಲ್ಲಾ ರೀತಿಯ ಸೌಲಭ್ಯಗಳು ಇದೆ. ನಮಗೆ ಮೆಡಿಸಿನ್ ಫ್ರೀಯಾಗಿ ಸಿಗುತ್ತದೆ. ಆದರೆ ಗ್ರಾಮೀಣ ಪ್ರದೇಶದ ಜನರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೋದರೆ ವೈದ್ಯರುಗಳು ಇಲ್ಲದೆ ವಾಪಸ್ಸು ಹೋಗಬೇಕಾಗಿದೆ, ಅವನು ಎಲ್ಲಿಗೆ ಹೋಗಬೇಕು? ಎಷ್ಟೋ ಕಡೆಗಳಲ್ಲಿ ಪ್ರಾಥಮಿಕ ಆರೋಗ್ಯಕೇಂದ್ರಗಳಲ್ಲಾಗಲಿ, ಸರ್ಕಾರಿ ಆಸ್ಪತ್ರೆಗಳಲ್ಲಾಗಲಿ ಸರಿಯಾದಂಥ ಶುಶ್ರೂಷೆ ಇಲ್ಲದೆ ಸತ್ತಂಥ ವರದಿಗಳನ್ನು ನಾವು ಕೇಳಿದ್ದೇವೆ. ಇಷ್ಟಾದರೂ ಕೂಡ ನೀವು ವೈದ್ಯರುಗಳ ನೇಮಕಾತಿಯನ್ನು ಮಾಡುವಲ್ಲಿ ಏಕೆ ಹಿಂದೆ ಬಿದ್ದಿದ್ದೀರಿ? ಇವತ್ತು ವಿಶ್ವ ಆರೋಗ್ಯ ಸಂಸ್ಥೆ ಎರಡು ಸಾವಿರ ಇಸವಿಯೊಳಗೆ ಎಲ್ಲರಿಗೂ ಆರೋಗ್ಯವೆಂದು ಏನು ಘೋಷಣೆಯಾಗಿದೆ. ಈ ದಿಶೆಯಲ್ಲಿ ಬೇಕಾದಷ್ಟು ಹಣವನ್ನು ವೆಚ್ಚ ಮಾಡಿದರೂ ಕೂಡ ನಿಮಗೆ ಈ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಏಕೆ ಆಗಲಿಲ್ಲ? ಸಿಬ್ಬಂದಿಗಳ ನೇಮಕಾತಿಯಾಗಲಿ ಅಥವಾ ಸಿಬ್ಬಂದಿಗಳನ್ನು ಎಲ್ಲಾದರೂ ವರ್ಗಾಯಿಸಬೇಕಾದರೆ ಆ ಒಬ್ಬ ವೈದ್ಯರುಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಕಳುಹಿಸುತ್ತೀರಾ, ಆದರೆ ಅವರು ಅಲ್ಲಿ ಇರುವುದಿಲ್ಲ. ಅವರು ಏಕೆ ಹಿಂದಕ್ಕೆ ಬರುತ್ತಾರೆ? ಅಲ್ಲಿ ಅವರಿಗೆ ಸರಿಯಾದಂತಹ ಮೂಲಭೂತವಾದಂತಹ ಸೌಕರ್ಯಗಳು ಇರುವುದಿಲ್ಲ. ಅವರ ಹೆಂಡತಿ ಮಕ್ಕಳು ವಾಸಿಸುವುದಕ್ಕೆ ವಸತಿ ಇರುವುದಿಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕೆ ಸವಲತ್ತುಗಳು ಇಲ್ಲ. ಹೀಗಾಗಿ ಅವರು ಅಂತಹ ಕಡೆಗಳಲ್ಲಿ ಹೋದರೂ ಕೂಡ ತಾವು ನಿಜವಾಗಿ ಸೇವೆ ಮಾಡಬೇಕೆಂದು ಪ್ರವೃತ್ತಿಯುಳ್ಳವರಾಗಿದ್ದು, ನಾವು ಧನ್ಯರಾಗಬೇಕೆಂಬ ಭಾವನೆ ಇದ್ದರೂ ಮಾನಸಿಕವಾದ ಆಘಾತಕ್ಕೆ ಒಳಗಾಗುತ್ತಾರೆ. ಈ ಸಂದರ್ಭದಲ್ಲಿ ಸ್ಥಳೀಯ ವೈದ್ಯರುಗಳನ್ನು ನೇಮಕ ಮಾಡಿದರೆ ಅನುಕೂಲವಾಗುತ್ತದೆ. ಇದನ್ನು ತಾವು ಏಕೆ ರಚನಾತ್ಮಕವಾಗಿ ಕಾರ್ಯರೂಪಕ್ಕೆ ತರುವುದಿಲ್ಲವೆಂದು ಕೇಳಬಯಸುತ್ತೇನೆ. ಇವತ್ತು ತಾವು ಏನೋ ಉತ್ತರವನ್ನು ಕೊಡುತ್ತೀರಿ, ವಿಧಾನಸಭೆಯಾದ ಮೇಲೆ ನೀವು ಯಥಾಪ್ರಕಾರ

ಪ್ರವಾಸಗಳನ್ನು ಮಾಡುತ್ತಾ ಹೋಗುತ್ತಿದ್ದೀರಿ. ಮತ್ತೆ ವಿಧಾನಸಭೆ ಶುರುವಾದಾಗ ನಾವು ಪ್ರಶ್ನೆಗಳನ್ನು ಕೇಳುತ್ತೇವೆ. ಈಗ ನನ್ನ ಕ್ಷೇತ್ರವಾದ ಉಡುಪಿಯಲ್ಲಿ ಸರ್ಕಾರಿ ಆಸ್ಪತ್ರೆಯ ಬಗ್ಗೆ ಹೇಳಿದೆ. ನಮ್ಮಲ್ಲಿ ಸರ್ಕಾರಿ ಆಸ್ಪತ್ರೆಗಳು ಎಂದರೆ, ಅಲ್ಲಿ ನೂರು ಜನರು ರೋಗಿಗಳನ್ನು ಅಡ್‌ಮಿಟ್ ಮಾಡಬಹುದು. ಅಲ್ಲಿ ರೋಗಿಗಳಿಗೆ ಇಡೀ ದಿವಸ. ಫ್ರೀ ಊಟ ಕೊಡಬೇಕು. ನೀವು ಅದಕ್ಕೆ ದುಡ್ಡು ಎಷ್ಟು ಅಲಾಟ್ ಮಾಡಿದ್ದಿರಾ? ರೂ.5 ಮಾಡಿದ್ದೀರಿ. ಈ 5 ರೂಪಾಯಿಗಳಲ್ಲಿ ಆ ರೋಗಿಗೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಊಟ ಕೊಡಲಿಕ್ಕೆ ಸಾಧ್ಯವಿದೆಯೇ? ಉಡುಪಿ ಸರ್ಕಾರಿ ಆಸ್ಪತ್ರೆಗೆ ಇವತ್ತು ಏಳು ಲಕ್ಷ ರೂಪಾಯಿಗಳ ಆಹಾರವನ್ನು ಏನು ಸರಬರಾಜು ಮಾಡಿದ್ದಾನೆ, ಆ ಗುತ್ತಿಗೆದಾರನಿಗೆ ಹಣವನ್ನು ಕೊಡದೆ ಬಾಕಿಯನ್ನು ಉಳಿಸಿಕೊಂಡಿದ್ದರಿಂದ ಅವನು ಇವತ್ತು ಸರ್ಕಾರಕ್ಕೆ ನೋಟೀಸ್ ಕೊಟ್ಟಿದ್ದಾನೆ. ಪ್ರತಿಸಲ ಕೊಡುವುದನ್ನು ಕೊಟ್ಟಿದ್ದಾನೆ. ನೀವು ಪ್ರತಿ ಸಲ ವಿಧಾನಸಭೆ ಪ್ರಾರಂಭವಾಗುವಾಗ ಎರಡು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೀರ? ಮತ್ತೆ ಎರಡು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೀರಿ, ಮತ್ತೆ ವಿಧಾನಸಭೆ ಮುಗಿದ ಮೇಲೆ ಅದು ತಟಸ್ಥವಾಗುತ್ತದೆ. ಮತ್ತೆ ನಾವು ವಿಧಾನಸಭೆ ಪ್ರಾರಂಭವಾಗುವಾಗ ನಿಮ್ಮಲ್ಲಿಗೆ ಬರಬೇಕು. ಹಾಗಾದರೆ ನೀವು ಒಂದು ರಚನಾತ್ಮಕವಾದ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವುದಕ್ಕೆ ನೀವು ಏಕೆ ಹಿಂದೇಟು ಹಾಕುತ್ತೀರೆಂಬುದು ನನಗೆ ಅರ್ಥವಾಗುವುದಿಲ್ಲ. ಅಧಿಕಾರಿಗಳು ಏಕೆ ನಿಮಗೆ ತಾಂತ್ರಿಕ ಅಡೆತಡೆಗಳು ತಂದಿಡುತ್ತಾರೋ ಎಂಬುದು ನನಗೆ ಅರ್ಥವಾಗುವುದಿಲ್ಲ. ಈ 5 ರೂಪಾಯಿಗಳಲ್ಲಿ ಯಾವ ಮಾನದಂಡದ ಮೇಲೆ ರೋಗಿಗಳಿಗೆ ಊಟವನ್ನು ಕೊಡುತ್ತಿದ್ದೀರಿ? ಅವನಿಗೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಕಾಫಿ, ಊಟ ಎರಡು ಹೊತ್ತು ಆರೋಗ್ಯಕರವಾದ ಊಟವನ್ನು ಕೊಡಬೇಕಾದರೆ 5 ರೂಪಾಯಿಗಳಲ್ಲಿ ಕೊಡಲು ಸಾಧ್ಯವಿದೆಯೆ ಎಂಬುದನ್ನು ದಯಮಾಡಿ ತಾವು ಚಿಂತನೆ ಮಾಡಬೇಕು. ಇದನ್ನು ತಾವು ಏನೋ ಉತ್ತರ ರೂಪದಲ್ಲಿ ನನಗೆ ಹೇಳುವಂತಹ ಅವಶ್ಯಕತೆ ಇಲ್ಲ. ಮುಂದಿನ ಕಾಲಾವಧಿಯಲ್ಲಿ ಇಂತಹ ಕೆಲಸಗಳು ಆಗಬಾರದು, ವಿಶ್ವ ಆರೋಗ್ಯ ಸಂಸ್ಥೆಗಳ ಘೋಷಣೆ ಏನು ಇದೆ. ಎರಡು ಸಾವಿರ ಇಸವಿಯೊಳಗೆ ಎಲ್ಲರಿಗೂ ಆರೋಗ್ಯ ಎಂಬ ಘೋಷಣೆ ಏನಿದೆ ಅದನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಬೇಕಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸೌಲಭ್ಯವನ್ನು ಒದಗಿಸುವುದು, ಮತ್ತು ವೈದ್ಯರುಗಳನ್ನು ಒದಗಿಸುವುದು ಶುಶ್ರೂಷಕರನ್ನು.....

ಶ್ರೀಮತಿ ಪ್ರಮೀಳಾ ನೇಸರ್ಗಿ:- ''ಲಂಗನಂ ಪರಮೌಷದಂ'' ಎಂದರೆ ಉಪವಾಸವಿದ್ದರೆ ಒಳ್ಳೆಯ ಔಷಧವೆಂದು, ಉಪವಾಸವಿಡುವುದಕ್ಕೋಸ್ಕರ ಮಾಡಿರಬಹುದು.

ಶ್ರೀ ಯು.ಆರ್.ಸಭಾಪತಿ:- ಅಧಿಕಾರಿಗಳು ಫಲ್ಲರನ್ನು ಉಪವಾಸವಿಡುವಂತಹ ಸಾಧ್ಯತೆಗಳು ಇವೆ. ಆದರೆ ಅವರು ಉಪವಾಸವಿದ್ದು ಸತ್ತು ಹೋದರೆ ಯಾರನ್ನು

ಕೇಳುತ್ತಾರೆ? ನಮ್ಮನ್ನೆ ಕೇಳುತ್ತಾರೆ. ನಾವು ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇಟ್ಟುಕೊಂಡಿರುವಂತಹ ವ್ಯಕ್ತಿಗಳು, ನಾವು ನಮ್ಮ ಪ್ರಜೆಗಳನ್ನು ಅಷ್ಟು ತಾತ್ಸಾರ ದೃಷ್ಟಿಯಿಂದ ನೋಡಬಾರದು. ಶಾಸಕರು ಬೇಕಾದರೆ ಒಂದೊಂದು ದಿವಸ ಉಪವಾಸ ವ್ರತವನ್ನು ಮಾಡೋಣ. ನಾವು ಅದನ್ನು ಮಾಡಿ ಆಮೇಲೆ ಅವರಿಗೆ ಹೇಳೋಣ. ಅವರಿಗೆ ಒಂದು ಹೊತ್ತು ಊಟಕ್ಕೆ ಇಲ್ಲದೆ ಅವನು ರೋಗಿಯಾಗಿ ಆಸ್ಪತ್ರೆಗೆ ಹೋಗಿ ಮತ್ತೆ ಅಲ್ಲಿ ಕೂಡ ಉಪವಾಸವೇ ಇರುವಂಥಾದ್ದೆ ಆದರೆ ಕೊಲ್ಲುವುದೇ ಇರಾದೆಯಾಯಿತು, ಬೇರೆ ಏನು ವ್ಯವಸ್ಥೆ ಇಲ್ಲ. ಅದು ಏನೇ ಇರಲಿ, ನೀವು ಯುವಕರು ಆಗಿದ್ದೀರಿ. ನಿಮ್ಮ ಸರ್ಕಾರಕ್ಕೆ ಮೂರುವರೆ ವರ್ಷಗಳ ಆಯಸ್ಸು ಇದೆ. ಜೀವನದಲ್ಲಿ ಅಲ್ಲ. ಅದರಿಂದಾಗಿ ನೀವು ಏನಾದರೂ ಸಾಧನೆ ಮಾಡಿ, ಏನಾದರೂ ಹೊಸತನವನ್ನು ತೋರಿಸಿ, ನಾವಂತೂ ಕಳೆದ ಒಂದೂವರೆ ವರ್ಷದಿಂದ ಹೊಸ ಸರ್ಕಾರ ಬಂದಿದೆ ಎಂದು ಹೇಳುತ್ತಿದ್ದೇವೆ. ನಿಮ್ಮ ಸರ್ಕಾರದ ಹೊಸತನವೇನು? ಅದನ್ನಾದರೂ ಹೇಳಿ ನೀವು ನಿಮ್ಮ ಆರೋಗ್ಯ ಇಲಾಖೆಯಲ್ಲಿ ಏನು ಹೊಸದಾದ ಸಾಧನೆಯನ್ನು ಮಾಡಿದ್ದೀರಿ? ಬೇಡ. ನಿಮ್ಮ ಆತ್ಮ ತೃಪ್ತಿಗಾದರೂ ನೀವು ಹೊಸತನವನ್ನು ಸಾಧಿಸಿರಿ. ನಾನು ನನ್ನ ಕಾಲದಲ್ಲಿ ಇಂತಹ ಆಸ್ಪತ್ರೆಗಳಲ್ಲಿ ವೈದ್ಯರುಗಳನ್ನು ನೇಮಕ ಮಾಡಿದ್ದೇನೆ, ಇಂತಹ ಸವಲತ್ತುಗಳನ್ನು ಕೊಟ್ಟಿದ್ದೆನೆಂಬ ಹೆಗ್ಗಳಿಕೆ ನಿಮ್ಮಿಂದ ಬಂದರೆ ಸಾಕು. ಇನ್ನೊಂದು ಐದು ವರ್ಷಗಳಾದರೂ ನೀವು ಎಲ್ಲೂ ಹೋದರೂ ಹೇಳಿಕೊಂಡು ಬರಬಹುದು. ನಾನು ಆರೋಗ್ಯ ಸಚಿವನಾಗಿ ಹೀಗೆ ಮಾಡಿದ್ದೇನೆಂದು ಹೇಳಿಕೊಂಡಾದರೂ ಬರಬಹುದೆನ್ನುವಂತಹ ಮಾತನ್ನು ಹೇಳಿ.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಅಧ್ಯಕ್ಷರೆ, ಸುಮಾರು 850 ಕೋಟಿ ರೂಪಾಯಿಗಳ ಯೋಜನೆಯಿಂದ ವಿಶ್ವಬ್ಯಾಂಕ್‌ನಿಂದ, ಜರ್ಮನ್ ಯೋಜನೆಯಿಂದ ಹಣಕಾಸನ್ನು ತಂದಿದ್ದೇವೆ. ಸುಮಾರು ನಾಲ್ಕು ನೂರು ವೈದ್ಯರುಗಳನ್ನು ಭರ್ತಿ ಮಾಡುವುದಕ್ಕೆ.......

ಡಾ:ಎ.ಬಿ.ಮಲಕರೆಡ್ಡಿ:- ಹಿಂದಿನ ಸರ್ಕಾರದಲ್ಲಿ ಆಯಿತು.

ಶ್ರೀ ಎಂ.ಪಿ.ಪ್ರಕಾಶ್:- ತಮ್ಮ ಕಾಲದಲ್ಲಿ ಪ್ರಾರಂಭವಾಯಿತು. ಇವರ ಕಾಲದಲ್ಲಿ ಮುಕ್ತಾಯವಾಗಿದೆ. ಇದು ನಿರಂತರವಾದುದ್ದು. 400 ಜನ ವೈದ್ಯಾಧಿಕಾರಿಗಳ ನೇಮಕಾತಿಯನ್ನು ಲೋಕಸೇವಾ ಆಯೋಗದವರು ಈಗಾಗಲೇ ಪ್ರಾರಂಭ ಮಾಡಿದ್ದಾರೆ. ಜಿಲ್ಲಾಧಿಕಾರಿಗಳು ಪ್ರತಿಯೊಂದು ಖಾಲಿ ಇರುವಂತಹ ಹುದ್ದೆಗಳಿಗೆ ಗುತ್ತಿಗೆಯ ಆಧಾರದ ಮೇಲೆ ತೆಗೆದುಕೊಳ್ಳಬೇಕೆಂದು ಆಜ್ಞೆ ಮಾಡಿದ್ದಾರೆ. ತಾವು ಯುವಕರನ್ನು ಹರಸಬೇಕು.

ಶ್ರೀ ಯು.ಆರ್.ಸಭಾಪತಿ:- ನಾವು ಯುವಕರನ್ನು ಹಾರೈಸುವಷ್ಟು ಆಯುಷ್ಯವನ್ನು ಪಡೆದಿಲ್ಲ. ಅದಕ್ಕಿಂತಲೂ ಹೆಚ್ಚು ನನ್ನ ಕ್ಷೇತ್ರವಾದ ಉಡುಪಿಯಲ್ಲಿರುವಂತಹ ಆಸ್ಪತ್ರೆಯನ್ನು ನೋಡಿದರೆ ನನಗೆ ನಾಚಿಕೆಯಾಗುತ್ತದೆ. ಅಲ್ಲಿ ಒಂದು ಹೆಣ್ಣುಮಕ್ಕಳ

ಮತ್ತು ಮಕ್ಕಳ ಆಸ್ಪತ್ರೆ ಇದೆ. ಒಟ್ಟು 50 ಜನ ಹೆಣ್ಣುಮಕ್ಕಳಿಗೆ ಹೆರಿಗೆ ಕೇಂದ್ರವಾಗಿದೆ. 26 ಮಕ್ಕಳಿಗೆ.......

ಅಧ್ಯಕ್ಷರು:- ಉಡುಪಿಯಲ್ಲಿ ಅಷ್ಟೊಂದು ದೇವಸ್ಥಾನಗಳು, ಮಠಗಳು ಇವೆ. ಅಲ್ಲಿ ಖಾಯಿಲೆಯವರು ಇದ್ದಾರೆಂದರೆ ನಮಗೆ ಆಶ್ಚರ್ಯವಾಗುತ್ತದೆ. ದೇವರು ಸ್ವಲ್ಪ ಕರುಣೆಯನ್ನು ತೋರಿಸಬೇಕಾಗಿತ್ತು.

ಶ್ರೀ ಯು.ಆರ್.ಸಭಾಪತಿ:- ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ಬಿಟ್ಟರೆ ನಮ್ಮ ಉಡುಪಿ ಕ್ಷೇತ್ರದ ಆಸ್ಪತ್ರೆಯೇ ಅತ್ಯಂತ ದೊಡ್ಡ ಆಸ್ಪತ್ರೆಯಾಗಿದೆ. ಕಳೆದ ಎಂಟು ತಿಂಗಳಲ್ಲಿ ಇದ್ದ ಮಹಿಳಾ ವೈದ್ಯರು ನಿವೃತ್ತಿಯಾದ ಮೇಲೆ ಇವತ್ತಿಗೂ ಅಲ್ಲಿಗೆ ಒಬ್ಬರು ಪೋಸ್ಟಿಂಗ್ಸ್ ಮಾಡಿಲ್ಲ. ನಾನು ಈ ವಿಷಯವನ್ನು ಪ್ರಶ್ನೋತ್ತರ ವೇಳೆಯಲ್ಲಿ ಕೇಳಿದ್ದೆ. ಈ ರೀತಿಯಾದರೆ ಹೆಣ್ಣುಮಕ್ಕಳ ಗತಿ ಏನಾಗಬೇಕು? ಬಡಪಾಯಿ ಹೆಣ್ಣುಮಕ್ಕಳು ಸರ್ಕಾರಿ ಆಸ್ಪತ್ರೆ ಇದೆ ಎಂದು ಹೆರಿಗೆಗೆ ಹೋದರೆ ಅಲ್ಲಿ ಈ ಪರಿಸ್ಥಿತಿ ಇದೆ. ಆ ಆಸ್ಪತ್ರೆಗೆ ಒಬ್ಬ ಮುಸ್ಲಿಂ ಶ್ರೀಹಾಜಿ ಅಬ್ದುಲ್ ಸಾಹೇಬ್ ಎಂಬುವವರು ಸುಮಾರು 50 ವರ್ಷಗಳ ಹಿಂದೆಯೇ ಎರಡು ಎಕರೆ ಭೂಮಿಯನ್ನು ನಗರದ ಮಧ್ಯೆ ಉದಾರವಾಗಿ ದಾನ ಮಾಡಿದ್ದಾರೆ. ಇವತ್ತು ಈ ರೀತಿಯಾಗಿ ಹಿಂದಿನವರು ಕಲ್ಪಿಸಿಕೊಟ್ಟಂತಹ ಸೌಲಭ್ಯವನ್ನು ಉಪಯೋಗಿಸಲು ಮತ್ತು ಇಷ್ಟೆಲ್ಲಾ ಸೌಲಭ್ಯಗಳು ಇದ್ದು, ಈಗ 800 ಕೋಟಿ ರೂಪಾಯಿಗಳ ವಿಶ್ವ ಯೋಜನೆಗೆ ಎಂದು ಹೇಳಿದರು. ಆ ಕೋಟಿ ರೂಪಾಯಿಗಳ ಯೋಜನೆಗಳೆಲ್ಲಾ ಎಲ್ಲಿಗೆ ಹೋಯಿತು? ಎಲ್ಲಿ ನೇಮಕಾತಿಯನ್ನು ಮಾಡಿದ್ದೀರೆಂದು ಹೇಳಿ ನಾನು ನನ್ನ ಕ್ಷೇತ್ರದ ಬಗ್ಗೆ ಹೇಳುತ್ತಿದ್ದೇನೆ. ಉಡುಪಿ ಕ್ಷೇತ್ರ ಧಾರ್ಮಿಕ ಪುಣ್ಯ ಕ್ಷೇತ್ರ, ವಿದ್ಯಾಸಂಸ್ಥೆಯಲ್ಲಿ ಮುಂದೆ ಬಂದಿರುವಂಥಾದ್ದು, ಇಂತಹ ಕ್ಷೇತ್ರದಲ್ಲೇ ಈ ಪರಿಸ್ಥಿತಿಯಾದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಏನು ಎಂಬ ಪ್ರಶ್ನೆ ಬರುವುದು. ಆ ಜನರಿಗೆ ಎಷ್ಟು ಸೌಕರ್ಯ ಕೊಟ್ಟಿದ್ದಾರೆಂಬುದನ್ನು ನೀವು ದಯಮಾಡಿ ಹೇಳಬೇಕು. ನಾನು ಇನ್ನು ಅನೇಕ ವಿಚಾರಗಳನ್ನು ಹೇಳುವುದಿದೆ. ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳ ಮತ್ತು ಹೈಸ್ಕೂಲ್‌ಗಳ ಬಗ್ಗೆ ವಿಶೇಷವಾಗಿ ನಮ್ಮ ಗೌರವಾನ್ವಿತ ವಿದ್ಯಾ ಸಚಿವರಾದ ಮಾನ್ಯ ಗೋವಿಂದೇಗೌಡರು ಬಹಳಷ್ಟು ಕೆಲಸವನ್ನು ಮಾಡಿದ್ದಾರೆಂದರೆ ತಪ್ಪಾಗಲಾರದು. ಆದರೆ, ಎಷ್ಟೇ ಕೆಲಸವನ್ನು ಮಾಡಿದರೂ ಕೂಡ ಅಧಿಕಾರಿ ವರ್ಗದವರು ಅವರನ್ನು ತಪ್ಪು ದಾರಿಗೆ ತೆಗೆದುಕೊಂಡು ಹೋಗುತ್ತಾರೋ ಎಂಬ ಭೀತಿ ನನಗೆ ಇದೆ. ಇವತ್ತು ಮೌಲ್ಯ ಮಾಪನದ ಬಗ್ಗೆ ನಾನು ಮಾತನಾಡಿದ್ದೇನೆ. ನಾನು ಈ ವಿಷಯವಾಗಿ ಹಿಂದಿನ ಅಧಿವೇಶನದಲ್ಲೂ ಹೇಳಿದ್ದೇನೆ. ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಮೌಲ್ಯ ಮಾಪನದಲ್ಲಿ ಆಗತಕ್ಕಂಥ ಅನಾಹುತಗಳು ಮತ್ತು ಅನ್ಯಾಯಗಳು, ಇದರ ಬಗ್ಗೆ ಸರ್ಕಾರ ನಿರ್ದಿಷ್ಟವಾದ ಹೆಜ್ಜೆಯನ್ನು ಇಡಲೇಬೇಕು ಎಂದು ನಾನು ಕಳಕಳಿಯಿಂದ ವಿನಂತಿಸಿಕೊಂಡಿದ್ದೇನೆ. ಇದರ ಬಗ್ಗೆ ನಾನು ಏಕೆ ಕೇಳುತ್ತಿದ್ದೇನೆಂದರೆ ಸ್ವಲ್ಪ ಪ್ರಯತ್ನವನ್ನು ಮಾಡಿದರೂ ಕೂಡ ಮರು ಮೌಲ್ಯ ಮಾಪನವನ್ನು ಮಾಡಲು

ವ್ಯವಸ್ಥೆಯನ್ನು ಮಾಡಲೇ ಬೇಕು. ಸುಪ್ರೀಂ ಕೋರ್ಟ್ ತೀರ್ಮಾನವಿದ್ದರೆ, ಕಾನೂನು ನಿಯಮಾವಳಿಗೆ ವಿರುದ್ಧವಾಗಿ ಮಾಡಲಿಕ್ಕೆ ಆಗದಿದ್ದರೆ ನಿಯಮಾವಳಿಯನ್ನು ಬದಲು ಮಾಡಿಯಾದರೂ ಮರು ಮೌಲ್ಯ ಮಾಪನ ಮಾಡಬೇಕು. ಅಧಿಕಾರಿಗಳು ಹೇಳಬಹುದು ಮರುಮೌಲ್ಯಮಾಪನಕ್ಕೆ ಅವಕಾಶ ಇಲ್ಲ ಎಂದು. ಎಜುಕೇಷನ್ ಆ್ಯಕ್ಟ್‌ನಲ್ಲಿ ಮರು ಮೌಲ್ಯಮಾಪನಕ್ಕೆ ಅವಕಾಶವಿದೆ. ಯಾವುದೇ ಸಂದರ್ಭದಲ್ಲಿ ಮರು ಮೌಲ್ಯಮಾಪನ ಮಾಡುವಾಗ ಗೌವರ್ನಮೆಂಟ್ ರೂಲ್ಸ್ ನೀವು ಫ್ರೇಮ್ ಮಾಡಲಿಲ್ಲವೆನ್ನುವ ಸಂಶಯ ನನಗೆ ಇದೆ. ಅದನ್ನು ನೀವು ಸ್ಪಷ್ಟೀಕರಿಸಬೇಕು. ಆದರೆ ಯಾವುದೇ ಸಂದರ್ಭದಲ್ಲಿ ಮರು ಮೌಲ್ಯಮಾಪನ ಮಾಡುವ ಬಗ್ಗೆ ಮತ್ತೆ ಮತ್ತೆ ಹೇಳುವುದು ಏಕೆ ಎಂದರೆ, ಒಬ್ಬ ವಿದ್ಯಾರ್ಥಿ ಅವನು ಎಸ್.ಎಸ್.ಎಲ್.ಸಿ.ಯವರೆಗೂ ಶೇ.70, ಶೇ.80, ಶೇ.90ರಂತೆ ತೆಗೆದುಕೊಳ್ಳುತ್ತಾ, ಒಮ್ಮಿಂದೊಮ್ಮೆಗೆ ಪರೀಕ್ಷೆ ಫಲಿತಾಂಶ ಬಂದಾಗ ಎಲ್ಲಾ ವಿಷಯದಲ್ಲೂ ಶೇ. 60, ಶೇ.70 ಹೀಗೆ ತೆಗೆದುಕೊಂಡು ಒಂದು ಸಬ್ಜೆಕ್ಟ್‌ನಲ್ಲಿ 12, 5 ಮಾರ್ಕ್ಸ್ ತೆಗೆದುಕೊಂಡದರೆ ಅಲ್ಲಿ ಏನೊ ಒಂದು ನಡೆದಿದೆ ಎನ್ನುವ ಪ್ರಾರಂಭಿಕ ತನಿಖೆಯಲ್ಲೇ ಕಂಡುಬರುತ್ತದೆ. ಅದಕ್ಕೋಸ್ಕರ ಇವತ್ತು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡುವುದೇನೆಂದರೆ, ಮರುಮೌಲ್ಯಮಾಪನದ ಬಗ್ಗೆ ನೀವು ನಿಯಮಗಳನ್ನು ರಚಿಸುವಾಗ ಉದಾರತೆಯಿಂದ ಮಾಡಬೇಡಿ, ಮರುಮೌಲ್ಯಮಾಪನವನ್ನು ಮಾಡಿಸುವಂಥ ಯಾವುದೇ ವಿದ್ಯಾರ್ಥಿ ಹತ್ತು ಸಾವಿರ ರೂಪಾಯಿಗಳ ಡೆಪಾಸಿಟ್ ಅನ್ನು ಇಡಲಿ. ಆಮೇಲೆ ಅವನು ಡಿಪಾಸಿಟ್ ಇಡುವುದು ಮಾತ್ರವಲ್ಲ, ಅವನು ಅದಕ್ಕೆ ಅರ್ಜಿಯನ್ನು ಹಾಕಬೇಕೆಂದರೆ ಅವನು ಆ ಹಳ್ಳಿಯ ಶಿಕ್ಷಣ ಸಂಸ್ಥೆಯಲ್ಲಿ ಯಾರು ಮುಖ್ಯೋಪಾಧ್ಯಾಯರು ಇದ್ದಾರೆ, ಸಬ್ಜೆಕ್ಟ್ ಅನ್ನು ಕಳಿಸಿದಂಥ ಸಂಬಂಧಪಟ್ಟ ಅಧ್ಯಾಪಕನು ಯಾರಿದ್ದಾನೆ, ಅವನಿಂದ ಎರಡು ವರ್ಷಗಳ ಫಲಿತಾಂಶದ ಹಿನ್ನೆಲೆಯನ್ನು ನೀವು ಪರಿಶೀಲಿಸಿ, ಮುಖ್ಯೋಪಾಧ್ಯಾಯರ ಶಿಫಾರಸ್ಸುಗಳನ್ನು ಪರಿಶೀಲಿಸಿ, ಆಮೇಲೆ ಮರು ಮೌಲ್ಯಮಾಪನಕ್ಕೆ ಅವಕಾಶ ಮಾಡಿಕೊಡಿ ಎಂಬುದನ್ನು ನಾನು ಕೇಳಿಕೊಳ್ಳುತ್ತಿದ್ದೇನೆ. ಇದರಿಂದಾಗಿ ಅನ್ಯಾಯವಾಗುವುದಿಲ್ಲ. ಈ ಮರು ಮೌಲ್ಯಮಾಪನದಲ್ಲಿ ಏನಾದರೂ ಅನ್ಯಾಯ ಆಗಿ ಹೋಗಿದ್ದರೆ, ಅಂತಹ ಶಿಕ್ಷಕನಿಗೆ ನೀವು ಖಂಡಿತವಾಗಿಯು ಶಿಕ್ಷೆ ಕೊಡಬೇಕು. ಇದು ಬಹಳ ಅಗತ್ಯವಾಗಿದೆ. ನಮ್ಮ ಹುಡುಗರು ನಾಳೆ ಫಲಿತಾಂಶ ಬಂದಾಗ, ಆ ಫಲಿತಾಂಶದಲ್ಲಿ ಅವನ ಹೆಸರು ಇಲ್ಲದಿದ್ದಾಗ ಅವನು ಏನು ಮಾಡುತ್ತಾನೆ? ಹೆತ್ತವರನ್ನು ನೋಡುವುದಕ್ಕೆ ಹೋಗುವುದಿಲ್ಲ, ಅವನು ಬಹಳಷ್ಟು ಹೆದರಿ ಮನೆಗೆ ಹೋಗುವ ಭೀತಿಯನ್ನು ತಪ್ಪಿಸಿ, ಎಲ್ಲಿಯಾದರೂ ಅವನು ವಿಷವನ್ನು ತೆಗೆದುಕೊಂಡು ಸತ್ತುಹೋದರೆ, ಮತ್ತೆ ನಿಮ್ಮ ಮರುಮೌಲ್ಯಮಾಪನವನ್ನು ಮಾಡಿ ಹೆಚ್ಚಿನ ಅಂಕವನ್ನು ಹಾಕಬಹುದು ಆದರೆ ಆ ವಿದ್ಯಾರ್ಥಿಯನ್ನು ಮತ್ತೆ ತರುವುದಕ್ಕೆ ಸಾಧ್ಯವಿಲ್ಲ. ಇಂತಹ ಪಾಪದ ಕೆಲಸಕ್ಕೆ ನಾವು ಏತಕ್ಕೆ ಹೊಣೆಗಾರರಾಗಬೇಕು? ಇದರ ಬಗ್ಗೆ ಒಂದು ರಚನಾತ್ಮಕವಾದ ನಿರ್ಧಾರವನ್ನು ತೆಗೆದುಕೊಳ್ಳಿ, ನಿಮ್ಮ ಸಚಿವಸಂಪುಟದಲ್ಲಿ ನಿರ್ಧಾರವನ್ನು ತೆಗೆದುಕೊಂಡು, ಅದಕ್ಕೆ

ನಿಯಮಾವಳಿಯಲ್ಲಿ ಬದಲಾವಣೆ ಮಾಡುವುದಿದ್ದರೆ ಮಾಡಿಕೊಳ್ಳಿ. ಪ್ರಾಥಮಿಕ ಹಂತದ ಶಿಕ್ಷಣವನ್ನು ಇನ್ನಷ್ಟು ಹೆಚ್ಚಿಗೆ ಉದಾರತೆಯಿಂದ ನೋಡಬೇಕಾಗಿದೆ. ಪ್ರಾಥಮಿಕ ಶಿಕ್ಷಣಕ್ಕೆ ಇನ್ನಷ್ಟು ಹೆಚ್ಚಿಗೆ ಹಣವನ್ನು ಒದಗಿಸಲೇಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್:- ಮಾನ್ಯ ಸಭಾಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಹತ್ತು ವರ್ಷದ ಬಾಲಕ ಟೆಸ್ಟ್‌ನಲ್ಲಿ ಫೇಲ್ ಆಗಿಬಿಟ್ಟೆ ಎಂದು ಸೀಮೆಣ್ಣೆಯನ್ನು ಹಾಕಿಕೊಂಡು ಮೊನ್ನೆ ಸತ್ತುಹೋಗಿಬಿಟ್ಟ. ನಾವು ವಿದ್ಯಾಭ್ಯಾಸದಲ್ಲಿ ಯಾವ ರೀತಿ ಒಂದು ನಿರ್ದೇಶನವನ್ನು ಕೊಡುತ್ತಿದ್ದೇವೆ ಎನ್ನುವುದಕ್ಕೆ ಒಂದು ಉದಾಹರಣೆ. ನಾಲ್ಕನೆ ತರಗತಿಯ ಹುಡುಗ ಅವನೇ ಸೀಮೆಣ್ಣೆ ಹಾಕಿಕೊಂಡು ಬೆಂಕಿಯಲ್ಲಿ ಸುಟ್ಟುಕೊಂಡು ಆತ್ಮಹತ್ಯೆ ಮಾಡಿಕೊಳ್ಳಬೇಕು ಎನ್ನುವ ಪ್ರಜ್ಞೆಯನ್ನು ಶಿಕ್ಷಣದಲ್ಲಿ ನಾವು ಇವತ್ತು ಬೆಳೆಸುತ್ತಿದ್ದೇವೆ. ಆ ಟೆಸ್ಟ್‌ನಲ್ಲಿ ಹೀಗೆ ಮಾರ್ಕ್ಸ್ ಕೊಟ್ಟು, ಫೇಲ್ ಆದವರನ್ನು ಹಂಗಿಸಿ, ಆ ಮಟ್ಟಕ್ಕೆ ನಾವು ತಂದಿದ್ದೇವೆ. ಸಭಾಧ್ಯಕ್ಷರೆ, ಹತ್ತು ವರ್ಷದ ಬಾಲಕ, ಇದು ಮೊನ್ನೆ ಸಂಜೆ ನಡೆದಿರುವ ಘಟನೆ. ನಾವು ಶಿಕ್ಷಣದಲ್ಲಿ ಯಾವುದಕ್ಕೆ ಒತ್ತು ಕೊಡಬೇಕೆನ್ನುವುದು ಒಂದು ಪ್ರಶ್ನೆಯಾಗಿದೆ.

ಶ್ರೀ ಯು.ಆರ್.ಸಭಾಪತಿ:- ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದಂಥ ಉದಾಹರಣೆಗಳು ಈ ರಾಜ್ಯಾದ್ಯಂತ ಬಹಳಷ್ಟು ನಾವು ಕೇಳಿದ್ದೇವೆ. ನಾವು ಆಯ್ಕೆಯಾಗಿ ಇಲ್ಲಿ ಬಂದ ಮೇಲೆ, ಇದರ ಬಗ್ಗೆ ಒಂದು ಗಂಭೀರವಾದಂಥ ನಿರ್ಣಯವನ್ನು ತೆಗೆದುಕೊಳ್ಳಬೇಕು. ಇದರಲ್ಲಿ ಪಕ್ಷಭೇದವಿಲ್ಲದೆ, ಯಾವುದೇ ರೀತಿಯಲ್ಲಿ ಒಂದು ನಿರ್ದಿಷ್ಟವಾದ ಒಂದು ಹೆಜ್ಜೆಯನ್ನು ಇಟ್ಟರೆ, ಸರ್ಕಾರಕ್ಕೆ ಕೀರ್ತಿ ಬರುತ್ತದೆಂದು ಹೇಳುತ್ತೇನೆ. ಅದರ ಜೊತೆಗೆ ಈಗೇನು ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಇಲಾಖೆಯವರು ಗ್ರಾಮಾಂತರ ಪ್ರದೇಶಗಳ ಶಾಲೆಗಳಿಗೆ ಕಟ್ಟಡವನ್ನು ಕಟ್ಟುವುದಕ್ಕೆ ಕೊಡುವ ಸೌಲಭ್ಯವನ್ನು ಇನ್ನಷ್ಟು ಹೆಚ್ಚಿಗೆ ಕೊಡಬೇಕೆಂದು ನನ್ನ ವಾದವಾಗಿದೆ. ಏಕೆಂದರೆ, ಇವತ್ತು ನಾನೇ ಶಾಸಕನಾಗಿ ನನ್ನ ಕ್ಷೇತ್ರದಲ್ಲಿ ಸುಮಾರು ಹದಿನೈದಕ್ಕೂ ಹೆಚ್ಚು ಎಲಿಮೆಂಟರಿ ಶಾಲೆಗಳಿಗೆ ಹೋಗಿ ಬೆಟರ್‌ಮೆಂಟ್ ಕಮಿಟಿಯನ್ನು ರೂಪಿಸಿ, ಅಲ್ಲಿಯ ಸಾರ್ವಜನಿಕರ್ನು ಒಟ್ಟಗೂಡಿಸಿ, ಎಲ್ಲಾ ಶಾಲೆಯವರು, ಹೆತ್ತವರು ನಾವೆಲ್ಲಾ ಭಿಕ್ಷೆಬೇಡುವುದೊಂದೇ ಕೆಲಸವಾಗಿದೆ. ಪ್ರಾಥಮಿಕ ಹಂತದ ಶಿಕ್ಷಣವನ್ನು ಬಲಾಢ್ಯವಾಗಿ ಮಾಡಬೇಕಾದರೆ, ಆ ವಿದ್ಯಾರ್ಥಿಗಳಿಗೆ ಶಿಕ್ಷಣದ ಸೌಲಭ್ಯವನ್ನು ಕೊಡಬೇಕೆಂದಾದರೆ, ದೊಡ್ಡ ದೊಡ್ಡ ಶ್ರೀಮಂತರೆಲ್ಲಾ ಈ ಆಂಗ್ಲ ಮಾಧ್ಯಮ ಶಾಲೆಗಳಿಗೆ, ದೊಡ್ಡ ದೊಡ್ಡ ಶಾಲೆಗಳಿಗೆ ಹಣವನ್ನು ಕೊಡುವಂತ ಸಾಮರ್ಥ್ಯವಿದೆ, ಅಲ್ಲಿ ಸಾಕಷ್ಟು ಸೌಲಭ್ಯವಿದೆ, ಹೋಗುತ್ತಾರೆ. ಆದರೆ ಇಲ್ಲಿ ಈ ಗ್ರಾಮಾಂತರ ಪ್ರದೇಶದ ಒಬ್ಬ ವಿದ್ಯಾರ್ಥಿ ಅಲ್ಲಿ ಶಾಲೆಗೆ ಹೋದರೆ, ನೂರು ವಿದ್ಯಾರ್ಥಿಗಳಿಗೆ ಏಕೋಪಾಧ್ಯಾಯ ಎನ್ನುವುದು ಈಗಲೂ ಇದೆ. ನೀವು ಶಿಕ್ಷಕರ ನೇಮಕಾತಿಯನ್ನು ಸಾಕಷ್ಟು ಮಾಡಿದ್ದೀರಿ, ಆದರೆ ಇನ್ನಷ್ಟು ಹೆಚ್ಚಿಗೆ ಮಾಡಬೇಕು. ಅದಲ್ಲದೆ, ಶಿಕ್ಷಕೇತರ ಸಿಬ್ಬಂದಿಗಳನ್ನು ನೇಮಕಾತಿ ಮಾಡುವಲ್ಲೂ ಕೂಡ ನೀವು ಮುಂದೆ

ಬರಬೇಕೆಂದು ನಾನು ಹೇಳುತ್ತೇನೆ. ಎಷ್ಟೋ ಶಾಲೆಗಳಿಗೆ ಹೋದಾಗ ವಿದ್ಯಾರ್ಥಿಗಳು ಕಸವನ್ನು ಗುಡಿಸುತ್ತಿರುತ್ತಾರೆ. ಏತಕ್ಕೆ ಎಂದು ಕೇಳಿದರೆ, ಎಲ್ಲಾ ಕೆಲಸವನ್ನು ಮುಖ್ಯೋಪಾಧ್ಯಾಯ ಅವನೊಬ್ಬನೇ ಮಾಡಬೇಕು. ಅವನು ವಿದ್ಯಾರ್ಥಿಗಳ ಹತ್ತಿರ ಕಸಗುಡಿಸುವಂಥ ಪರಿಸ್ಥಿತಿ ಇದೆ. ಯಾರಾದರೂ ದೊಡ್ಡ ಮನುಷ್ಯರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿದಾಗ, ಅವನನ್ನು ಕಸಗುಡಿಸುವುದಕ್ಕೆ ಬಿಟ್ಟರೆ, ಏನು ಹೇಳುತ್ತೀರಿ? ಒಬ್ಬ ಬಡವ ಮಾತ್ರ ಅವನು ಕೇಳುವುದಿಲ್ಲ, ಏನು ಮಾಡಬೇಕು ವಿದ್ಯೆ ಬೇಕು. ಅವನ ಮಗ ಕಸವನ್ನು ಗುಡಿಸಿದ್ದನ್ನು ಬಂದು ಹೇಳಿದರೆ, ಹೋಗು ಹೋಗೋ ಕಸಗುಡಿಸು ನಿನ್ನ ಹಣೆಬರಹ ಇಷ್ಟೆ ಎಂದು ಹೇಳಿಬಿಡುತ್ತಾರೆ. ಆದರೆ ಇದನ್ನೆಲ್ಲಾ ನೀವು ಗಮನಕ್ಕೆ ತೆಗೆದುಕೊಂಡು ಆರ್ಥಿಕ ತೊಂದರೆ ನಮಗೆ ಇದೆ ಎನ್ನುವುದನ್ನು ಮೂಲೆಗಿಟ್ಟು, ಏನಾದರೂ ಒಂದು ರೀತಿಯಲ್ಲಿ, ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಅರ್ಥ ಸಚಿವರಾದ ಉಪಮುಖ್ಯಮಂತ್ರಿಗಳಿಲ್ಲ, ವಿದ್ಯಾ ಇಲಾಖೆಗೆ ನನ್ನ ಆಗ್ರಹ ಏನೆಂದರೆ, ಇನ್ನಷ್ಟು ಹೆಚ್ಚಿಗೆ ಹಣವನ್ನು ಕೊಡಬೇಕು, ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ, ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಸೌಲಭ್ಯಗಳನ್ನು ಹೆಚ್ಚಿಸುವುದಕ್ಕೆ ನಾನು ಬಹಳಷ್ಟು ಒತ್ತಾಯವನ್ನು ತರುತ್ತೇನೆ. ಇನ್ನು ಅನೇಕ ಹತ್ತೊಂಬತ್ತು ಇಲಾಖೆಗಳಿವೆ, ಅದರಲ್ಲಿ ಒಂದು ಐದಾರು ಇಲಾಖೆಗಳ ಬಗ್ಗೆ ಮಾತ್ರ ನಾನು ಪ್ರಸ್ತಾಪ ಮಾಡುತ್ತೇನೆ. ಅದರಲ್ಲೂ ಹೆಚ್ಚು ಕಾಲಾವಕಾಶ ಇಲ್ಲದೆ ಇರುವುದರಿಂದ, ನಾನು ಸರ್ಕಾರಿ ಸೇವೆಯಲ್ಲಿರತಕ್ಕಂಥ ಸರ್ಕಾರಿ ನೌಕರರ ನಿವೃತ್ತಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಇವತ್ತು ಯಾವುದೇ ಒಬ್ಬ ಸರ್ಕಾರ ನೌಕರನಿರಲಿ, ಅವನು ನಿವೃತ್ತಿಯಾದ ಮೇಲೆ ಅವನ ಪರಿಸ್ಥಿತಿ ಏನು? ಅವನಿಗೆ ಕೊಡತಕ್ಕಂಥ ನಿವೃತ್ತಿ ವೇತನಕ್ಕೆ ಅವನು ಎಷ್ಟು ವರ್ಷಗಳ ಕಾಲ ಕುಣಿಯಬೇಕಾಗುತ್ತದೆ ಎನ್ನುವುದನ್ನು ಇದನ್ನು ನೀವು ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಕೇಂದ್ರಸರ್ಕಾರದ ಮಾದರಿಯಲ್ಲಿ ಅನೇಕ ಕೆಲವು ಕಾರ್ಯಾತ್ಮಕ ಸಲಹೆಗಳನ್ನು ಜಾರಿಗೊಳಿಸಿದರೆ, ಖಂಡಿತವಾಗಲೂ ಪರಿಸ್ಥಿತಿ ಸುಧಾರಿಸುತ್ತದೆಂದು ನಾನು ಹೇಳಬಯಸುತ್ತೇನೆ. ಕೇಂದ್ರ ಸರ್ಕಾರದ ಸಾರ್ವಜನಿಕ ದೂರು ಮತ್ತು ಪಿಂಚಣಿ ಇಲಾಖೆ ಇವರು ಕಾಲಕಾಲಕ್ಕೆ ಹೊರಡಿಸುವ ಕೆಲವು ಆದೇಶಗಳನ್ನು ನೀವು ನೋಡಿ. ಏಕೆಂದರೆ ಬೇರೆ ಬೇರೆ ರಾಜ್ಯಗಳಲ್ಲಿ, ಕೇಂದ್ರಸರ್ಕಾರದ ಪಿಂಚಣಿ ಇಲಾಖೆಯವರು ಕೊಡತಕ್ಕಂಥ ಆದೇಶಗಳು ಏನಿವೆ ಅದರಲ್ಲಿ ಈ ಸರ್ಕಾರದ ನೌಕರರಿಗೆ ಯಾವರೀತಿಯಲ್ಲಿ ನಿವೃತ್ತಿವೇತನವನ್ನು ಕೊಡಲಾಗುತ್ತದೆ? ನಿವೃತ್ತಿಯಾಗತಕ್ಕಂಥ ಒಬ್ಬ ಸರ್ಕಾರಿ ನೌಕರ, ಆರು ತಿಂಗಳ ಮೊದಲೇ ಅವನು ತನ್ನ ಪೇಪರ್‌ಗಳನ್ನು ಪುಟ್ ಅಪ್ ಮಾಡಿಕೊಂಡು ನಿವೃತ್ತಿಯ ದಿವಸ, ಅವನು ಎಷ್ಟು ವರ್ಷ ಸೇವೆ ಮಾಡಿದ್ದಾನೆ ಎನ್ನುವ ದೃಷ್ಟಿಯಿಂದ ಅವನಿಗೆ ನಿವೃತ್ತಿಯ ವೇತನವನ್ನು ಕೊಡುವಂಥ ಸೌಲಭ್ಯಕ್ಕೆ, ಒಂದು ಅವಕಾಶವನ್ನು ನೀವು ಮಾಡಬೇಕೆನ್ನುವುದನ್ನು ನಾನು ಬಹಳ ಗಂಭೀರವಾಗಿ ಹೇಳುತ್ತೇನೆ. ಕೇಂದ್ರ ಸರ್ಕಾರದ ನೀತಿಗಳಲ್ಲಿ ನಿವೃತ್ತಿ ಹೊಂದಿರುವ ನೌಕರನು ಪೆನ್ಷನ್‌ಗಾಗಿ ಅರ್ಜಿಯನ್ನು ಸಲ್ಲಿಸುವ ಬದಲು ಸದರಿ ನೌಕರನ

ಮೇಲಾಧಿಕಾರಿಯೇ ನಿವೃತ್ತಿಯಾಗುವ ದಿನಾಂಕಕ್ಕೆ ಎರಡು ವರ್ಷ ಮೊದಲೇ ನೌಕರನಿಂದ ಅರ್ಜಿಯನ್ನು ಪಡೆಯುತ್ತಾನೆ. ಪ್ರತಿಯೊಬ್ಬ ಅಧಿಕಾರಿ, ತನ್ನ ಅಧೀನದಲ್ಲಿ ದುಡಿಯುತ್ತಿರುವ ನೌಕರರಲ್ಲಿ ಮುಂದಿನ ಎರಡು ವರ್ಷಗಳಲ್ಲಿ ನಿವೃತ್ತರಾಗುವ ನೌಕರರ ಪಟ್ಟಿಯನ್ನು ತಯಾರಿಸಿ, ಅಂಥ ನೌಕರರಿಂದ ಅರ್ಜಿಯನ್ನು ತರಿಸಿಕೊಳ್ಳುತ್ತಾರೆ. ಸದರಿ ಪ್ರತಿಯನ್ನು ಆರು ತಿಂಗಳಿಗೊಮ್ಮೆ ಆಡಿಟ್ ಕಛೇರಿಗೆ ಸಲ್ಲಿಸಿ, ಇದರಿಂದಾಗಿ ಎಲ್ಲಾ ಕಛೇರಿಗಳಲ್ಲೂ ನಿವೃತ್ತಿಯ ಪ್ರಕ್ರಿಯೆಗೆ ಚಾಲನೆ ನೀಡಿದಂತಾಗುತ್ತದೆ. ನಿವೃತ್ತಿಯನ್ನು ಲೆಕ್ಕಾ ಹಾಕುವುದಕ್ಕೆ ನೌಕರನ ಎಸ್.ಆರ್.ಸೇವಾ ಪುಸ್ತಕ ಮೂಲಾಧಾರ. ಕೇಂದ್ರ ಸರ್ಕಾರದ ನೌಕರನು ಕೆಲಸಕ್ಕೆ ಸೇರಿದ ತಕ್ಷಣ ಅವನ ಮೇಲಾಧಿಕಾರಿ ಎಸ್.ಆರ್. ಅನ್ನು ಪ್ರಾರಂಭಿಸುತ್ತಾನೆ. ಕಾಲಕಾಲಕ್ಕೆ ಇದರಲ್ಲಿ ಸೂಕ್ತ ದಾಖಲೆಯನ್ನು ಮಾಡಿ, ಪ್ರತಿ ಎರಡು ವರ್ಷಗಳಿಗೊಮ್ಮೆ ನೌಕರನಿಗೆ ತೋರಿಸಲಾಗುತ್ತದೆ. ಈ ರೀತಿ ಅನೇಕವಿವೆ, ಇದನ್ನು ನಾನು ವಿವರಿಸುವುದಕ್ಕೆ ಹೋದರೆ ತುಂಬಾ ಇದೆ, ಆದರೆ ಸರ್ಕಾರ ಇದರ ಬಗ್ಗೆ ಗಂಭೀರವಾದ ಒಂದು ನಿರ್ಧಾರವನ್ನು ತೆಗೆದುಕೊಂಡು, ಕೊನೆಯ ಪಕ್ಷ ನಿಮ್ಮ ಸರ್ಕಾರದ ಆಡಳಿತ ಪ್ರಾರಂಭವಾದಂದಿನಿಂದ, ನಿಮ್ಮ ಸರ್ಕಾರದ ನಿರ್ಣಯದಿಂದಾಗಿ ಸರ್ಕಾರಿ ನೌಕರನಿಗೆ ನಿವೃತ್ತಿ ವೇತನವನ್ನು, ಆತ ಶಿಕ್ಷಕನಿರಬಹುದು, ಅಥವಾ ಸರ್ಕಾರಿ ನೌಕರನಿರಬಹುದು ಯಾರೇ ಇರಲಿ, ಅವನು ನಿವೃತ್ತಿಯಾದ ಮೇಲೆ ಅವನು ನಿವೃತ್ತಿಯ ವಯಸ್ಸಿನಲ್ಲಿ ಇದ್ದ ಆ ಕಛೇರಿಗಳಿಗೆಲ್ಲಾ ಓಡಾಡುವಂಥ ಒಂದು ಹವ್ಯಾಸವನ್ನು ತಪ್ಪಿಸಿ. ಆ ಅವ್ಯವಸ್ಥೆಯಿಂದ ಅವರನ್ನು ಮುಕ್ತರನ್ನಾಗಿ ಮಾಡಿದರೆ ಖಂಡಿತವಾಗಿಯೂ ನಿಮ್ಮ ಸರ್ಕಾರಕ್ಕೆ ಒಂದು ಕೀರ್ತಿ ಬರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಮುಖ್ಯವಾಗಿ, ನಮ್ಮ ಸಾರಿಗೆ ಸಚಿವರು ಇಲ್ಲಿದ್ದಾರೆ. ಸಾರಿಗೆ ಸಚಿವರ ಬಗ್ಗೆ, ನಮ್ಮ ವಾಟಾಳ್ ನಾಗರಾಜ್‌ರವರ ಶಬ್ದದಲ್ಲಿ ಹೇಳುವುದಾದರೆ, ನನಗೆ ಅಪಾರವಾದ ನಂಬಿಕೆ, ವಿಶ್ವಾಸ ಇತ್ತು. ಈ ಸಾರಿಗೆ ಇಲಾಖೆ, ಇವತ್ತು ಕೆಇಬಿ, ಇವೆರಡೂ ಸಾಧಾರಣ ಮಟ್ಟಿಗೆ ಒಂದೇ ರೀತಿಯ ವ್ಯವಸ್ಥೆಯಲ್ಲಿರುವಂಥ ಸಂಸ್ಥೆಗಳು. ಸ್ವಾಮಿ, ಕೆಇಬಿನಲ್ಲಿ ನಷ್ಟವಾಗುತ್ತದೆ, ನಷ್ಟವಾಗುವುದಕ್ಕೆ ಕೆಲವೊಂದು ಕಾರಣಗಳಿರುತ್ತವೆ. ನಾವು ಮೊನ್ನೆ ಸಬ್ ಕಮಿಟಿಯಲ್ಲಿ ಕುಳಿತುಕೊಂಡು ನೋಡುವಾಗ, ಬೇರೆ ಬೇರೆ ರೀತಿಯ ನಷ್ಟಗಳಿವೆ. ಅದರಲ್ಲಿ ಅಧಿಕಾರಿಗಳಿಂದಲೂ ಕೆಲವು ವ್ಯವಸ್ಥಿತವಾದಂಥ ಒಂದು ರೀತಿಯ ಪೂಲ್ ನಡೆಯುವಂಥದ್ದಿದೆ. ಆದರೆ ನಿಮ್ಮ ಸಾರಿಗೆಯಲ್ಲಿರತಕ್ಕಂಥ ಕೆಎಸ್‌ಆರ್‌ಟಿಸಿ ಏನಿದೆ, ಇದು ಒಂದು ದೊಡ್ಡ ಅನಾಹುತವೇ. 450 ಕೋಟಿ ರೂಪಾಯಿಗಳ ನಷ್ಟವನ್ನು ಹೊಂದುವಂಥ ಈ ಒಂದು ಸಂಸ್ಥೆಯಲ್ಲಿ ಏನೋ ದೊಡ್ಡ ಕುಂದುಕೊರತೆ ಇದೆ. ಅದು ಪ್ರಾಯಶಃ ತಮಗೂ ಗೊತ್ತಿದೆ. ತಾವು ಈ ಹಿಂದೆ ಸಾರಿಗೆ ಸಚಿವರಾಗಿದ್ದಾಗಲೂ ಕೂಡ ಈ ಬಗ್ಗೆ ಬಹಳಷ್ಟು ಕೆಲಸವನ್ನು ಮಾಡಿದ್ದೀರಿ. ನಮ್ಮ ಮಾಜಿ ಸಚಿವರಾದ ಮಾನ್ಯ ಬೀಳಿಗಿಯವರು ಬಹಳ ಒಳ್ಳೆಯ ಮನುಷ್ಯರು, ಇದರ ಬಗ್ಗೆ ಬಹಳಷ್ಟು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಆದರೆ ಅವರ ಹದ್ದುಬಸ್ತಿನಲ್ಲಿ ಈ ಅಧಿಕಾರಿಗಳು ಸಿಗುತ್ತಿರಲಿಲ್ಲ. ಈ ಅಧಿಕಾರಿಗಳು ಪಾಪ ಸಾರಿಗೆ

ಸಚಿವರಿಗೆ, ಚೆನ್ನಾಗಿ ಮಾತನಾಡಿ, ಮಾತನಾಡಿ, ಮಾತನಾಡಿ, ಒಳಗಿಂದ ಒಳಗೆ ಮಾಡಿದ ಪಿತೂರಿಗಳು ಎಷ್ಟೋ ಏನೋ? ಈ 450 ಕೋಟಿ ರೂಪಾಯಿಗಳು ಏನಾದರೂ ಹೆಚ್ಚು ಕಡಿಮೆಯಾಗಿದ್ದರೆ, ನಾವೆಲ್ಲಾ ಹೇಳಬಹುದು, ಅದು ಕೆಎಸ್‌ಆರ್‌ಟಿಸಿ ಬಸ್‌ನ ಕಂಡಕ್ಟರ್ ಮೇಲೆ ಆರೋಪವನ್ನು ಹಾಕಬಹುದು, ಚಾಲಕರ ಮೇಲೆ ಆರೋಪವನ್ನು ಹಾಕಬಹುದು, ಚಾಲಕರು ಸಾರ್ವಜನಿಕರು collude ಆಗಿ ಸಂಸ್ಥೆಗೆ ನಷ್ಟವನ್ನು ತರುತ್ತಿದ್ದಾರೆಂದು ಹೇಳುವುದನ್ನು, ನಾನು ಸ್ವಲ್ಪ ಮಟ್ಟಿಗೆ ಒಪ್ಪುತ್ತೇನೆ. ಇದನ್ನೂ ನಾನು ಶೇಕಡ 10ರಷ್ಟು ಒಪ್ಪುತ್ತೇನೆ. ಆದರೆ ಶೇಕಡ 90ರಷ್ಟು ನಿಮ್ಮ ಕೆಎಸ್‌ಆರ್‌ಟಿಸಿಯ ಒಳಗೆ ಇರತಕ್ಕಂಥ ಜನ ಯಾರಿದ್ದಾರೆ ಅವರು ಇದಕ್ಕೆ ಹೊಣೆಗಾರರು. ಇದಕ್ಕೆ ನಾನು ಸ್ಪಷ್ಟವಾಗಿ ಚಿತ್ರಣವನ್ನು ನಿಮಗೆ ಕೊಡುತ್ತೇನೆ, ನಾನು ಹೆಚ್ಚಿಗೆ ಮಾತನ್ನಾಡುವುದಕ್ಕೆ ಹೋಗುವುದಿಲ್ಲ. ಇದೊಂದು ದೊಡ್ಡ ಹಗರಣ. ತೋಟಗಾರಿಕೆ ಇಲಾಖೆಯ ಒಂದು ಹಗರಣವನ್ನು ನಾನು ಸ್ಪಷ್ಟವಾಗಿ ಏನು ಹೇಳಿದ್ದೇನೆ. ಅದೇ ರೀತಿಯ ಹಗರಣ ನಿಮ್ಮಲ್ಲೂ ನಡೆದಿದೆ. ಸ್ವಾಮಿ ವರ್ಷಕ್ಕೆ ಎಂಟು ಕೋಟಿ ರೂಪಾಯಿಗಳ ಸ್ಪ್ರಿಂಗ್ ಲೀವ್ಸ್ ಅನ್ನು ನೀವು ಖರೀದಿ ಮಾಡುತ್ತೀರಿ, ಇದನ್ನು ನೀವು ಪ್ರತಿವರ್ಷ ಕೊಂಡುಕೊಳ್ಳುತ್ತೀರಲ್ಲವೇ? ಇದನ್ನು ಯಾವ ರೀತಿಯಲ್ಲಿ ಖರೀದಿ ಮಾಡುತ್ತಿದ್ದೀರಿ? ಸ್ಪರ್ಧಾತ್ಮಕವಾದ ಬೆಲೆ, ಮಾನ್ಯ ಸುದರ್ಶನ್‌ರವರು ಮೇಲ್ಮನೆಯಲ್ಲಿ ಹೇಳಿದ್ದುದು ಇರಬಹುದು ಆದರೆ ನಾನು ಸ್ಪಷ್ಟವಾದ ರೂಪುರೇಷೆಗಳನ್ನು ಕೊಡುತ್ತಿದ್ದೇನೆ. ಒಂದು ಮೆಟ್ರಿಕ್‌ಟನ್‌ಗೆ 34 ಸಾವಿರ ರೂಪಾಯಿಯಂತೆ 27 ಸಾವಿರ ಮೆಟ್ರಿಕ್ ಟನ್ ಕೊಂಡುಕೊಳ್ಳಲಿಕ್ಕೆ ಜನ ಮುಂದೆ ಬಂದರೂ ಕೂಡ ಟೆಂಡರ್ ಕರೆದು ಪರ್ಚೇಸ್ ಮಾಡಬೇಕಾಗಿತ್ತು. ಆ ಕೆಲಸವನ್ನು ನಿಮ್ಮ ಸಂಸ್ಥೆ ಮಾಡಿಲ್ಲ. 27ಸಾವಿರ ರೂಪಾಯಿಗೆ ಕೊಂಡುಕೊಳ್ಳುವಂತಹ ಏನು ಸ್ಪ್ರಿಂಗ್ಸ್ ಇವೆ, ವರ್ಷಕ್ಕೆ 2 ಕೋಟಿ ರೂಪಾಯಿ ಸ್ಪ್ರಿಂಗ್ಸ್‌ಗಳನ್ನು 34 ಸಾವಿರ ರೂಪಾಯಿಗೆ ಒಂದು ಮೆಟ್ರಿಕ್‌ಟನ್ ಕೊಂಡುಕೊಳ್ಳುತ್ತೀರಿ ಅಂದರೆ ಈ ಹಗರಣದೊಳಗೆ ಯಾರೆಲ್ಲ ಅಧಿಕಾರಿಗಳು ಶಾಮೀಲಾಗಿದ್ದಾರೆ? ಇದನ್ನು ಯಾರು ಬರೆದಿದ್ದಾರೆ ಎನ್ನುವುದನ್ನು ಮತ್ತೆ ಹೇಳುತ್ತೇನೆ. ಈಗ ಹೇಳುವುದಿಲ್ಲ. ಆಮೇಲೆ ಸುಮಾರು 75 ಲಕ್ಷ ಮೌಲ್ಯದ ಫೋಮ್ ಸೀಟುಗಳು 50 ಸೆಟ್ಟುಗಳಿಗೆ ಯಾವುದೇ ಟೆಂಡರ್ ಕರೆಯದೆ, ಪರ್ಚೇಸ್ ಆಗಿದೆ. ಪರ್ಚೇಸ್ ಪ್ರೊಸೀಜರ್ ಅದೆಲ್ಲ ಬಿಟ್ಟುಬಿಟ್ಟಿದ್ದಾರೆ. ಕಡಿಮೆ ಬೆಲೆಗೆ ಕೊಡಲಿಕ್ಕೆ ಹಲವಾರು ಸಂಸ್ಥೆಗಳು ಮುಂದೆ ಬಂದಿದ್ದರೂ ಕೂಡ, ಅದನ್ನೆಲ್ಲ ಬದಿಗೊತ್ತಿ ಹೆಚ್ಚಿನ ಕ್ರಯದಲ್ಲಿ ನಿವು ಕೊಂಡುಕೊಂಡಿದ್ದೀರಿ. ಆಮೇಲೆ ಪ್ರತಿ ವರ್ಷ 12ರಿಂದ 14 ಕೋಟಿ ರೂಪಾಯಿಗಳ ಮೌಲ್ಯದ ಟ್ರೇಡ್ ರಬ್ಬರ್ ಕೊಳ್ಳುತ್ತಿದ್ದೀರಿ ನೀವು ವರ್ಷಂಪ್ರತಿ. ಏನು ಸ್ವಾಮಿ ಅದರ ಗುಣಮಟ್ಟ ಪರೀಕ್ಷೆ ಮಾಡಿದ್ದೀರಾ? ಇಲ್ಲ. ಗುಣಮಟ್ಟ ಪರಿಶೀಲಿಸದೆ ಹೆಚ್ಚಿನ ಕ್ರಯಕ್ಕೆ ನೀವು ಪರ್ಚೇಸ್ ಮಾಡುತ್ತಿದ್ದೀರಿ. ಇದರ ಹಿನ್ನೆಲೆಯೇನು? ಪರ್ಚೇಸಿಂಗ್ ಪ್ರೊಸೀಜರ್ ಏನಿದೆ ಅದನ್ನೆಲ್ಲ ಬದಿಗೊತ್ತಿದ್ದಾರೆ. ವರ್ಷಕ್ಕೆ 12 ರಿಂದ 14 ಕೋಟಿ ರೂಪಾಯಿಗಳ ಮೌಲ್ಯದ ರಬ್ಬರ್ ಕೊಳ್ಳುವಾಗ ಅದರಿಂದ ಈ ರಾಜ್ಯಕ್ಕೆ ಎಷ್ಟು ಕೋಟಿ ರೂ.ಗಳ ನಷ್ಟವನ್ನು ಕೊಡುತ್ತಿದ್ದೀರಿ ಎನ್ನುವುದನ್ನು ತಾವು ದಯವಿಟ್ಟು ಸ್ಪಷ್ಟಪಡಿಸಬೇಕು.

ಕೋಲಾರ, ಮೈಸೂರು, ಬಿಜಾಪುರ ಮತ್ತು ಹಾಸನ ಡಿವಿಜನ್‌ಗಳಿಂದ ಬಿಆರ್‌ಇಎಂಎಲ್ ಕಂಪನಿ ಕೊಟ್ಟಿರತಕ್ಕ ಟ್ರೇಡ್ ರಬ್ಬರ್‌ನ ಮೇಲೆ ಸಾಕಷ್ಟು ದೂರು ಬಂದಿದ್ದರೂ ಕೂಡ ಅವರು ವಿತರಣೆ ಮಾಡುವಾಗ, ಆಗುವ ವಿಳಂಬವನ್ನು ಬದಿಗಿಟ್ಟುಕೊಂಡು ಮತ್ತೆ ಮತ್ತೆ ನೀವು ಅವರಿಂದಲೇ ಪರ್ಚೇಸ್ ಮಾಡುತ್ತಿದ್ದೀರಿ. ಆಮೇಲೆ ಇದೇ ರೀತಿ ಆಟೋಮೊಬೈಲ್ ಪಾರ್ಟ್ಸ್‌ಗಳನ್ನು ಪರ್ಚೇಸ್ ಮಾಡುವಾಗ, ಒಟ್ಟಿಗೆ ನೀವು ಸ್ಪೇರ್ ಪಾರ್ಟ್ಸ್‌ಗಳನ್ನು ಕೊಂಡುಕೊಳ್ಳುವಾಗ, ಟೈರ್‌ಗಳನ್ನು ಕೊಂಡುಕೊಳ್ಳುವಾಗ, ಬಿಡಿಭಾಗಗಳನ್ನು ಕೊಂಡುಕೊಳ್ಳುವಾಗ ಈ ಅಧಿಕಾರಿಗಳು ಅವರ ಜೊತೆಗೆ ಸೇರಿಕೊಂಡು ಅವರವರೇ ಶಾಮೀಲಾಗಿದ್ದುಕೊಂಡು, ಅದರಲ್ಲಿ ಕಮೀಷನ್ ಹೊಡೆಯುತ್ತಾರೋ ಏನೋ ನನಗೆ ಗೊತ್ತಿಲ್ಲ. ಅಂತೂ ಪರ್ಚೇಸಿಂಗ್ ಪ್ರೊಸೀಜರ್ ಏನಿದೆ, ಟೆಂಡರ್ ಕರೆದು ಕಡಿಮೆ ಬೆಲೆಗೆ ತೆಗೆದುಕೊಳ್ಳುವಂತಹ ಯಾವ ನಿಯಮಾವಳಿ ಇದೆ, ಅದನ್ನು ಬದಿಗೊತ್ತಿ ಇವರು ಮಾಡುತ್ತಾರೆಂದರೆ, ಇದನ್ನು ಯಾವರೀತಿ ತನಿಖೆ ಮಾಡಲಿಕ್ಕೆ ಏರ್ಪಾಡು ಮಾಡಿದ್ದೀರಿ? ಈ ಆರೋಪವನ್ನು ಯಾರು ಹಾಕುತ್ತಾರೆ? ನಾನು ಹಾಕುವುದಲ್ಲ. ಇನ್ನೊಬ್ಬರು ಹಾಕುತ್ತಾರೆ, ಯಾರು ಹಾಕಿದ್ದು ಎಂದು ನಾನು ಆಮೇಲೆ ಹೇಳುತ್ತೇನೆ. ಆಮೇಲೆ ಈ ಅಧಿಕಾರಿಗಳು ಕೇಂದ್ರೀಯ ವಿಭಾಗದ ಖರೀದಿ ಸಮಿತಿ ಏನಿದೆ, ಅದರ ನಿಯಮಾವಳಿಗಳನ್ನೆಲ್ಲ ಬಿಟ್ಟುಕೊಂಡು ಈ ಪರ್ಚೆಸ್‌ಗಳನ್ನು ಮಾಡಿದ್ದಾರೆ. ಅಷ್ಟೇ ಅಲ್ಲ, ನಿರ್ದಿಷ್ಟವಾಗಿ ಚೀಫ್ ಮೆಕಾನಿಕಲ್ ಇಂಜಿನಿಯರ್, ಚೀಫ್ ಮೆಕಾನಿಕಲ್ ಇಂಜಿನಿಯರ್ ಮ್ಯಾನೇಜ್‌ಮೆಂಟ್, ಚೀಫ್ ಮೆಕಾನಿಕಲ್ ಇಂಜಿನಿಯರ್ ಪರ್ಚೇಸ್, ಮತ್ತೆ ಕಂಟ್ರೋಲರ್ ಆಫ್ ಸ್ಟೋರ್ಸ್ ಅಂಡ್ ಪರ್ಚೇಸಸ್ ಈ ಮೂರು ಜನರ ಮೇಲೆ ಆಪಾದನೆ ಮಾಡಿದ್ದಾರೆ. ಅಷ್ಟೇ ಅಲ್ಲ, ಇನ್ನೊಂದು ದೊಡ್ಡ ಗೋಲ್‌ಮಾಲ್ ನಿಮ್ಮಲ್ಲಿ ನಡೆದದ್ದು ಏನೆಂದರೆ, ಕ್ಲಾಸ್ - (1) ಕ್ಲಾಸ್ - (2) ಆಫೀಸರ್‌ಗಳನ್ನು ಆಯ್ಕೆ ಮಾಡುವಾಗ ನೀವು ಎಲ್ಲಾ ನಿಯಮಗಳನ್ನು ಬದಿಗೊತ್ತಿದ್ದೀರಿ. 1995ರ ಅಕ್ಟೋಬರ್‌ನಲ್ಲಿ 134 ಕ್ಲಾಸ್ - (1) ಕ್ಲಾಸ್ - (2) ಹುದ್ದೆಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಕಾಲ್‌ಫಾರ್ ಮಾಡಿ ಇದರಲ್ಲಿ ನಿಯಮಾವಳಿಯನ್ನು ಮೀರಿ ನೀವು ಅವರಿಗೆ ಹೇಗೆ ಅಪಾಯಿಂಟ್‌ಮೆಂಟ್ ಕೊಟ್ಟಿರಿ? ಈ ಅಪಾಯಿಂಟ್‌ಮೆಂಟ್ ಹೇಗಾಯಿತು? ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿಯಮಾವಳಿಯನ್ನು ಎಲ್ಲ ಬದಿಗಿಟ್ಟುಕೊಂಡು, ಕಾನೂನಿಗೆ ಬಾಹಿರವಾಗಿ ಈ ಆಯ್ಕೆಯನ್ನು ಮಾಡಲಾಗಿದೆ. ಈಗ ನಾನೇನು ಹೇಳುತ್ತಿದ್ದೇನೆ, ಸಾರಿಗೆ ಸಂಸ್ಥೆಯ ಈ ಆರೋಪ ಪಟ್ಟಿ ಏನಿದೆ, ಆ ಆರೋಪಪಟ್ಟಿಯನ್ನು ಬರೆದದ್ದು ಯಾರೂ ಅಲ್ಲ, ಮಾನ್ಯ ಮಾಜಿ ಸಚಿವರಾಗಿದ್ದ ಬೀಳಗಿಯವರು ಸ್ವತಹ ಅಧಿಕಾರದಲ್ಲಿದ್ದಾಗಲೇ ಪ್ರಿನ್ಸಿಪಲ್ ಸೆಕ್ರೆಟರಿಗೆ ಬರೆಯುತ್ತಾರೆ. ನನ್ನ ಇಲಾಖೆಯಲ್ಲಿ ಈ ರೀತಿಯ ತೊಂದರೆಗಳಾಗಿವೆ ಇದನ್ನು ತನಿಖೆ ಮಾಡಿಯೆಂದು, ಹೀಗಾಗಿದೆಯೆಂದು ಮಾನ್ಯ ಬೀಳಗಿಯವರು ಸಚಿವರಾಗಿದ್ದಾಗಲೇ ಬರೆಯುತ್ತಾರೆಂದರೆ ಇದರ ಪರಿಸ್ಥಿತಿ ಎಲ್ಲಿಯ ತನಕ ಬಂತು?

ಅಧ್ಯಕ್ಷರು:- ಆ ಕಾಪಿ ನಿಮಗೆ ಕೊಟ್ಟರೇನು?

ಶ್ರೀ ಯು.ಆರ್.ಸಭಾಪತಿ:- ನನಗೆ ಅವರು ಕೊಟ್ಟಿಲ್ಲ. ನಾನು ಎಲ್ಲಿಂದಲೋ ಮಾಹಿತಿಯನ್ನು ಪಡೆದುಕೊಂಡೆ. ಅವರು ಏಕೆ ಕೊಡಬೇಕು?

ಶ್ರೀ ಪಿ.ಜಿ.ಆರ್.ಸಿಂಧ್ಯ:- ಎನ್‌ಕ್ವಾಯರಿಗೆ ಆರ್ಡರ್ ಮಾಡಿದ್ದಾರೆ.

ಶ್ರೀ ಯು.ಆರ್.ಸಭಾಪತಿ:- ಎನ್‌ಕ್ವಾಯರಿಗೆ ಆರ್ಡರ್ ಮಾಡಿದ್ದಾರೆಂದರೆ ಇದು ಅಷ್ಟು ಸುಲಭದಲ್ಲಿ ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಇದು ಗಂಭೀರವಾದಂತಹ ಆರೋಪಗಳು. ಯಾವ ಚೀಫ್ ಮೆಕಾನಿಕಲ್ ಇಂಜಿನಿಯರ್ಸ್ ಪರ್ಚೇಸ್ ಮತ್ತು ಮೇಟೇನೆನ್ಸ್ ಯಾರಿದ್ದಾರೆ, ಮತ್ತು ಕಂಟ್ರೋಲರ್ ಆಫ್ ಸ್ಟೋರ್ಸ್ ಅಂಡ್ ಪರ್ಚೇಸರ್ಸ್ ಯಾರಿದ್ದಾರೆ, ಅವರನ್ನ ಅಲ್ಲಿ ಕೂರಿಸಿ ನೀವು ತನಿಖೆ ಮಾಡುತ್ತೀರಾ? ಆರೋಪ ಇರುವುದೇ ಅವರ ಮೇಲೆ. ಆರೋಪವನ್ನು ನನ್ನಂತಹ ಶಾಸಕ ಹೇಳಿದರೆ, ನೀವು ಹೇಳಿ, ರಾಜಕೀಯವಾಗಿ ಸಭಾಪತಿಯವರು ಆರೋಪ ಮಾಡುತ್ತಿದ್ದಾರೆ ನಮ್ಮ ಚರಿತ್ರಾಹರಣ ಮಾಡುತ್ತಿದ್ದಾರೆಂದು ಹೇಳಿ. ಅದಕ್ಕೆ ನನ್ನಿಂದ ಆಕ್ಷೇಪವಿಲ್ಲ. ಒಬ್ಬರು ಸಚಿವರಾಗಿದ್ದುಕೊಂಡು ತನ್ನ ಸಂಸ್ಥೆಯಲ್ಲಿ ಇಂತಹ ಅನಾಹುತವಾಗುತ್ತದೆಂದು ಹೇಳುವಾಗ, ಮೂರು ಜನರ ಮೇಲೆ ಸ್ಪೆಸಿಫಿಕ್ ಆಗಿ ಆರೋಪ ಹಾಕುವಾಗ, ನೀವು ಆ ಅಧಿಕಾರಿಗಳನ್ನು ಇಟ್ಟುಕೊಂಡೇ ನೀವು ತನಿಖೆ ಮಾಡುತ್ತೇವೆಂದರೆ ಇದಕ್ಕಿಂತ ದೊಡ್ಡ ಹಾಸ್ಯಸ್ಪದವಾದಂತಹ ಸಂಗತಿ ಏನಿದೆ? ಮಾನ್ಯ ಸಿಂಧ್ಯಾರವರು ಬಹಳ ನಿಪುಣರಿದ್ದಾರೆ ಬಾಕಿ ಎಲ್ಲದಕ್ಕೂ ಎದ್ದು ನಿಂತು ಉತ್ತರ ಕೊಟ್ಟರು, ಈ ಬಗ್ಗೆ ಅವರು ಏನೂ ಮಧ್ಯೆ ಪ್ರವೇಶ ಮಾಡಿಲ್ಲ ಅದು ಏಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ದಯವಿಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಹೇಳುತ್ತೀರಾ ಅಥವಾ ಮತ್ತೆ ಏನಾದರೂ ಹೇಳುತ್ತೀರಾ? ನನ್ನ ಪ್ರಶ್ನೆ ಇಷ್ಟೆ, ಇವತ್ತು ನಾನು ಏನು ಈ ಗಂಭೀರ ಆರೋಪ ಮಾಡಿದ್ದೇನೆ, ಈ ಆರೋಪದ ಬಗ್ಗೆ ನಿಮಗೆ ನಿಜವಾಗಿಯೂ ಕಾಳಜಿ ಇದೆಯೆಂದು ಆದರೆ, ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಅಮಾನತ್ತಿನಲ್ಲಿರಿಸಿಕೊಂಡು ನೀವು ಇದನ್ನು ತನಿಖೆ ಮಾಡಬೇಕು. ಸಿ.ಓ.ಡಿ. ಅಧಿಕಾರಿಗಳು ಅಲ್ಲಿ ಬರುತ್ತಾರೆ, ಆ ಅಧಿಕಾರಿಗಳು ಇವರ ಹತ್ತಿರನೇ ಕೇಳುವುದು, ಏನು ನೀವು ಪರ್ಚೇಸ್ ಮಾಡಿದ್ದೀರಿ ಎಂದು ಹೇಳಿ?

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ಬೀಳಗಿಯವರು ಸಾರಿಗೆ ಸಚಿವರಾಗಿದ್ದ ಸಂದರ್ಭದಲ್ಲಿ ಅವರು ಉತ್ತಮವಾದ ಕೆಲಸವನ್ನು ಮಾಡಿ ಇದನ್ನೆಲ್ಲ ಸರಿ ಮಾಡಬೇಕೆಂದು ಹೇಳಿ, ಸೆಂಟ್ರಲ್ ಪರ್ಚೇಸ್ ಕಮಿಟಿಯನ್ನು ರೀಕಾನ್ಸ್ಟಿಟ್ಯೂಟ್ ಮಾಡಬೇಕೆನ್ನುವ ಡೈರೆಕ್ಷನ್ನು ಸಹಿತ ಕೊಟ್ಟು ಇದರ ತನಿಖೆಗೆ ಆಜ್ಞೆ ಮಾಡಿದ್ದಾರೆ. ಆವೊತ್ತು ಮುಖ್ಯಮಂತ್ರಿಗಳಾಗಿದ್ದ ಮಾನ್ಯ ದೇವೇಗೌಡರು ಇದರ ಬಗ್ಗೆ ಸಿ.ಓ.ಡಿ ಎನ್‌ಕ್ವಾಯರಿಯನ್ನು ಸಹಿತ ಮಾಡಬೇಕು, ಅಲ್ಲಿರತಕ್ಕ ಉನ್ನತ ಅಧಿಕಾರಿಗಳ ಬಗ್ಗೆ ತನಿಖೆಯಾಗಬೇಕು ಎನ್ನುವಂತಹ ಆದೇಶವನ್ನು ನನಗೆ ಗೊತ್ತಿರುವ ಹಾಗೆ ಈಗಾಗಲೇ ಮಾಡಿದ್ದಾರೆ. ನಾನು ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡು ಒಂದೂವರೆ

ತಿಂಗಳಾಗಿದೆ. ಫೈಲುಗಳನ್ನೆಲ್ಲ ನಾನು ತರಿಸಿಕೊಳ್ಳುತ್ತಿದ್ದೇನೆ. ಈ ಮಧ್ಯದಲ್ಲಿ ತಮ್ಮ ಹತ್ತಿರವಿರತಕ್ಕ ಮಾಹಿತಿಯನ್ನು ತಾವು ಕೊಡುವುದಾದಲ್ಲಿ, ಮಾನ್ಯ ಬೀಳಗಿಯವರ ಹತ್ತಿರ ಏನಾದರೂ ಮಾಹಿತಿ ಇದ್ದರೆ, ಅದನ್ನು ನಾನು ತೆಗೆದುಕೊಳ್ಳುತ್ತೇನೆ. ಅಧಿಕಾರಿಗಳು ತಪ್ಪು ಮಾಡಿದ್ದಾರೆಂದು ನನಗೆ ಮೇಲ್ನೋಟಕ್ಕೆ ಕಂಡು ಬಂದರೆ ಅವರನ್ನು ನಾನು ಸಸ್ಪೆಂಡ್ ಮಾಡುತ್ತೇನೆ.

ಶ್ರೀ ಯು.ಆರ್.ಸಭಾಪತಿ:- ನಾನು ಕೊಡುವುದಲ್ಲ, ನಿಮ್ಮ ಇಲಾಖೆಯಲ್ಲಿಯೇ ಮಾನ್ಯ ಸಚಿವರು ಬರೆದಂತಹ ಪತ್ರವಿದೆ. ಅದನ್ನು ಓದಿಬಿಡಿ. ಸಚಿವರಾಗಿದ್ದುಕೊಂಡು ಅಧಿಕಾರಿಗಳು ತಪ್ಪಿತಸ್ಥರು ಇವರ ಮೇಲೆ ಕ್ರಮ ತೆಗೆದುಕೊಳ್ಳಿಯೆಂದು ಹೇಳುವಾಗ, ನೀವು ಮತ್ತೆ ಪರಾಂಭರಿಸುತ್ತೇವೆಂದು ಹೇಳುವಂತಹದ್ದು ಮಾಜಿ ಸಚಿವರನ್ನು ಕೆಳಮಟ್ಟಕ್ಕೆ ತಳ್ಳಿದ ಹಾಗೆ ಆಗುತ್ತದೆ. ಹಾಗಾದರೆ ಇಷ್ಟರತನಕ ಇದು ನಿಮ್ಮ ಗಮನಕ್ಕೆ ಬರಲಿಲ್ಲ?

ಶ್ರೀ ಪಿ.ಜಿ.ಆರ್.ಸಿಂಧ್ಯ:- ನಾನು ಹೇಳಿದೆನಲ್ಲ. ಈಗಾಗಲೇ ಸಿ.ಒ.ಡಿ. ಎನ್‌ಕ್ವಾಯರಿಗೆ ಹಿಂದಿನ ಮುಖ್ಯಮಂತ್ರಿಗಳು ಆರ್ಡರ್ ಮಾಡಿದ್ದಾರೆ. ನಾನು ಸಾರಿಗೆ ಇಲಾಖೆಯನ್ನು ವಹಿಸಿಕೊಂಡು ಒಂದೂವರೆ ತಿಂಗಳಾಗಿದೆ. ಇದನ್ನು ಯಾವ ರೀತಿ ಸೆಟ್‌ರೈಟ್ ಮಾಡಬೇಕೆನ್ನುವುದನ್ನು ನಾನು ವಿಚಾರ ಮಾಡುತ್ತಿದ್ದೇನೆ. ಟ್ರಾನ್ಸ್‌ಪರೆಂಟ್ ಅಡ್ಮಿನಿಸ್ಟ್ರೇಷನ್ ಕೊಡಬೇಕೆಂದು ಇದ್ದೇನೆ. ಅವರ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ. ನಿಮ್ಮ ಹತ್ತಿರ ಹೆಚ್ಚಿನ ಮಾಹಿತಿ ಇದ್ದರೆ ಕೊಡಿ. ಮೇಲ್ನೋಟಕ್ಕೆ ಸಾಬೀತಾಗಿದೆಯೆಂದು ಕಂಡುಬಂದರೆ, I will keep them under suspension.

ಶ್ರೀ ಯು.ಆರ್.ಸಭಾಪತಿ:- ಪಾರದರ್ಶಕ ಎಂದು ಹೇಳಿದರೆ ಇದು ಹೇಗಾಗಿದೆ ಅಂದರೆ, ನಾವು ಸನ್‌ಗ್ಲಾಸ್ ಹಾಕಿದಹಾಗೆ. ಇವರು ನೋಡುವಾಗ ಪಾರದರ್ಶಕವಾಗಿರುತ್ತದೆ. ಆದರೆ ನಾವು ನೋಡುವಾಗ ಮಾತ್ರ ನಿಮ್ಮ ಕಣ್ಣಿನೊಳಗೆ ಏನಿದೆಯೆಂದು ಗೊತ್ತಾಗುವುದಿಲ್ಲ. ಸನ್‌ಗ್ಲಾಸ್ ಹಾಕಿದರೆ ಇವರ ಕಣ್ಣು ನಮಗೆ ಕಾಣುವುದಿಲ್ಲ. ಇವರಿಗೆ ಪಾರದರ್ಶಕವಾಗಿರುತ್ತದೆ. ಆದ್ದರಿಂದ ಅವರು ಪಾರದರ್ಶಕವಾಗಿರಲಿಕ್ಕೆ ಪ್ರಯತ್ನಪಡಬೇಕು. ಆದರೆ ನಾವು ಕೂಡ ಪಾರದರ್ಶಕವಾಗಿ ನಿಮ್ಮನ್ನು ನೋಡಬೇಕಾದರೆ ನಿಮ್ಮ ಹಿಂದೆ ಸಚಿವರಾಗಿದ್ದವರೇ ಅಧಿಕಾರಿಗಳ ಮೇಲೆ ಆರೋಪವನ್ನು ಹೊರಿಸಿದ ಮೇಲೆ ಪುನಃ ಇದನ್ನು ಪರಿಶೀಲನೆ ಮಾಡುವುದು ಎಂಥದು? ಅವರನ್ನು ಸಸ್ಪೆನ್‌ಷನ್‌ನಲ್ಲಿಟ್ಟು ಯಾವುದೇ ಕಡತಗಳು ಅವರಿಗೆ ಹೋಗದಂತೆ ಮಾಡಿ ಆಮೇಲೆ ತನಿಖೆ ಮಾಡಬೇಕು ನೀವು.

SRI P.G.R.SINDYA:- Is it possible for me to say on the floor of the Assembly, without going through it? COD enquiry is going on. The previous Chief Minister has ordered for that. The Hon'ble former Transport

Minister has written to me. I have taken over just 1 $^1/_2$ months back. Can I say I am just going to keep them under suspension? Supposing they are innocent men?

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೆ, ನಾನು ಬೇಜವಾಬ್ದಾರಿಯಿಂದ ಆರೋಪ ಮಾಡಿದ್ದೇನೆಯೇ? ಅಥವಾ ನಾವು ಯಾರಾದರೂ ಶಾಸಕರಿಂದ ಈ ಆರೋಪ ಮಾಡಲಾಗಿದೆಯೇ?

ಅಧ್ಯಕ್ಷರು:- ಪಾರದರ್ಶಕ ಅಂತ ಹೇಳಿದಿರಿ ಅದೇನೋ ಗೊತ್ತಾಗಲಿಲ್ಲ.

ಶ್ರೀ ಯು.ಆರ್.ಸಭಾಪತಿ:- ಪಾರದರ್ಶಕ ಅಂತ ಹೇಳಿದರೆ, ನನ್ನ ಲೆಕ್ಕದ ಪ್ರಕಾರ ಅವರು ಪಾರದರ್ಶಕವಾಗಿರುವಂತಹ ಗ್ಲಾಸ್ ಏನು ಇಟ್ಟುಕೊಳ್ಳುತ್ತಾರೆ, ಸನ್‌ಗ್ಲಾಸ್‌ಯೆಂದು ಹೇಳಿ ಹೊಸದೊಂದು ಬರುತ್ತಾ ಇದೆ. ಅದು ಹೊರಗಿನಿಂದ ನೋಡುವವರಿಗೆ ಇವರ ಕಣ್ಣು ಕಾಣುವುದಿಲ್ಲ. ಅದು ಕಪ್ಪಗೆ ಇರುತ್ತದೆ. ನಾವು ನೋಡುವಾಗ ಅದು ಪಾರದರ್ಶಕವಾಗಿರುತ್ತದೆ. ಅವರ ದೃಷ್ಟಿಯಲ್ಲಿ ಅದು ಪಾರದರ್ಶಕವಾಗಿರಬಹುದು. ಇವರ ಆಡಳಿತ ಅದು ನಮ್ಮ ದೃಷ್ಟಿಯಲ್ಲಿ ಅದು ಪಾರದರ್ಶಕವಾಗಿಲ್ಲ. ಅದು ಸನ್‌ಗ್ಲಾಸ್ ತರಹ ಆಗಿದೆಯೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು:- ಅದೇ ಗ್ಲಾಸ್ ಈಗ ನೀವು ಹಾಕಿಕೊಳ್ಳಬೇಕು.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೆ, ಇದರ ಜೊತೆಗೆ ಒಂದು ವ್ಯವಸ್ಥಿತವಾದಂತಹ ಇವರ ಬಸ್‌ಸ್ಟ್ಯಾಂಡ್‌ಗಳಲ್ಲಿರತಕ್ಕ ಕ್ಯಾಂಟೀನ್‌ಗಳಲ್ಲಿ ನಡೆಯತಕ್ಕ ಅವ್ಯವಹಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮತ್ತು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಸ್ಟ್ಯಾಂಡುಗಳಲ್ಲಿ ಯಾವ ಕ್ಯಾಂಟೀನ್‌ಗಳಿವೆ, ಅವುಗಳನ್ನು ನಡೆಸಲಿಕ್ಕೆ ಟೆಂಡರ್ ಕರೆಯುತ್ತಾರೆ. ಟೆಂಡರ್ ಕರೆದ ಮೇಲೆ ಅದನ್ನು ಅಕ್ಸೆಪ್ಟ್ ಮಾಡಿಕೊಂಡು, ಟೆಂಡರ್ ಅಕ್ಸೆಪ್ಟ್ ಆದವರು ದುಡ್ಡ ಕಟ್ಟಿರುತ್ತಾರೆ. ಅವರು ದುಡ್ಡು ಕಟ್ಟಿ ಆದಮೇಲೆ ಕೂಡ ಅಧಿಕಾರಿಗಳು ಆ ದುಡ್ಡನ್ನು ಸ್ವೀಕಾರ ಮಾಡಿಕೊಂಡು ತೆಪ್ಪಗೆ ಇದ್ದು ಯಾರು ಕ್ಯಾಂಟೀನ್‌ನ ಪೊಸಿಷನ್‌ನಲ್ಲಿರುತ್ತಾರೆ ಅವನನ್ನು ಎಬ್ಬಿಸಲಿಕ್ಕೆ ಹೋಗುವುದಿಲ್ಲ. ಅವನು ಕೋರ್ಟ್‌ಗೆ ಹೋಗಿ ಸ್ಟೇ ತರಲಿಕ್ಕೆ ಪ್ರಾವಿಜನ್ ಮಾಡಿಕೊಟ್ಟು ಅವನು ಸ್ಟೇ ತರುವತನಕ ಕಾದು ಸಹಾಯ ಮಾಡುತ್ತಾರೆ. ಟೆಂಡರ್ ಆದವನಿಗೆ ದುಡ್ಡೂ ಇಲ್ಲ ಕ್ಯಾಂಟೀನ್ ನಡೆಸಲಿಕ್ಕೆ ಅವಕಾಶ ಇಲ್ಲ. ಇದೇ ರೀತಿ ಮಾನ್ಯ ಅಧ್ಯಕ್ಷರೆ, ಇವತ್ತು ಕೆಎಸ್‌ಆರ್‌ಟಿಸಿ ಬಸ್‌ಸ್ಟ್ಯಾಂಡ್‌ಗಳಲ್ಲಿ 29 ಕ್ಯಾಂಟೀನ್‌ಗಳನ್ನು ಒಬ್ಬರೇ ನಡೆಸುತ್ತಿದ್ದಾರೆ ಬೇರೆ ಬೇರೆಯವರ ಹೆಸರಿನಲ್ಲಿ. ಒಬ್ಬರೇ ನಡೆಸುವುದು ಮಾತ್ರವಲ್ಲ, 29 ಕ್ಯಾಂಟೀನ್‌ಗಳಲ್ಲಿ 28 ಕ್ಯಾಂಟೀನ್‌ಗಳಲ್ಲಿ ಕೋರ್ಟ್‌ನಿಂದ ಸ್ಟೇ ತಂದು ಟೆಂಡರ್ ಆದವನಿಗೆ ವರ್ಷಾನುಗಟ್ಟಲೆ ಹಣ ಪಾವತಿ ಕೂಡ ಮಾಡುತ್ತಿಲ್ಲ.

6.00 ಪಿ.ಎಂ.

(ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು)

ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಕೋರ್ಟಿನಲ್ಲಿ ವ್ಯವಹಾರವನ್ನು ಮಾಡುತ್ತಿಲ್ಲ. ಇದೆಲ್ಲವು ಹಿಂದಿನ ಸರ್ಕಾರದಿಂದ ನಡೆದು ಬಂದಿದೆ ಎಂದು ನೀವು ಹೇಳಬಹುದು. ಹೌದು, ಎಂದಾದರೆ ಹಿಂದಿನ ಸರ್ಕಾರದ ಪರಂಪರೆಯನ್ನು ನೀವು ಏಕೆ ಮುಂದುವರೆಸಿಕೊಂಡು ಹೋಗುತ್ತಿದ್ದೀರಿ? ನಿಜವಾಗಿಯೂ ಪಾರದರ್ಶಕವಾದಂಥ ಆಡಳಿತವನ್ನು ಕೊಡಬೇಕಾದಂಥ ನೀವು ಹೊಸತನವನ್ನು ರೂಪಿಸಬೇಕು. ಅದರಿಂದಾಗಿ ನಾನು ಈ ಬಗ್ಗೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹಿಂದಿನ ಸರ್ಕಾರ ಎಂದರೆ ಯಾವುದು?

ಶ್ರೀ ವಾಟಾಳ್ ನಾಗರಾಜ್:- ಅವರು ಹೇಳಿದ್ದುದು ನಿಮಗೆ ಅರ್ಥವಾಗಲಿಲ್ಲ. ಹಿಂದಿನದ್ದು ಎಂದರೆ ಬಂಗಾರಪ್ಪನವರ ಸರ್ಕಾರ ಇರಬಹುದು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹಿಂದಿನ ಸರ್ಕಾರ ಎಂದರೆ 1989ರ ಸರ್ಕಾರ ಇರಬಹುದು. ಅದರ ಹಿಂದಿನ ಸರ್ಕಾರವನ್ನು ಏನಾದರೂ ಹೇಳಿದರೋ ಏನೋ?

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೆ, ಈ ಕೆ.ಎಸ್.ಆರ್.ಟಿ.ಸಿ. ಹಗರಣದ ಬಗ್ಗೆ ಒಂದೇ ಒಂದು ಉದಾಹರಣೆಯನ್ನು ನಾನು ಕೊಡುತ್ತೇನೆ. ಒಬ್ಬರು ಸದಾಶಿವ ಬಿ.ಹೆಗಡೆ ಎನ್ನುವವರು ಇದ್ದಾರೆ. ಅವರು ಚಿಕ್ಕಮಗಳೂರಿನ KSRTC ಕ್ಯಾಂಟೀನ್ ಪ್ರಿಮಿಸಿಸ್ ಬಗ್ಗೆ ಟೆಂಡರ್‌ಗೆ ಅಪ್ಲಿಕೇಶನ್ ಹಾಕಿದ್ದಾರೆ. It reads thus:

"The tenders were invited by the KSRTC, Hassan Division Hassan to run the canteen at KSRTC Bus-stand, Chikkamagalore during May, 1995. I am the highest bidder in tender and I have paid Rs.42,000/- being the Earnest Money Deposit and Rs.99,000/- being 6 months advance rental to KSRTC. The same is deposited by me on 3/5/1995. I have already obtained the receipts for the same. I have also entered into an agreement with the KSRTC on 29/7/1995 as per which I have to be put in possession of the Canteen premises at Chikkamagalore immediately."

ನಾನು ಏಕೆ ಇದನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಒಬ್ಬ ಬಡಪಾಯಿ ಆ ಕ್ಯಾಂಟೀನ್‌ಗೆ ಬೇಕಾಗಿರತಕ್ಕಂಥ ರೆಫ್ರಿಜರೇಟರ್ಸ್ ತೆಗೆದಿಟ್ಟುಕೊಂಡು ಲಕ್ಷಾನುಗಟ್ಟಲೆ

ರೂಪಾಯಿಗಳನ್ನು ಖರ್ಚುಮಾಡಿಕೊಂಡು, ನಿಮಗೆ ಡಿಪಾಸಿಟ್‌ನ್ನು ಕಟ್ಟಿ ಆದಮೇಲೆ ಆ ಕ್ಯಾಂಟೀನ್‌ನ ಒಡೆತನವನ್ನು ಅವನಿಗೆ ಕೊಡುವುದಕ್ಕೆ ನಿಮ್ಮ ಇಲಾಖೆಯ ಅಧಿಕಾರಿಗಳಿಂದ ಆಗುತ್ತಿಲ್ಲವೆಂದು ಹೇಳಿದರೆ ಹೇಗೆ? ಅವನು ಹೈಕೋರ್ಟ್‌ಗೆ ಹೋಗಿ ಸ್ಟೇ ತರಲಿಕ್ಕೆ ಅವಕಾಶ ಮಾಡಿಕೊಟ್ಟಂಥ ಅಧಿಕಾರಿಗಳ ಮೇಲೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಇದರ ಬಗ್ಗೆ ನಾನು ಮಾನ್ಯ ಸಾರಿಗೆ ಸಚಿವರನ್ನು ತಮ್ಮ ಮೂಲಕ ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದು ಒಂದು ವ್ಯವಸ್ಥಿತವಾದಂಥ ಸಂಚು, ಇದು ಒಂದು ಕ್ಯಾಂಟೀನಲ್ಲಿ ಮಾತ್ರ ಅಲ್ಲ....

ಶ್ರೀ ಸಿ.ಆರ್.ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಪಟ್ಟಣದಲ್ಲಿ ಇರುವಂಥ ಬಸ್‌ನಿಲ್ದಾಣದ ಆವರಣದಲ್ಲಿ ಒಂದು ಕ್ಯಾಂಟೀನ್ ನಡೆಸುವ ಬಗ್ಗೆ ಮಾನ್ಯ ಮಿತ್ರರು ಹೇಳುತ್ತಿದ್ದಾರೆ. ಇದರ ವಿಚಾರ ಬೇರೆ ರೀತಿಯಲ್ಲಿ ಇದೆ. ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಒಂದು ಗುತ್ತಿಗೆದಾರನ ವಿಚಾರವನ್ನು ಅವರಿಗೆ ತಿಳಿದಂತೆ ಅವರು ಹೇಳುತ್ತಿದ್ದಾರೆ. ಹಾಗೆಯೇ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರತಕ್ಕಂಥ ಗುತ್ತಿಗೆದಾರರ ವಿಚಾರದ ಜೊತೆಗೆ ನಾನು ಆ ಕ್ಷೇತ್ರದ ಶಾಸಕನಾಗಿರುವುದರಿಂದ ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಆ ಗುತ್ತಿಗೆದಾರನು ಅಲ್ಲಿ ನಡೆಯುತ್ತಿರುವಂಥ ಹೊಟೇಲಿನ ಬಗ್ಗೆ ಅದು ದುರಾವಸ್ಥೆಯಲ್ಲಿದೆ, ಅದನ್ನು ದುರಸ್ತಿಪಡಿಸಿಕೊಡುವುದಕ್ಕೆ ಸರ್ಕಾರಕ್ಕೆ ಆ ಗುತ್ತಿಗೆದಾರ ಒಂದು ಕಾಗದ ಬರೆಯುತ್ತಾನೆ. ಆಗ ಗುತ್ತಿಗೆದಾರನಿಗೆ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯವರು ಏನು ಬರೆಯುತ್ತಾರೆಂದು ಹೇಳಿದರೆ, ನಿನಗೆ ಗುತ್ತಿಗೆಯ ಸಮಯ ಇಷ್ಟನೇ ತಾರೀಕಿಗೆ ಮುಗಿಯುತ್ತದೆ, ಆದ್ದರಿಂದ ನಾವು ಬೇರೆ ಗುತ್ತಿಗೆದಾರರಿಗೆ ಕೊಡಬೇಕಾಗಿರುವುದರಿಂದ ನೀವು ಆ ಸ್ಥಳವನ್ನು ಖಾಲಿ ಮಾಡಿಕೊಡಬೇಕೆಂದು ಅವನಿಗೆ ಬರೆದು ತಿಳಿಸುತ್ತಾರೆ. ಆದರೆ ಈ ವ್ಯವಸ್ಥೆ ಆಗದೇ ಇರುವುದರಿಂದ ಅವನು ಏನು ಹೇಳುತ್ತಾನೆಂದರೆ, ನಾನೇ ಸ್ವತಃ ಆ ಹೋಟೆಲನ್ನು ಪಡೆದುಕೊಳ್ಳುವುದಕ್ಕಾಗಿ ಸಿದ್ಧನಾಗಿರುವಂಥ ಸಂದರ್ಭದಲ್ಲಿ ನೀವು ನನಗೆ ಆಕ್ಷನ್ ಮುಖಾಂತರವಾಗಲೀ, ಟೆಂಡರ್ ಮುಖಾಂತರವಾಗಲೀ ಕೊಟ್ಟರೆ ನಾನು ತೆಗೆದುಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆಂದು ಹೇಳುವಂಥ ಸಂದರ್ಭದಲ್ಲಿ ಸರ್ಕಾರದಿಂದ ಉತ್ತರ ಬರದಿದ್ದಾಗ, ಅವನು ಹೈಕೋರ್ಟ್‌ಗೆ ಹೋಗಿ ಈ ತಡೆಯಾಜ್ಞೆಯನ್ನು ತಂದಿರುವಂಥ ವಿಚಾರವನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೆ, ಇದು ಒಂದು ವ್ಯವಸ್ಥಿತವಾದಂಥ ಸಂಚು. ಟೆಂಡರ್ ಸಮಯ ಮುಗಿಯುತ್ತಾ ಬರುವಾಗ ಇದಕ್ಕೆಲ್ಲಾ ಒಂದೊಂದು ಅರ್ಜಿಯನ್ನು ಹಾಕಿಕೊಂಡು ಅದೇ ವ್ಯಕ್ತಿ ಇದೇ ರೀತಿಯಾಗಿ ರಾಜ್ಯದ 29 ಕ್ಯಾಂಟೀನುಗಳಲ್ಲಿ ವಿವಿಧ ಹೆಸರುಗಳಲ್ಲಿ ಕ್ಯಾಂಟೀನ್ ನಡೆಸುತ್ತಿದ್ದಾನೆ. ಅದು ನಮಗೆ ಗೊತ್ತಿದೆ. ಆದ್ದರಿಂದ ಇಂತಹ ಸಂಚಿಗೆ ಒಳಗಾಗಬೇಡಿ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಈ 29 ಕ್ಯಾಂಟೀನ್‌ಗಳಲ್ಲಿ 28 ಕ್ಯಾಂಟೀನ್‌ಗಳಿಂದ ನಿಮಗೆ ಬಾಡಿಗೆ

ಸಹ ಬರುತ್ತಿಲ್ಲ, ಅವನು ಬೇಕಾದಷ್ಟು ಹಣವನ್ನು ಲೂಟಿ ಮಾಡಿಕೊಂಡಿರುತ್ತಾನೆ ಮತ್ತು ಅವನು ಹೈಕೋರ್ಟಿನಿಂದ ಸ್ಟೇ ತರುತ್ತಾನೆಂದಾದರೆ, ಈ ಸರ್ಕಾರಿ ಅಧಿಕಾರಿಗಳು ಆ ತಡೆಯಾಜ್ಞೆಯನ್ನು ವೆಕೇಟ್ ಮಾಡಿಸುವುದಕ್ಕೆ ಯಾವ ಪ್ರಯತ್ನವನ್ನು ನಡೆಸುತ್ತಿದ್ದಾರೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇದು ವ್ಯವಸ್ಥಿತವಾಗಿ ಎಲ್ಲಾ ಕಡೆಯೂ ನಡೆಯುತ್ತಿರತಕ್ಕಂಥ ವಿಚಾರ. ಅದೇನೇ ಇರಲಿ, ಮಾನ್ಯ ಸಾರಿಗೆ ಸಚಿವರ ಬಗ್ಗೆ ನನಗೆ ಬಹಳ ಅಭಿಮಾನವಿದೆ. ಇದರ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಇವರು ಪಡೆದುಕೊಂಡಿರಬಹುದು. ನೀವು ಸಾರಿಗೆ ಸಚಿವರಾಗಿ ಇರುವ ತನಕ ದಯವಿಟ್ಟು ಈ ಎರಡು ಕೇಸ್‌ಗಳ ಅಂದರೆ ಕೆಎಸ್‌ಆರ್‌ಟಿಸಿ ಬಸ್‌ಸ್ಟ್ಯಾಂಡ್ ಕ್ಯಾಂಟೀನ್ ಹಗರಣ, ಮತ್ತು ಕೆಎಸ್‌ಆರ್‌ಟಿಸಿ ಸಂಸ್ಥೆಯ ಹಗರಣಗಳನ್ನೂ ಸರಿಪಡಿಸುತ್ತೀರಿ ಎನ್ನತಕ್ಕಂಥ ಆತ್ಮವಿಶ್ವಾಸ ನಮ್ಮಲ್ಲಿ ಇದೆ. ಹಿಂದಿನ ಸಾರಿಗೆ ಸಚಿವರು ತಮ್ಮ ಆಡಳಿತಾವಧಿಯಲ್ಲಿ, ತಮ್ಮ ಅಧಿಕಾರಾವಧಿಯಲ್ಲಿ ಕಂಡುಕೊಂಡಂಥ ಸತ್ಯವನ್ನು ಅದನ್ನು ಸುಳ್ಳನ್ನಾಗಿ ಮಾಡುವಂಥ ಪ್ರಯತ್ನವನ್ನು ಅಧಿಕಾರಿಗಳು ಮಾಡಬಹುದು. ಅದು ಹಾಗಾಗಬಾರದು. ಅದರಲ್ಲಿ ಸತ್ಯಾಂಶವಿದೆಯೆಂದು ನನಗೂ ಸಹ ಮನವರಿಕೆಯಾಗಿದೆ. ಇದರ ಮಾಹಿತಿಯನ್ನು ಸರಿಯಾಗಿ ಅಧ್ಯಯನ ಮಾಡಿದರೆ ಖಂಡಿತವಾಗಿಯೂ ಇದರ ಸತ್ಯಾಸತ್ಯತೆಯನ್ನು ಅದರ ಅರ್ಹತೆಯನ್ನು ಪಡೆಯುತ್ತೀರೆಂದು ಹೇಳಿ, ಮತ್ತು ಸಾರಿಗೆ ಸಂಸ್ಥೆಗಳಲ್ಲಿ ಬಹಳಷ್ಟು ಕಾರ್ಯಕ್ರಮಗಳನ್ನು ನೀವು ಅಳವಡಿಸಬೇಕಾಗಿದೆ. ಬಹಳಷ್ಟು ಕಾರ್ಯಕ್ರಮಗಳನ್ನು ನೀವು ಮಾಡಬೇಕಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಯಶಃ ಸಾರಿಗೆ ವಾಹನಗಳಿಂದ ವರ್ಷಕ್ಕೆ ಸುಮಾರು 25ರಿಂದ 30 ಕೋಟಿ ರೂಪಾಯಿಗಳನ್ನು ನಾವು ವಾಹನ ತೆರಿಗೆ ರೂಪದಲ್ಲಿ ಕೊಟ್ಟರೂ ಕೂಡ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಕೊಡತಕ್ಕಂಥ ಸೌಲಭ್ಯ ಕೇವಲ 3ರಿಂದ 4 ಕೋಟಿಗಿಂತಲೂ ಕಡಿಮೆ ಎನ್ನತಕ್ಕಂಥ ಮಾತನ್ನು ಬಹಳ ವಿಷಾದಪೂರ್ವಕವಾಗಿ ನಾನು ಹೇಳಬಯಸುತ್ತೇನೆ. ಸಾರಿಗೆ ವ್ಯವಸ್ಥೆಗಿಂತಲೂ ಇವತ್ತು ರಸ್ತೆಗಳಲ್ಲಿ ಸಂಚಾರ ವ್ಯವಸ್ಥೆ ಏನು ಇದೆ, ಏನು ಲೈಫ್ ಟ್ಯಾಕ್ಸ್ ಇವರು ಕಲೆಕ್ಟ್ ಮಾಡಿಕೊಂಡು ಇವರು ಪಡೆದುಕೊಂಡಂಥ ಹಣದಲ್ಲಿ ಎಷ್ಟು ಹಣವನ್ನು ಇವರು ಪೂರ್ತಿಯಾಗಿ ವಿನಿಯೋಗ ಮಾಡುತ್ತಾರೆ? ಯಾವುದಕ್ಕೋಸ್ಕರ ವಿನಿಯೋಗ ಮಾಡುತ್ತಾರೆ ಎನ್ನುವುದನ್ನು ದಯವಿಟ್ಟು ನೀವು ಪರಿಶೀಲಿಸಬೇಕೆಂದು ಹೇಳುತ್ತೇನೆ. ಇವತ್ತು ಉಡುಪಿ ಒಂದು ಧಾರ್ಮಿಕ ಕ್ಷೇತ್ರ. ಅದಕ್ಕಿಂತಲೂ ಹೆಚ್ಚಾಗಿ ಒಂದು ವಿದ್ಯಾ ಕೇಂದ್ರ ಕೂಡ ಆಗಿದೆ. ಇಲ್ಲಿ ವರ್ಷಕ್ಕೆ 10 ಲಕ್ಷ ಜನ ಯಾತ್ರಿಕರು ಬಂದುಹೋಗುವಂಥ ಒಂದು ಸ್ಥಳ. ಇಷ್ಟು ದೊಡ್ಡ ತಾಲ್ಲೂಕು ಕೇಂದ್ರವಾಗಿ ಇದ್ದರೂ ಕೂಡ ಇವತ್ತು ನಮಗೆ ಕೆಎಸ್‌ಆರ್‌ಟಿಸಿ ಬಸ್ಸು ನಿಲ್ದಾಣವಿಲ್ಲ ಎಂದು ಬಹಳ ವಿಷಾದಪೂರ್ವಕವಾಗಿ ನಾನು ಹೇಳಬಯಸುತ್ತೇನೆ. ಇವತ್ತು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಾಗ ಮಾಡಿ ಉಡುಪಿಯನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಬೇಕೆಂದು ಹೇಳಿ ಸಮಿತಿಯ ವರದಿ ಕೂಡ ಈ ಸದನಕ್ಕೆ ಈ ಸರ್ಕಾರಕ್ಕೆ ಬಂದಿದೆ. ಈ ವರದಿಯನ್ನು ಸರ್ಕಾರ ಇವತ್ತು ಅಲ್ಲದಿದ್ದರೆ ಇನ್ನು 10 ವರ್ಷಗಳ ನಂತರವಾದರೂ ಅನುಷ್ಠಾನಕ್ಕೆ ತರುವಾಗ ನಮ್ಮ

ಉಡುಪಿ ಜಿಲ್ಲಾ ಕೇಂದ್ರವಾಗಿ ಪರಿವರ್ತನೆಯಾಗುವಾಗ ನಮ್ಮಲ್ಲಿ ಒಂದು ಕೆಎಸ್‌ಆರ್‌ಟಿಸಿ ಬಸ್ಸು ನಿಲ್ದಾಣ ಇಲ್ಲವೆಂದು ಹೇಳಿದರೆ ಬಹಳ ಬೇಸರವಾಗುತ್ತದೆ. ಯಾರೋ ಒಬ್ಬರು ಖಾಸಗಿ ವ್ಯಕ್ತಿಯ ಜಮೀನಿಗೆ ಸಂಬಂಧಪಟ್ಟಂತೆ ಕೆಎಸ್‌ಆರ್‌ಟಿಸಿ ಸಂಸ್ಥೆಯವರು ಈ ಹಿಂದೆ ಅಕ್ವಿಶಿಷನ್ ಮಾಡಿದ್ದರು. ಆಗ ಅಕ್ವಿಶಿಷನ್ ಆರ್ಡರ್ ಮಾಡಿ ಸುಮಾರು 65 ಲಕ್ಷ ರೂಪಾಯಿ ಅದಕ್ಕೆ ಪರಿಹಾರ ಕೊಡಬೇಕು ಎನ್ನುವಂಥ ತೀರ್ಮಾನವನ್ನು ಮಾಡಿದಾಗ್ಯೂ ಕೂಡ ಹಿಂದಿನ ಸರ್ಕಾರದ ಹಿಂದಿನ ಮುಖ್ಯಮಂತ್ರಿಗಳು ಅದನ್ನು ಕೊನೆಯ ಗಳಿಗೆಯಲ್ಲಿ ರಾಜೀನಾಮೆ ಕೊಡುವ ಹಿಂದಿನ ದಿನವೇ ಅದನ್ನು ಹಿಂದಕ್ಕೆ ತೆಗೆದುಕೊಂಡು ಅದನ್ನು ಕನ್‌ವರ್ಶನ್ ಮಾಡುವುದಕ್ಕೆ ಆರ್ಡರ್ ಮಾಡಿದರು. ಕೊನೆಗೆ ನಾನು ಅದನ್ನು ಹಿಡಿದಿಟ್ಟುಕೊಂಡು ಆ ಕನ್‌ವರ್ಶನ್ ಆರ್ಡರನ್ನು ಮಾಡಬಾರದೆಂದು ಎಸಿಯವರ ಹತ್ತಿರ ಹೇಳಿಕೊಂಡು, ಜಿಲ್ಲಾಧಿಕಾರಿಗಳು ಹೀಗೆ ಎಲ್ಲರ ಹತ್ತಿರ ಕೇಳಿಕೊಂಡರೂ ಸಹ ಅಧಿಕಾರಿಗಳು ಅದನ್ನು ಮೂಲೆಗುಂಪನ್ನು ಮಾಡಿ, ಅಧಿಕಾರಿಗಳು ಗುಪ್ತವಾಗಿ, ಕನ್‌ವರ್ಶನ್ ಮಾಡಿದ್ದಾರೆ. ಅಧಿಕಾರಿಗಳ ಮತ್ತು ಖಾಸಗಿಯವರ ನಡುವೆ ಸಂಚು ನಡೆದೆ, ಇವತ್ತು ನಾನು ಆ ಜಾಗದ ಬಗ್ಗೆ ಹೈಕೋರ್ಟಿನಿಂದ ತಡೆಯಾಜ್ಞೆಯನ್ನು ತೆಗೆದುಕೊಂಡು ಆ ಜಾಗವನ್ನು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣವನ್ನು ನಿರ್ಮಾಣ ಮಾಡಲು ಅದನ್ನು ಸರ್ಕಾರಕ್ಕೆ ಒಪ್ಪಿಸಲು ಕಾದಿರಿಸಿದ್ದೇನೆ. ಸರ್ಕಾರದವರು ಬೇಕಾದರೆ ಅಲ್ಲಿರತಕ್ಕಂಥ 9 ಎಕರೆಯಲ್ಲಿ 4 ಅಥವಾ 5 ಎಕರೆಯನ್ನು ಸ್ವಾಧೀನಪಡಿಸಿಕೊಂಡು ಉಳಿದಿದ್ದನ್ನು ಆ ಭೂಮಾಲೀಕನಿಗೆ ಕೊಡಿ. ಅವರನ್ನು ಕರೆಸಿ ಬೇಕಾದರೆ ಆ ಕೇಸನ್ನು ನಾನು ಹಿಂತೆಗೆದುಕೊಳ್ಳುತ್ತೇನೆ. ಇವತ್ತು ಆ ಉಡುಪಿ ಕ್ಷೇತ್ರದಲ್ಲಿ ಸರ್ಕಾರಿ ಬಸ್ಸು ನಿಲ್ದಾಣವನ್ನು ಸ್ಥಾಪಿಸಲು ಅವಕಾಶವನ್ನು ಕೊಟ್ಟಿದ್ದೇನೆ. ಅದನ್ನು ಸದುಪಯೋಗಮಾಡಿಕೊಳ್ಳಬೇಕೆಂದು ಈ ಸದನದಲ್ಲಿ ಕೇಳಿಕೊಂಡು ಇನ್ನು ಮುಖ್ಯವಾಗಿ ನಾನು ಬಳಕೆದಾರರ ಬಗ್ಗೆ ನಾನು ಮಾತನಾಡಬೇಕಾಗಿದೆ. ಇನ್ನು ನ್ಯಾಯ, ನ್ಯಾಯದ ಬಗ್ಗೆ ಇವತ್ತು ನ್ಯಾಯಾಲಯಗಳಲ್ಲಿ......

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ಯು.ಆರ್.ಸಭಾಪತಿಯವರೆ, ಹಿಂದಿನ ಮುಖ್ಯಮಂತ್ರಿಗಳು ಯಾವುದೋ ಒಂದು ವಿಷಯದಲ್ಲಿ ಡಿ-ನೋಟಿಫೈ ಮಾಡಿದ್ದಾರೆಂದು ಹೇಳಿದಿರಿ. ಅದನ್ನು ನೀವು ಸ್ವಲ್ಪ ಸ್ಥಿರೀಕರಿಸಬೇಕು. You have to kindly enlighten the House. It has gone into the records. ಮಾನ್ಯ ಅಧ್ಯಕ್ಷರೆ ಸಭಾಪತಿಯವರು ಹೇಳಿದ್ದನ್ನು ತಾವು ಕೇಳಿಸಿಕೊಂಡಿದ್ದೀರಾ, ನಗುತ್ತಾ ಇದ್ದಿರಿ ತಾವು. 9 ಎಕರೆ ಜಮೀನನ್ನು ಹಿಂದಿನ ಮುಖ್ಯಮಂತ್ರಿಗಳು ಅವರು ಅಧಿಕಾರವನ್ನು ಬಿಟ್ಟುಕೊಡುವ ಹಿಂದಿನ ರಾತ್ರಿ ಕುಳಿತುಕೊಂಡು, ಡಿ-ನೋಟಿಫೈಡ್ ಮಾಡಿದ್ದಾರೆ ಎಂದು ಹೇಳಿ ಚಾರ್ಜ್ ಮಾಡಿದ್ದಾರೆ. ಅದು ವರದಿಯಲ್ಲಿ ಸಹ ಹೋಗಿದೆ. ಆದ್ದರಿಂದ ಅದರ ಬಗ್ಗೆ ವಿವರಣೆಯನ್ನು ಅವರು ಕೊಡಬೇಕಾಗುತ್ತದೆ. ಏಕೆಂದರೆ ಈ ವಿಷಯ ಪತ್ರಿಕೆಗಳಿಗೆ ಹೋಗಿ ಅದನ್ನು ನಾವುಗಳು ಓದಬೇಕಾಗುತ್ತದೆ. ಆದರೆ ನನಗೆ

ಗೊತ್ತಿರುವ ಪ್ರಕಾರ ಆ ರೀತಿ ಆಗಿಲ್ಲ. ಅದನ್ನು ತಾವು ಸ್ಥಿರೀಕರಿಸಬೇಕಾಗುತ್ತದೆ, ದಾಖಲೆಗಳನ್ನು ಒದಗಿಸಬೇಕಾಗುತ್ತದೆ, ಸಾಕ್ಷ್ಯಾಧಾರಗಳನ್ನು ಇವರು ಹೇಳಬೇಕಾಗುತ್ತದೆ.

ಛೇರ್ಮನ್:- ಮಾನ್ಯ ಶ್ರೀ ಯು.ಆರ್.ಸಭಾಪತಿಯವರೆ, ಹಿಂದಿನ ಮುಖ್ಯಮಂತ್ರಿಗಳು ಡಿ-ನೋಟಿಫೈ ಮಾಡಿದ್ದಾರೆಂದು ಹೇಳಿದ್ದೀರಿ. ಅದರ ಬಗ್ಗೆ ದಾಖಲಾತಿಗಳು ಇದ್ದರೆ ಅದನ್ನು ಮಾನ್ಯ ಸಚಿವರಿಗೆ ಕೊಡಿ.

SRI P.G.R.SINDIA:- He cannot make a charge against the former Chief Minister who is occupying the highest office in this country. This is the second charge he is making in his speech. He has nothing to do with that. How does he knows that he has denotified? How does he knows that he has done it overnight before he has resighed as the Chief Minister? All these things he has to substantiate. He cannot just give a paper and go away like that. No Member can escape like that. This is a very serious charge.

ಶ್ರೀ ಯು.ಆರ್.ಸಭಾಪತಿ:- ಸನ್ಮಾನ್ಯ ಸಭಾಧ್ಯಕ್ಷರೆ, ಈ ಚಾರ್ಜ್‌ನ್ನು ನಾನು ಏನು ಮಾಡಿದೇನೆ, ಅದಕ್ಕೆ ನಾನು ಬದ್ಧವಾಗಿದ್ದೇನೆ. ಅದಕ್ಕೆ ಸಂಬಂಧಪಟ್ಟಂತಹ ಎಲ್ಲಾ ಪತ್ರಗಳನ್ನು ಹೈಕೋರ್ಟಿಗೆ ಸಲ್ಲಿಸಿ, ಅದರ ಮೂಲಕ ಸ್ಟೇಯನ್ನು ಪಡೆದುಕೊಂಡಿದ್ದೇನೆ. ಆ ಪತ್ರದ ನಕಲುಗಳನ್ನು ಬೇಕಾದರೆ ನಾಳೆ ಅಥವಾ ನಾಡಿದ್ದು ಸದನಕ್ಕೆ ತಂದು ಒಪ್ಪಿಸುತ್ತೇನೆ. ಹಿಂದಿನ ಒಬ್ಬ ಮುಖ್ಯಮಂತ್ರಿಗಳು ಆ ರೀತಿಯಾಗಿ ಮಾಡಿದ್ದಾರೆ, ಈ ರೀತಿಯಾಗಿ ಮಾಡಿದ್ದಾರೆಂದು ಹೇಳುವುದು ಸರಿಯಲ್ಲ, ಆದರೆ ನಾನು ಮಾಡದೇ ಇದ್ದದ್ದನ್ನು ಹೇಳುವಷ್ಟು ಮೂರ್ಖನು ಅಲ್ಲ. ಮೂರ್ಖತನದಿಂದ ನಾನು ಸದನಕ್ಕೆ ಆಯ್ಕೆಯಾಗಿ ಬಂದಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):- ನೀವು ಮಿಸ್ ಯೂಜ್ ಮಾಡಿಕೊಳ್ಳುತ್ತಿದ್ದೀರಿ, ನೀವು ಬಹಳ ಬುದ್ಧಿವಂತರು, ಅವರು ಯಾರು ಎಂದು ಹೇಳಬೇಕು. He cannot make a charge like that.

ಛೇರ್ಮನ್:- ಮಾನ್ಯ ಯು.ಆರ್.ಸಭಾಪತಿಗಳೇ, ಆ ಡಿ-ನೋಟಿಫಿಕೇಷನ್ ಮಾಡಿದ್ದುದು ತಮ್ಮ ಹತ್ತಿರ ಇದ್ದರೆ ದಯವಿಟ್ಟು ಸಚಿವರಿಗೆ ಕಳುಹಿಸಿಕೊಡಿ.

SRI P.G.R.SINDIA:- Whether C.M., has done it or somebody has done it, It cannot go on record.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೆ, ನಾನು ಆ ದಾಖಲಾತಿಗಳನ್ನು ಎರಡು ಅಥವಾ ಮೂರು ದಿವಸಗಳಲ್ಲಿ ಬೇಕಾದರೆ ಕೊಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಮಾನ ಯು.ಆರ್.ಸಭಾಪತಿಗಳು ಬಸಳ ಸ್ಪಷ್ಟವಾಗಿ ಹೇಳುತ್ತಿದ್ದಾರೆ, ನಾನು ಈ ಬಗ್ಗೆ ಕೋರ್ಟ್‌ನಲ್ಲಿ ಕೇಸ್ ಹಾಕಿದ್ದೇನೆ. ಸ್ಟೇಯನ್ನು ತೆಗೆದುಕೊಂಡಿದ್ದೇನೆ. ಮತ್ತು ಸದನಕ್ಕೆ ಏನಾದರೂ ಬೇಕಾದರೆ ಆ ದಾಖಲೆಗಳನ್ನು ತಂದು ಕೊಡುತ್ತೇನೆಂದು ಹೇಳುತ್ತಿದ್ದಾರೆ. ಇದಕ್ಕಿಂತಲೂ ಜಾಸ್ತಿ ಏನು ಬೇಕು? ಇದರಲ್ಲಿ ಆಶ್ಚರ್ಯ ಏನಿದೆ? ಎಂ.ಪಿ. ಆಗಿದ್ದರೂ, ಈ ಸದನದಲ್ಲಿ ಈಗಲೂ ಸಹ ಅವರು ಎಂ.ಎಲ್.ಎ. ಆಗಿದ್ದಾರೆ.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೆ, ನಾನು ಆ ವೇಳೆಯಲ್ಲಿ ಅವರ ಹೆಸರನ್ನು ಹೇಳಿ ಪ್ರೆಸ್ ಕಾನ್ಫರೆನ್ಸ್ ಕರೆದು ದಾಖಲೆಗಳನ್ನು ಪತ್ರಿಕೆಯವರಿಗೂ ಸಹ ಕೊಟ್ಟಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಅವರು ಇವತ್ತು ಈ ಸದನದ ಸದಸ್ಯರಾಗಿದ್ದಾರೆ ಅದಕ್ಕೆ ನಾನು ಇದನ್ನು ಕೇಳುತ್ತಿರುವುದು. ನೀವು ಸ್ಪೆಸಿಫಿಕ್ ಆಗಿ ಚಾರ್ಜ್ ಮಾಡಬೇಕಾದರೆ, ಉಡುಪಿಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟ್ಯಾಂಡ್‌ಗೋಸ್ಕರವಾಗಿ 9 ಎಕರೆ ಜಮೀನನ್ನು ಅಕ್ವೈರ್ ಮಾಡಿದ್ದನ್ನು ಹಿಂದಿನ ಮುಖ್ಯಮಂತ್ರಿಗಳು ಡಿ-ನೋಟಿಫೈ ಮಾಡಿದ್ದಾರೆಂದು ಏನು ಹೇಳುತ್ತಿದ್ದೀರಿ, ಅದಕ್ಕೆ ಸಾಕ್ಷಿ ಪುರಾವೆಗಳನ್ನು ಕೊಡಬೇಕಾಗುತ್ತದೆ. ಚಾರ್ಜ್‌ಸನ್ನು ಮಾಡಬೇಕಾದರೆ ಮುಂಚಿತವಾಗಿಯೇ ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರು ಕಡತವನ್ನು ನೀವೇ ತರಿಸಿ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರು ಆಧಾರ ಪೂರ್ವಕವಾಗಿ ಹೇಳುತ್ತಿದ್ದೇವೆಂದು, ನೀವು ನಿರಾಧಾರವೆಂದು ಹೇಳುತ್ತಿದ್ದೀರಿ.

SRI P.G.R.SINDIA:- The Hon'ble Prime Minister is a Member of this House even today. He has to substantiate the charges. He has to give it in writing. He has to submit to the Speaker.

SRI M.MALLIKARJUNA KHARGE:- He is quoting as the Ex-Chief Minister, not as a Prime Minister.

(Interruptions)

ಶ್ರೀ ಯು.ಆರ್.ಸಭಾಪತಿ:- ಪಾಪ ಇವರುಗಳ ಲೀಡರ್‌ಗಳಿಗೆ ಆರೋಪವಾಗಿದ್ದರೆ ನಾನೇನು ಮಾಡಲಿ.....

ಶ್ರೀ ಪಿ.ಜಿ.ಆರ್.ಸಿಂಧ್ಯ:- ನಾನೇನು ನಿಮ್ಮ ಹತ್ತಿರ ಪಾಪ ಎಂದು ಹೇಳಿಸಿಕೊಳ್ಳುವುದಕ್ಕೆ ಇಲ್ಲಿಗೆ ಬಂದಿಲ್ಲ.

ಶ್ರೀ ಯು.ಆರ್.ಸಭಾಪತಿ:- ನಾನೇನು ಅವರ ಬಗ್ಗೆ ಹೇಳಿಲ್ಲ. ಹಿಂದಿನ ಮುಖ್ಯಮಂತ್ರಿಗಳು ಎಂದು ಹೇಳಿರುವುದು,

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನೀವು ಪಾಪ ಎಂದು ಮರುಕವನ್ನು ಪಡತಕ್ಕಂತಹ ಪರಿಸ್ಥಿತಿಯಲ್ಲಿ ನಾವುಗಳು ಯಾರೂ ಇಲ್ಲ.

ಶ್ರೀ ಯು.ಆರ್.ಸಭಾಪತಿ:- ನಿಮ್ಮ ಪರಿಸ್ಥಿತಿಯನ್ನು ನೋಡಿ ನನಗೆ ಮರುಕ ಉಂಟಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ನಿಮ್ಮಂತೆಯೇ ನಾವು ಸಹ ಗೆದ್ದು ಬಂದಿದ್ದೇವೆ. ನೀವು ಹೇಳಿದ್ದಕ್ಕೆಲ್ಲ ಕೇಳಿಕೊಂಡು ಹೆದರಿಕೊಂಡು ಹೋಗುವಂಥವರು ನಾವುಗಳು ಅಲ್ಲ.

ಶ್ರೀ ಯು.ಆರ್.ಸಭಾಪತಿ:- ನೀವು ಏಕೆ ಇಷ್ಟು ಗಡಿಬಿಡಿಯಾಗುತ್ತೀರೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಇದಕ್ಕೆ ಮೊದಲು ನೋಟೀಸ್ ಕೊಡಬೇಕಾಗುತ್ತದೆ. It must be expunged, it must be removed or he must give a Notice.

ಛೇರ್‌ಮನ್:- ಮಾನ್ಯ ಯು.ಆರ್.ಸಭಾಪತಿಗಳು ಏನು ಹೇಳುತ್ತಿದ್ದಾರೆಂದರೆ ನನ್ನ ಹತ್ತಿರ ನೋಟಿಫಿಕೇಷನ್ ಇದೆ. ಅದನ್ನು ಹಾಜರುಪಡಿಸುತ್ತೇನೆಂದು ಹೇಳುತ್ತಿದ್ದಾರೆ ಅದನ್ನು ಸದನಕ್ಕೆ ಕೊಡಬೇಕು. ಇಲ್ಲದೇ ಇದ್ದರೆ ಮಾತನಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಯು.ಆರ್.ಸಭಾಪತಿಗಳು ಹಿಂದಿನ ಮುಖ್ಯಮಂತ್ರಿಗಳು ಎಂದು ಹೇಳಿದರು. ಹಿಂದಿನ ಮುಖ್ಯಮಂತ್ರಿಗಳು ಎಂದರೆ ಮೂರು ಜನ ಮುಖ್ಯಮಂತ್ರಿಗಳಾಗಿದ್ದಾರೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಪ್ರಧಾನಿಯಾಗಿದ್ದಾರೆಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್:- ಹಿಂದಿನ ಮುಖ್ಯಮಂತ್ರಿಗಳು ಎಂದು ಹೇಳಿದ್ದಾರೆ, ಅವರು ಏನು ಹೆದರಿ ಓಡಿ ಹೋಗುವಂತಹ ಪ್ರಶ್ನೆ ಇಲ್ಲ. ಅವರು ಏನು ಹೇಳಿದ್ದಾರೆ ಅದಕ್ಕೆ. ಅವರು ಸ್ಪಷ್ಟವಾಗಿ ಕಡತಗಳನ್ನು ಸದನಕ್ಕೆ ಕೊಡುತ್ತೇನೆಂದು ಹೇಳಿದ್ದಾರೆ?

ಹಿಂದಿನ ಮುಖ್ಯಮಂತ್ರಿಗಳು ಎಂದ ತಕ್ಷಣ ನಿಮಗೆ ಭಯಭೀತಿ ಉಂಟಾಗುತ್ತದೆ. ಇದು ನಮ್ಮ ಮುಖ್ಯಮಂತ್ರಿಗಳು ಎಂದು. ಖಂಡಿತ ನಿಮ್ಮ ಮುಖ್ಯಮಂತ್ರಿಗಳು ಅಲ್ಲ, ಖಂಡಿತ ಇಲ್ಲ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಅವರು ಚಾರ್ಜ್‌ನ್ನು ಕೊಡುವಾಗ ಎಂದು ಹೇಳಿದ್ದಾರೆ.

ಛೇರ್‌ಮನ್:- ಮಾನ್ಯ ವಾಟಾಳ್ ನಾಗರಾಜ್‌ರವರೆ......

ಶ್ರೀ ವಾಟಾಳ್ ನಾಗರಾಜ್:- ತಮ್ಮ ಸ್ವಾಮಿ ನಿಷ್ಠೆಯನ್ನು ನೋಡಿ ನನಗೆ ಸಂತೋಷ. ಮೆಚ್ಚುತ್ತೇನೆ. ಅದರ ಬಗ್ಗೆ ಎರಡು ಮಾತು ಇಲ್ಲ, ಸ್ವಾಮಿ ನಿಷ್ಠೆಯನ್ನು ಮೆಚ್ಚಬೇಕು. ಸ್ವಾಮಿ ನಿಷ್ಠೆಯನ್ನು ಮೆಚ್ಚಬೇಕಾದುದು ಸೌಜನ್ಯ. ಆದರೆ ಅವರು ಹೇಳುತ್ತಿರುವುದು ಬೇರೆ ಮುಖ್ಯ ಮಂತ್ರಿಗಳ ಬಗ್ಗೆ ಇವರು ಹೇಳುತ್ತಿರುವುದು ತಮ್ಮ ಮುಖ್ಯಮಂತ್ರಿಗಳೇ ಎಂದು ಹೇಳಿ ತಮ್ಮ ಮೈ ಮೇಲೆ ಏಕೆ ಹಾಕಿಕೊಳ್ಳುತ್ತಿದ್ದೀರಿ?

ಚೇರ್‌ಮನ್:- ಅವರು ಸ್ಪಷ್ಟೀಕರಣವನ್ನು ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್:- ಅವರು ಈಗ ಹೇಳುತ್ತಾರೆ, ಆದರೆ ಅವರಿಗೆ ಹೇಳುವುದಕ್ಕೆ ಬಿಡಲಿಲ್ಲ......

ಚೇರ್‌ಮನ್:- ಅವರು ತಾವು ಬರುವುದಕ್ಕೆ ಮುಂಚೆ ಮಾತನಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಮುಂದಕ್ಕೆ ಹೇಳುವುದಕ್ಕೆ ಅವರಿಗೆ ಬಿಡುತ್ತಿಲ್ಲವಲ್ಲ ರಥಕ್ಕೆ ಒಳ್ಳೆ ಗೊದಮವನ್ನು ಕೊಟ್ಟ ಹಾಗೆ, ಅವರು ಸ್ಪೀಡ್ ಆಗಿ, ನಿಧಾನವಾಗಿ ಹೇಳಿಕೊಂಡು ಹೋಗುತ್ತಿದ್ದರೆ..... ಈ ಗೊದಮ ಎಂದರೆ ತಾವು ನೋಡಿರಬೇಕೆಂದು ಕಾಣುತ್ತದೆ. ಗೊದಮ ಎಂದರೆ ಅಧ್ಯಕ್ಷರೆ, ದೇವರು ಇರತಕ್ಕಂತಹ ಒಂದು ಬರೀ ರಥ, ಆ ರಥ ಹೋಗುವಾಗ ಅದನ್ನು ನಿಲ್ಲಿಸುವುದಕ್ಕೆ ಒಂದು ವಿಧಾನವಿದೆ. ಅದರಲ್ಲಿ ರಥದ ಚಕ್ರಕ್ಕೆ ಮಧ್ಯದಲ್ಲಿ ಒಂದು ದೊಡ್ಡ ಮರದ ತುಂಡನ್ನು ಕೊಡುತ್ತಾರೆ. ಅದಕ್ಕೆ ಗೊದಮ ಎಂದು ಕರೆಯುತ್ತಾರೆ. ಆ ರೀತಿಯಾಗಿ ಗೊದಮವನ್ನು ಕೊಡತಕ್ಕಂತಹ ವ್ಯಕ್ತಿಗಳಿದ್ದಾರೆ. ಅದು ಹೇಗೆ ಎಂದರೆ, ಬಹಳ ದೊಡ್ಡದಾದ ರಥ ಹೋಗುವಾಗ ರಥದ ಚಕ್ರಕ್ಕೆ ನಿಲ್ಲಿಸುವುದಕ್ಕೆ ಒಬ್ಬರು ವ್ಯಕ್ತಿಗಳು ಒಂದು ದೊಡ್ಡ ಮರದ ತುಂಡನ್ನು ಕೊಡುತ್ತಾರೆ. ಆಗ ಅಷ್ಟು ಜೋರಾಗಿ ಹೋಗುತ್ತಿದ್ದಂತಹ ರಥ ನಿಲ್ಲುತ್ತದೆ. ಅಂದರೆ ಅಂತಹ ರಥವನ್ನು ತಡೆದು ನಿಲ್ಲಿಸುವಂತಹ ಶಕ್ತಿ ಆ ಗೊದಮಕ್ಕೆ ಇದೆ. ಅದು ಅವರಿಗೆ ಬೇಡವಂತೆ ನಾನೇ ತೆಗೆದುಕೊಳ್ಳುತ್ತೇನೆ. ನೀವು ಅದರ ಅರ್ಥವನ್ನು ತಿಳಿದುಕೊಳ್ಳದೇ ನಮಗೆ ಬೇಡ ಎಂದರೆ ನೀವೇ ತೆಗೆದುಕೊಳ್ಳಿ ಎಂದರೆ ನಾನೇ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್:- ನಿಯಮ 328ರ ಕೆಳಗೆ derogatory remarks ಯಾರದೇ ವಿರುದ್ಧವಾಗಿ ಮಾಡಿದರೆ, ಅದಕ್ಕೆ ನೋಟೀಸ್ ಕೊಡಬೇಕೆಂದು ಇದೆ. "No

allegation of a defamatory or incriminatory nature shall be made by member against any person unless the member has given previous intimation to the Speaker and also to the Minister concerned so that the Minister may be able to make an investigation into the matter for the purpose of reply." If he has got any specific allegation, it is his bounden duty to give a Notice to the Speaker, thereby the other person will have an opportunity to rebut. Now it should not go into the records.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಈ ರೂಲ್ ಇದಕ್ಕೆ ಅಪ್ಲಿಕಬಲ್ ಆಗುವುದಿಲ್ಲ, ಏಕೆಂದರೆ ಇಲ್ಲಿ ಸಂಬಂಧಪಟ್ಟಂತಹ ಇಲಾಖೆಯ ಬಗ್ಗೆ ಮಾತನಾಡುವಾಗ ಹಿಂದಿನ ಮುಖ್ಯಮಂತ್ರಿಗಳು ಎಂದು ಹೇಳಿದ್ದರೆ, ಎಂದು ಹೇಳಿದರೆ ಅದರಿಂದ ಏನೂ ತಪ್ಪಾಗುವುದಿಲ್ಲ. ನಾವುಗಳು ಹಿಂದೆ ಎಷ್ಟೋ ಸಲ ರೆಫರ್ ಮಾಡಿದ್ದೇವೆ. ಆದರೆ ಅವರು ನೋಟೀಸ್ ಕೊಡತಕ್ಕಂಥದ್ದು ಇನ್‌ಫರ್ಮೇಷನ್ ಕೊಡತಕ್ಕಂಥದ್ದು ಯಾವಾಗ ಎಂದರೆ, ಅವರ ಮೇಲೆ ಸ್ಪೆಸಿಫಿಕ್ ಆಗಿ ಆರೋಪವನ್ನು ಮಾಡಿ ಅವರ ಮೇಲೆ ಹೆಸರನ್ನು ತೆಗೆದುಕೊಂಡು ಚಾರ್ಜ್ ಮಾಡತಕ್ಕಂಥದ್ದು ಆರೋಪವನ್ನು ಮಾಡತಕ್ಕಂಥದ್ದು ಇದ್ದರೆ ಆ ಸಂದರ್ಭದಲ್ಲಿ ನೋಟೀಸ್ ಕೊಡತಕ್ಕಂಥದ್ದು ಬರುತ್ತದೆ. ಚರ್ಚೆಯಲ್ಲಿ ಮಾಜಿ ಮುಖ್ಯಮಂತ್ರಿಗಳು ಈ ರೀತಿಯಾಗಿ ಡೆಲೀಟ್ ಮಾಡಿದ್ದಾರೆ, ನಾನೇ ಖುದ್ದಾಗಿ ಹೋಗಿ ಕೋರ್ಟ್‌ಗೆ ಸಬ್‌ಮಿಟ್ ಮಾಡಿದ್ದೇವೆ. ನಿಮಗೆ ಅಧಿಕೃತವಾದಂತಹ ವರದಿಯು ನಿಮಗೆ ಬೇಕು ಎಂದು ಹೇಳಿದರೆ ತಂದು ಕೊಡುತ್ತೇನೆಂದು ಹೇಳಿದರೆ, ಇದಕ್ಕಿಂತಲೂ ಹೆಚ್ಚಿನ ಮಾಹಿತಿಯು ಏನು ಬೇಕು ಎನ್ನುವುದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೆ, ಬೇಡಿಕೆಯ ಮೇಲೆ ಚರ್ಚೆಯಾದಾಗ, ಕೂಡ ತಮ್ಮ ಹಕ್ಕುಬಾಧ್ಯತೆಗಳನ್ನು ಚಲಾಯಿಸುವಾಗ, ಮತ್ತೊಬ್ಬರ ಮೇಲೆ ಗುರುತರವಾದಂತಹ ಆಪಾದನೆಯನ್ನು ಮಾಡಿದರೆ ಅದಕ್ಕಾಗಿ ಈ ನಿಯಮಾವಳಿಗಳನ್ನು ರೂಪಿಸಲಾಗಿದೆ. ಈಗ ಅವರು ಹೇಳುತ್ತಾರೆ ಹಿಂದಿನ ಮುಖ್ಯಮಂತ್ರಿಗಳು ಇಂತಹ ಒಂದು ಆಜ್ಞೆಯನ್ನು ಮಾಡಿ, ತಪ್ಪು ಮಾಡಿದ್ದಾರೆಂದು ಒಂದು ಆಪಾದನೆಯನ್ನು ಮಾಡಿದ್ದಾರೆ. ಮಾನ್ಯ ಸಾರಿಗೆ ಸಚಿವರು ಇಂತಹ ಆಪಾದನೆಗಳಿಗೆ ಸಂಬಂಧಪಟ್ಟಂಥ ಪುರಾವೆಗಳನ್ನು ಸದನಕ್ಕೆ ಒದಗಿಸಬೇಕೆಂದು ಪ್ರಶ್ನೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ತಮಗೆ ನೋಟೀಸನ್ನು ಕೊಡಬೇಕಾಗುತ್ತದೆ. ಮಾನ್ಯ ಸಚಿವರು ಉತ್ತರವನ್ನು ಕೊಡತಕ್ಕಂತಹ ಸಮಯದಲ್ಲಿ ಇಂಥಿಂಥ ಆಪಾದನೆಗಳು

ಇವೆ ಎನ್ನುವುದು ಗೊತ್ತಿದ್ದರೆ ತಾವು ತಮ್ಮ ದೃಷ್ಟಿಯಲ್ಲಿ ಈ ಆಪಾದನೆಗಳಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಿರ್ಣಯವನ್ನು ಮಾಡತಕ್ಕಂತಹ ಅವಕಾಶಗಳು ಇವೆ. "Provided that the Speaker, may at any time prohibit any member from making any such allegation if he is of the opinion that such allegation is derogatory to the degnity of the House or that no public interest is served by making such allegation." So, it is for your goodself to decide whether it amounts to derogatory remarks and whether such allegation serves any public purpose. Since he has not given a notice to the Speaker, I beg of you to expunge his remarks.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಬೇಡಿಕೆಯ ಬಗ್ಗೆ ಚರ್ಚೆಯನ್ನು ಮಾಡುವಾಗ, As a Chief Minister he acted, for that action he is quoting here, not as a Member. ಅಥವಾ ಒಬ್ಬ ಮೆಂಬರ್ ಎಂದು ಹೇಳಿ ಆಪಾದನೆಯನ್ನು ಮಾಡುತ್ತಿಲ್ಲ. ಹಿಂದೆ ಮುಖ್ಯಮಂತ್ರಿಗಳಾಗಿ ಮಂತ್ರಿಗಳಾಗಿ ಅವರ ಕಾಲದಲ್ಲಿ ಯಾವ ಜಮೀನಿನ ಬಗ್ಗೆ ನೋಟಿಫಿಕೇಷನ್ ಡಿ-ನೋಟಿಫಿಕೇಷನ್ ಆಗಿದೆ ಅದರ ಬಗ್ಗೆ ಸೀಮಿತವಾಗಿ ಹೇಳುವುದಕ್ಕೆ ಹಕ್ಕು ಇಲ್ಲ ಎಂದರೆ ಹೇಗೆ ಹೇಳುವುದು.

ಅಧ್ಯಕ್ಷರು:- ಹಿಂದಿನ ಮುಖ್ಯ ಮಂತ್ರಿಗಳು ಅಂದರೆ ಅವರು ಕರ್ನಾಟಕದರೇ? ಕರ್ನಾಟಕದವರು ಅಂದರೆ ಬಹಳ ಜನ ಇದ್ದಾರಲ್ಲ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಬಹಳ ಜನ ಇದ್ದರೆ ಅವರಿಗೆ ಆಗುತ್ತದೆ. ಇವರು ಏತಕ್ಕೆ ಎದ್ದರು?

ಶ್ರೀ ಸಿದ್ದರಾಮಯ್ಯ:- ಬೇರೆ ಅಂದರೆ ನಿಮ್ಮ ಕಾಲದ ಮುಖ್ಯ ಮಂತ್ರಿಗಳು ಎಂದು ಹೇಳಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇರಲಿ, ಅವರು ಇದ್ದರೆ ಪುರಾವೆ ಆಗಲಿ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ ಬಹಳ ಸ್ಪಷ್ಟವಾಗಿ ಅವರು ಏನು ಹೇಳುತ್ತಾರೆಂದರೆ ನಾನು ಅದನ್ನು ಕೋರ್ಟಿಗೆ ಹಾಕಿದ್ದೇನೆ, ನನ್ನ ಹತ್ತಿರ ದಾಖಲಾತಿಗಳು ಇವೆ ಎಂದು ಹೇಳುತ್ತಾರೆ, ಹಾಗಿದ್ದ ಮೇಲೆ 328ನೇ ನಿಯಮದ ಕೆಳಗೆ ನೋಟೀಸ್ ಕೊಟ್ಟು ಯಾವ ಮುಖ್ಯಮಂತ್ರಿ ಯಾವಾಗ ಮಾಡಿದ್ದಾರೆಂದು ಚರ್ಚೆ ಮಾಡಲಿ. ಅವರು ಹೇಳಿದಂತೆ ಚಾರ್ಜನ್ನು ಸಬ್‌ಸ್ಟಾನ್‌ಷಿಯೇಟ್ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಬೇಡಿಕೆ ಬಗ್ಗೆ ಚರ್ಚೆಯಾಗುವಾಗ....

ಶ್ರೀ ಸಿದ್ದರಾಮಯ್ಯ:- ಬೇಡಿಕೆ ಬಗ್ಗೆ ಚರ್ಚೆ ಮಾಡುವಾಗ ಯಾರ ಮೇಲಾದರೂ ಆಪಾದನೆ ಮಾಡಬಹುದೆಂದು ಇದೆಯೇ ಅದರಲ್ಲಿ? ಬೇಡಿಕೆ ಬಗ್ಗೆ ಚರ್ಚೆ ಮಾಡುವಾಗ, ಮಾನ್ಯ ಸದಸ್ಯರು ಮಾತನಾಡುವಾಗ ಯಾವುದೇ ಮಂತ್ರಿ ಮೇಲೆ ಯಾವುದೇ ಸದಸ್ಯರ ಮೇಲೆ ಯಾವುದೇ ತರಹ ಆರೋಪ ಮಾಡಬಹುದೆಂದು ಇದೆಯೇ ಅದರಲ್ಲಿ?

ಶ್ರೀ ವಾಟಾಳ್ ನಾಗರಾಜ್:- ಏನು ಆರೋಪ? ಮಾಜಿ ಮಂತ್ರಿಗಳು ಒಬ್ಬರು.....

ಶ್ರೀ ಸಿದ್ದರಾಮಯ್ಯ:- ನಿಯಮ 328ರ ಕೆಳಗೆ ಎಲ್ಲ ಮಾನ್ಯ ಸದಸ್ಯರು ಹಕ್ಕನ್ನು ರಕ್ಷಣೆ ಮಾಡುವುದಕ್ಕೋಸ್ಕರ, ಮಂತ್ರಿಗಳ ಹಕ್ಕನ್ನು ರಕ್ಷಣೆ ಮಾಡುವುದಕ್ಕೋಸ್ಕರವಾಗಿ ಅದು ಇರುವುದು. ಆದುದರಿಂದ ಆ ಪ್ರೊಟೆಕ್ಷನ್ ಇರಬೇಕಾಗುತ್ತದೆ. ಅದು ಬಿಟ್ಟು ಯಾರು ಬೇಕಾದರೂ ಅಲಿಗೇಷನ್ ಮಾಡುವುದಕ್ಕಾಗುವುದಿಲ್ಲ. ಯಾರು ಮುಖ್ಯ ಮಂತ್ರಿ ಎಂದು ಹೇಳಲಿ

ಶ್ರೀ ವಾಟಾಳ್ ನಾಗರಾಜ್:- ಬೇಡಿಕೆ ಬಗ್ಗೆ ಚರ್ಚೆ ಮಾಡವಾಗ, ಅನೇಕ ವಿಚಾರಗಳನ್ನು ನಾವು ಹೇಳಬೇಕಾಗುತ್ತದೆ. ಪ್ರತಿಯೊಂದಕ್ಕೂ ಅಧ್ಯಕ್ಷರಿಗೆ ನೋಟೀಸ್ ಕೊಟ್ಟು ಯಾರು ಮೇಲೆ ಚಾರ್ಜ್ ಮಾಡುತ್ತೇವೆಂದು ಹೇಳುವುದು ಕಷ್ಟ ಬಿಡಿ. ಹಾಗಾದರೆ ಯಾರ ಮೇಲೆ ಏನೂ ಮಾತನಾಡುವ ಹಾಗೇ ಇಲ್ಲ ಬಿಡಿ ನಾವು. ಯಾರ ಬಗ್ಗೆ ಏನೂ ಚಕಾರ ಎತ್ತುವ ಹಾಗೇ ಇಲ್ಲ. ನಾನು ತಮ್ಮನ್ನು ಪ್ರಶ್ನೆ ಮಾಡುವುದಿಲ್ಲ, ತಮ್ಮ ಕೊಠಡಿಗೆ ಬರಬಾರದೆಂದು ಅಲ್ಲ. ಪ್ರತಿದಿನ ನಾವು ಎಲ್ಲ ರೆಡಿ ಮಾಡಿಕೊಂಡು ನಾಳೆ ಇಂಥವರ ಮೇಲೆ ಮಾತನಾಡುತ್ತಿದ್ದೇವೆ, ದಯವಿಟ್ಟು ಅವಕಾಶ ಕೊಡಿ ಎಂದು ಕೇಳುವುದು: ಇದು ನನಗೆ ಅರ್ಥವಾಗುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಸೆಕ್ಷನ್ 48ರಲ್ಲಿ ಡೀ ನೋಟಿಫಿಕೇಷನ್ ಮಾಡತಕ್ಕದ್ದು. ಲ್ಯಾಂಡ್ ಅಕ್ವಿಸಿಷನ್ ಆ್ಯಕ್ಟ್ ಪ್ರಕಾರ Any Notification under the land acquisition act, it must be gazetted or publicly notified. ಇದು ಆಗುತ್ತಿದೆ. ಒಂದು ಸಾರಿ ನೋಟಿಫಿಕೇಷಿನ್ ಬಂದಮೇಲೆ It becomes a public notice Every public has got access to the Notification The Notification becomes a public document. ಆದುದರಿಂದ ಈ ನೋಟಿಫಿಕೇಷನ್ ಬಗ್ಗೆ ಇಲ್ಲಿ ಮಾತನಾಡಬಾರದು, ಹೇಳಬಾರದೆಂದು ಅಲ್ಲ ಅದರೆ ಯಾರು ಮಾಡಿದರು, ಯಾವ ಸಂದರ್ಭದಲ್ಲಿ ಮಾಡಿದರು ಅದನ್ನು ಸಭಾಪತಿಯವರು ಹೇಳಿದ್ದಾರೆ. ಅದರ ಬಗ್ಗೆ ಅವರು ಮಾಹಿತಿ ಕೊಡಬೇಕಾಗುತ್ತದೆ ಒಂದು ನೋಟಿಫಿಕೇಷನ್ ಬಗ್ಗೆ ಈ ಸಭೆಯಲ್ಲಿ ಹೇಳುವುದಕ್ಕೆ ಬರುವುದಿಲ್ಲವೆಂಬುದು ಅಲ್ಲ. It becomes a public document. Any body any public can have access to this document.

ಅಧ್ಯಕ್ಷರು:- ತಮ್ಮ ಚಾರ್ಜ್ ಏನು, ಅಲಿಗೇಷನ್ ಏನು ಹೇಳಿ What is the

allegation he has made

ಶ್ರೀ ಯು.ಆರ್.ಸಭಾಪತಿ:- ಈಗಿನ ಪ್ರಧಾನ ಮಂತ್ರಿಗಳ ಅಥವಾ ಮಾಜಿ ಮುಖ್ಯ ಮಂತ್ರಿಗಳ ವಿಚಾರವಾಗಲಿ ನಾನು ಎತ್ತಲಿಲ್ಲ. ಹಿಂದಿನ ಮುಖ್ಯಮಂತ್ರಿಗಳಲ್ಲಿ ಒಬ್ಬರು ನಮ್ಮಲ್ಲಿ ಒಂದು 9 ಎಕರೆ ಜಮೀನು ಕೆಎಸ್‌ಆರ್‌ಟಿಸಿ. ಲ್ಯಾಂಡ್ ಎಂದು ಅಕ್ವಿಸಿಷನ್ ಆರ್ಡರ್ ಮಾಡಿದ್ದರು. ಕೆಎಸ್‌ಆರ್‌ಟಿಸಿ.ಯವರು ಅಕ್ವಿಸಿಷನ್ ಮಾಡಿ 65 ಲಕ್ಷ ಕಾಂಪನ್‌ಸೇಷನ್ ಕೊಟ್ಟು ಅದನ್ನು ಕೆಎಸ್‌ಆರ್‌ಟಿಸಿ.ಯವರು ಪರ್ಚೇಸ್ ಮಾಡುವುದೆಂದು ತೀರ್ಮಾನವಾದ ಮೇಲೆ, ಒಂದೇ ದಿನಕ್ಕೆ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜಿನಾಮೆ ಕೊಡುವ ಮೊದಲು, ಅದನ್ನು ಡೀ ನೋಟಿಫೈ ಮಾಡಿದರು. ಅದಕ್ಕೆ ನಾನು ಏನು ಮಾಡಿದೆ ಎಂದರೆ ಇದು ಸರ್ಕಾರಕ್ಕೆ ಸಿಗುವಂಥ ಲ್ಯಾಂಡ್, ಇದನ್ನು ಉಳಿಸಿಕೊಳ್ಳಬೇಕಾದುದು ನಾನು ಒಬ್ಬ ಶಾಸಕನಾಗಿ ನನ್ನ ಕರ್ತವ್ಯ ಮಾಡಬೇಕೆಂದು ಅಲ್ಲಿ ಅವರು ಮೂಲ ಗೇಣಿಗೆ ತೆಗೆದುಕೊಂಡ ವಿಚಾರ ನನ್ನ ಗಮನಕ್ಕೆ ಬಂದು, ಅದಕ್ಕೆ ಅವರು ಡಿಕ್ಲರೇಷನ್ ಕೊಡದೇ ಇದ್ದುದುರಿಂದ ಈ ಆಸ್ತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬಹುದೆಂಬ ವಾದವನ್ನು ಇಟ್ಟುಕೊಂಡು ನಾನು ಹೈಕೋರ್ಟಿಗೆ ಹೋಗಿ ಸ್ಟೇ ಪಡೆದುಕೊಂಡಿದ್ದೇನೆ. ಬೇಕಾದರೆ ಆ ಓನರ್ ಅನ್ನು ಕರೆಯಿಸಿ 4 ಎಕರೆ ನೀವು ಇಟ್ಟುಕೊಂಡು 5 ಎಕರೆ ಬಿಡಿ ಎಂದರೆ ಬಿಟ್ಟು ಬಿಡೋಣ; ಕೇಸನ್ನು ವಿತ್‌ಡ್ರಾ ಮಾಡೋಣವೆಂದು ಹೇಳಿದ್ದೇನೆ. ಬೇರೆ ಯಾವ ರೀತಿಯಲ್ಲಿ ಯಾರ ಮೇಲೆ ಆರೋಪ ಹಾಕಲಿಕ್ಕೆ ಅಲ್ಲ. ಇದು ನಡೆದಂತಹ ಘಟನೆಯನ್ನು ನಾನು ವಿವರಿಸಿದ್ದೇನೆ. ನಾನು ಮಾಜಿ ಮುಖ್ಯಮಂತ್ರಿಗಳು ಎಂದು ಹೇಳಿದೆ. ಅವರು ಹೇಳುವಂತಹದ್ದು ಅಲ್ಲ.

ಶ್ರೀ ಜೆ.ಹೆಚ್.ಪಟೇಲ್:- ಇದು ಬಹಳ ಕಷ್ಟವಾಗುತ್ತದೆ. ಡೀನೋಟಿಫಿಕೇಷನ್ ಮಾಡಬೇಕೆಂದು ಸಹಿ ಮಾಡಿರುವ ಮುಖ್ಯಮಂತ್ರಿ ಯಾರು? ಅಷ್ಟೆ ನಮಗೆ ಇನ್ನೇನು ಬೇಕಾಗಿಲ್ಲ ಹಿಂದೆ ಮುಖ್ಯಮಂತ್ರಿಯಾಗಿದ್ದವರ ಹೆಸರು ಹೇಳುವುದಕ್ಕೆ ಏನು ಕಷ್ಟ? ಮುಖ್ಯಮಂತ್ರಿ ಯಾರು ಎಂದು ಕೇಳಿದೆ.

ಶ್ರೀ ಯು.ಆರ್.ಸಭಾಪತಿ:- ಇದೇ ರೀತಿ ಆಗ ನನ್ನ ಬಾಯಿ ಬಿಡಿಸಲಿಕ್ಕೆ ಹೋಗಿ ನನ್ನ ಮೇಲೆ ರೇಗಿದ್ದಾರೆ. ಅವರಿಗೆ ಒಂದು ಕಾಯಿದೆ. ನನಗೆ ಒಂದು ಕಾಯಿದೆ; ಇದು ಏನು ವ್ಯವಸ್ಥೆ ಇದು? ಆಮೇಲೆ ಗಲಾಟೆ ಮಾಡಿದರು.

ಶ್ರೀ ಜೆ.ಹೆಚ್.ಪಟೇಲ್:- ತಾರೀಖು ಹೇಳಿ.

ಶ್ರೀ ಯು.ಆರ್.ಸಭಾಪತಿ:- ತಾರೀಖು ಅಲ್ಲ, ಕಡತವನ್ನೇ ನಿಮಗೆ ಕೊಡುತ್ತೇನೆ. ನನಗೆರಡು ದಿನ ಅವಕಾಶ ಕೊಡಿ ಹೈಕೋರ್ಟಿನಲ್ಲಿದೆ ಕಡತ, ತಂದು ಕೊಡುತ್ತೇನೆ.

ಶ್ರೀ ಜೆ.ಹೆಚ್.ಪಟೇಲ್:- ಈಗ ಅದು ವಿಷಯ ಗೊತ್ತಾಯಿತು. ಯಾರೋ ಮಾಡಿದ ತಪ್ಪನ್ನು ನಮ್ಮ ತಪ್ಪು ಎಂದು ನಾವು ತಿಳಿದುಕೊಳ್ಳುತ್ತಿದ್ದೆವು. ಈಗ ಯಾರು ಮಾಡಿದ್ದಾರೆಂದು ಗೊತ್ತಾಗಿದೆ. ಇನ್ನು ನಿಮಗೆ ಅಡ್ಡಿ ಬರುವುದಿಲ್ಲ.

ಶ್ರೀ ಆರ್.ಸಭಾಪತಿ:- ನಾನು ನಿಮ್ಮ ತಲೆ ಮೇಲೆ ಗೂಬೆ ಕೂರಿಸಲಿಲ್ಲ.

ಅಧ್ಯಕ್ಷರು:- ಸಾಮಾನ್ಯವಾಗಿ ಸದನದಲ್ಲಿ ಮಾತನಾಡುವಾಗ, ಆಗಲೇ ಕೆಎಸ್ಆರ್‌ಟಿಸಿ. ಬಗ್ಗೆ ಮಾತನಾಡುತ್ತಿದ್ದಾಗ ನಾನು ನಿಮ್ಮನ್ನೆಲ್ಲ ಗಮನಿಸುತ್ತಿದ್ದೆ. ಬೀಳಗಿಯವರ ವಿಚಾರ ಎಲ್ಲಾ ಪ್ರಸ್ತಾಪ ಮಾಡಿದ್ದನ್ನು ನಾನು ಕೇಳಿಸಿಕೊಂಡೇ ಬಂದೆ. ನೀವು ನಿಖರವಾದ ಆರೋಪಗಳನ್ನು ಮಾಡಲಿಲ್ಲ. ಹಾಗೇ ಹೇಳಿಕೊಳ್ಳುತ್ತಾ ಹೊರಟಿರಿ, ಅದು ಪ್ರಯೋಜನವಾಗುವುದಿಲ್ಲ. ಇಂತಿಷ್ಟು ದರಕ್ಕೆ ಇಂಥ ಪದಾರ್ಥ ಸಿಗುತ್ತಿತ್ತು, ಇದು ನಿಯಮಾವಳಿ ಹೀಗಿದೆ. ಇದನ್ನು ಉಲ್ಲಂಪಿಸಿ ಹೆಚ್ಚು ಹಣ ಕೊಟ್ಟಿದ್ದಾರೆ, ಇದರಿಂದ ಕೆಎಸ್ಆರ್‌ಟಿಸಿ.ಗೆ ಹೆಚ್ಚು ಹೊರೆ ಬಿದ್ದಿದೆ, ಅನಗತ್ಯ ಹೊರೆ ಬಿದ್ದಿದೆ ಇಂಥವರು ಬಂದರೆ ನಿಮ್ಮ ಅನುಕೂಲಕ್ಕೆ ಹಿಂದಿನ ಹಳೆಯ ಪ್ರೊಸೀಡಿಂಗ್ಸ್ ಎಲ್ಲ ತೆಗೆದು ನೋಡಿ ವಿರೋಧ ಪಕ್ಷದಲ್ಲಿದ್ದಂಥ ಕೆಲವು ಮುಖಂಡರುಗಳು ಯಾವ ರೀತಿ ಆರೋಪಗಳನ್ನು ಮಾಡುತ್ತಿದ್ದರು; ಸಿದ್ದವೀರಪ್ಪನವರ ಭಾಷಣ ತೆಗೆದು ನೋಡಿ, ಚನ್ನಬಸಪ್ಪನವರ ಭಾಷಣ ತೆಗೆದುನೋಡಿ, ಗೋಪಾಲಗೌಡರ ಭಾಷಣೆ ತೆಗೆದುನೋಡಿ; ನಿಮಗೆ ಅದರಿಂದ ಅನುಕೂಲವಾಗುತ್ತದೆ. ನೀವು ಮೊದಲ ಸಾರಿ ಸದನಕ್ಕೆ ಬಂದಿದ್ದೀರಿ ನಿಮ್ಮ ಅದೃಷ್ಟಕ್ಕೆ ನಿಮ್ಮ ಪಕ್ಷದ ಶಕ್ತಿಯ ಕಾರಣದಿಂದ ಮೊದಲನೇ ಬೆಂಚಿಗೆ ಬಂದಿದ್ದೀರಿ. ನಿಮಗೆ ನಾನು ಉಪದೇಶ ಮಾಡುತ್ತಿಲ್ಲ. ನನ್ನ ಆಸೆ, ನೀವು ಇನ್ನೂ ಹೆಚ್ಚು ಜವಾಬ್ದಾರಿಯುತವಾಗಿ ಮಾತನಾಡಬೇಕು ಹೆಚ್ಚು ವ್ಯಾಸಂಗ ಮಾಡಿ ಬರಬೇಕು, ಹೆಚ್ಚು ವಿವರಗಳನ್ನು ಇಟ್ಟುಕೊಂಡು ಮಾತನಾಡಬೇಕು ಒಬ್ಬ ಮಾಜಿ ಮುಖ್ಯಮಂತ್ರಿ ಎಂದು ಹೇಳಬಹುದು ಅಥವಾ ಇಂಥ ಮಾಜಿ ಮುಖ್ಯಮಂತ್ರಿ ಎಂದು ಹೇಳಬಹುದು ರಾಜೀನಾಮೆ ಕೊಡುವ ಮೊದಲು ಅಂದರೆ ಎಲ್ಲರೂ ಮಾಜಿ ಆಗಬೇಕಾದರೆ ರಾಜೀನಾಮೆ ಕೊಟ್ಟರೆ ಮಾಜಿ ಆಗುವುದು; ಕೊಡದಿದ್ದರೆ ಹಾಲಿ ಇರುತ್ತಾರೆ ಜೀವಂತ ಈಗ ಇರುವವರು, ಹೊರಟು ಹೋಗಿರುವವರು ಎಲ್ಲಾ ಸೇರಿಸಿಕೊಂಡರೆ 13-14 ಜನರಿದ್ದಾರೆ ಮಾಜಿ ಮುಖ್ಯಮಂತ್ರಿಗಳು. ಅವರಲ್ಲಿ ಯಾರು ಎಂದು ತಿಳಿದುಕೊಳ್ಳುವುದು ನಾವು. ಅವರು ಜೀವಂತ ಇದ್ದಾರಾ, ಹೋಗಿದ್ದಾರಾ, ಯಾರು ಯಾವಾಗ ಮಾಡಿದರು ಯಾವ ತಾರೀಖಿಗೆ ಮಾಡಿದರು? ಹಾಗೆಲ್ಲ ತಾವು ಸುಲಭದಲ್ಲಿ ಹೇಳಿದರೆ ಎಲ್ಲ ಕಡತಕ್ಕೆ ಹೋಗುತ್ತದೆ, ನಾಳೆ ಪತ್ರಿಕೆಗಳಲ್ಲಿ ಬರುತ್ತದೆ. ಪತ್ರಿಕೆಯವರು ಅವರದೇ ಆದ ವರ್ಣನೆ ಕೊಡುತ್ತಾರೆ ಒಬ್ಬರ ವ್ಯಕ್ತಿತ್ವಕ್ಕೆ ಪೆಟ್ಟು ಬೀಳುವುದಾದರೆ ನಾವು ಕಾನೂನು ರೀತ್ಯಾ ಕೊಡತಕ್ಕ ರಕ್ಷಣೆ ಯಾವುದೇ ಒಬ್ಬ ವ್ಯಕ್ತಿಗೆ ಕೊಡುವುದಕ್ಕೆ ಸಾದ್ಯವಾಗದೆ ಹೋದರೆ ನಾವು ಸದನದ ಕಲಾಪವನ್ನು ನ್ಯಾಯವಾದ ರೀತಿಯಲ್ಲಿ ನಡೆಸುವುದಕ್ಕಾಗುವುದಿಲ್ಲ. ಆದುದರಿಂದ ತಮಗೆ ಸಲಹೆ ಕೊಡುತ್ತಿದ್ದೇನೆ, ದಯಮಾಡಿ ತಾವು ಹೆಚ್ಚು ಜಾಗ್ರತರಾಗಿ ಮಾತನಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್:- ತಮಗೆ ಧನ್ಯವಾದಗಳು ಅಂಥ ಸಂಭವನೀಯ ಅಪಾಯಕ್ಕೆ ನಿಯಮ 328 ಇರುವುದು. ಅದುದರಿಂದ ಅದನ್ನು ದಯಮಾಡಿ ಎಲ್ಲರೂ

ಗಮನಿಸಬೇಕು.

ಶ್ರೀ ಯು.ಆರ್.ಸಭಾಪತಿ:- ತಮ್ಮ ಸಲಹೆ ಏನಿದೆ ಅದಕ್ಕೆ ಧನ್ಯವಾದಗಳನ್ನು ಹೇಳುತ್ತಿದ್ದೇನೆ. ಅನೇಕ ವಿಚಾರಗಳನ್ನು ನಾನು ನಿಖರವಾಗಿ ಹೇಳಬೇಕೆಂದು ಬಯಸಿದ್ದೇನೆ. ಆದರೆ ನಿಖರವಾಗಿ ಹೇಳುವುದಕ್ಕೆ ಹೋದ ಕೂಡಲೆ ನಮ್ಮ ಮೈಮೇಲೆ ಬೀಳುತ್ತಾರೆ. ಹೇಳದಿದ್ದರೆ, ಹೇಳಲಿಲ್ಲ ಎಂದು ಹೇಳುತ್ತಾರೆ. ನಾನು ಈ ಜಂಜಾಟದಲ್ಲಿ ಸಿಕ್ಕಿದ್ದೇನೆ. ನಾನು ಹೊಸ ಸದಸ್ಯ ಹೌದು, ನನಗೆ ಅವರಷ್ಟು ಅನುಭವ ಇಲ್ಲ.

ಅಧ್ಯಕ್ಷರು:- ಅವರೆಲ್ಲ ನಿಮ್ಮ ಮೈಮೇಲೆ ಬಿದ್ದರೂ ನಿಮ್ಮ ಪರ ನಾನು ಇರುತ್ತೇನೆ ಹೇಳಿ. ಅವರೆಲ್ಲ ಮೈಮೇಲೆ ಬೀಳುತ್ತಾರೆಂದರೆ ನೀವು ಹೇಳುವುದನ್ನು ಹೇಳುವುದಕ್ಕೆ ಬಿಡಲಿಲ್ಲ ಎಂಬುದು ಒಂದು ಆರೋಪವಾಗುತ್ತದೆ ಹಾಗೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಯು.ಆರ್.ಸಭಾಪತಿ:- ನಾನು ಅತ್ಯಂತ ಕಿರಿಯ ಸದಸ್ಯ. ನಾನು ಇಲ್ಲಿ ತುಂಬಾ ಕಲಿಯಲಿಕ್ಕೆ ಇದೆ. ಇವರು ಯಾವ ಸಮಯದಲ್ಲಿ ಯಾವ ರೀತಿಯಲ್ಲಿ ಮೈ ಮೇಲೆ ಬೀಳುತ್ತಾರೆಂದು ನನಗೆ ಇನ್ನೂ ಗಮನಕ್ಕೆ ಬಂದಿಲ್ಲ. ಇನ್ನೂ ಒಂದೊಂದೆ ನಾನು ಕಲಿತುಕೊಳ್ಳುತ್ತಿದ್ದೇನೆ. ನಿಮ್ಮ ಹತ್ತಿರ ನಾನು ಮತ್ತಷ್ಟು ಕಲಿತುಕೊಳ್ಳುವುದಕ್ಕು ಪ್ರಯತ್ನಪಡುತ್ತೇನೆ. ಇನ್ನು ಬಳಕೆದಾರರ ನ್ಯಾಯಾಲಯಗಳ ಬಗ್ಗೆ ನಾನು ಬಹಳ ಗಂಭೀರವಾಗಿ ಸರ್ಕಾರದ ಗಮನ ಸೆಳೆಯಬಯಸುತ್ತೇನೆ ಇವತ್ತು ನ್ಯಾಯಾಲಯದಲ್ಲಿ ಒಬ್ಬ ಗ್ರಾಮೀಣ ಪ್ರದೇಶದ ಗ್ರಾಹಕನಿಗೆ ಸಿಗತಕ್ಕ ನ್ಯಾಯ ಬಹಳಷ್ಟು ವಿಳಂಬವಾಗುತ್ತಿರುವುದನ್ನು ಸಾರ್ವತ್ರಿಕವಾಗಿ ನಾವು ಚರ್ಚೆ ಮಾಡುತ್ತಿದ್ದೇವೆ. ಇವತ್ತು ನಾನು ಕೇಳುತ್ತಿರುವುದು ಬಳಕೆದಾರರ, ಗ್ರಾಹಕರ ನ್ಯಾಯಾಲಯಗಳನ್ನು ಬಹಳಷ್ಟು ಪರಿಣಾಮಕಾರಿಯಾಗಿ ಅವನ್ನು ಅಸ್ತಿತ್ವಕ್ಕೆ ತರತಕ್ಕ ವ್ಯವಸ್ಥೆಯನ್ನು ತಾವು ರೂಪಿಸಬೇಕೆಂದು ನಾನು ಸರ್ಕಾರವನ್ನು ನಿಮ್ಮ ಮೂಲಕ ಕೇಳಬಯಸುತ್ತೇನೆ. ದೈನಂದಿನ ವ್ಯವಹಾರಗಳಲ್ಲಿ ತನಿಖೆ ಯಾವುದಾದರೂ ಅನ್ಯಾಯವಾದಾಗ, ಮೋಸ ಹೋದ ಬಳಕೆದಾರನೊಬ್ಬ ತನ್ನ ಹಣೇಬರಹವನ್ನು ದೂಷಿಸಿ ಅಸಹಾಯಕನಾಗಿರಬೇಕಾದ ಪರಿಸ್ಥಿತಿಯಲ್ಲಿ, ಈ ಬಳಕೆದಾರರ ನ್ಯಾಯಾಲಯ ಸ್ಥಾಪನೆಯಾಯಿತು. ಇವತ್ತು ಬಳಕೆದಾರರ, ಗ್ರಾಹಕರ ಏನು ಚಳುವಳಿ ಇದೆ, ಒಬ್ಬ ಬಳಕೆದಾರನಿಗೆ, ಗ್ರಾಹಕನಿಗೆ ನ್ಯಾಯ ಸಿಗಬೇಕಾದರೆ ಈ ನ್ಯಾಯಾಲಯದಲ್ಲಿ ಬಹಳ ಸುಲಭವಾಗಿ ಇಂತಿಷ್ಟೆ ದಿನದೊಳಗೆ, ಒಂದು ನಿರ್ದಿಷ್ಟವಾದ ದಿನದೊಳಗೆ ಅವನಿಗೆ ನ್ಯಾಯ ಸಿಗುವಂತೆ ಒಂದು ಕಾರ್ಯಕ್ರಮವನ್ನು ಇಲ್ಲಿ ಅಳವಡಿಸಲಾಗಿದೆ. ಅವನು ವಕೀಲರನ್ನು ಕರೆದುಕೊಂಡು ಹೋಗಬೇಕಾಗಿಲ್ಲ. ಅವನಿಗೆ ಏನು ಅನ್ಯಾಯವಾಗಿದೆ ಅವನು ನೇರವಾಗಿ ಬಳಕೆದಾರರ ನ್ಯಾಯಾಲಯದಲ್ಲಿ ವಾದ ಮಾಡಿ, ಅವನಿಗೆ ಆದಂತ ಅನ್ಯಾಯಕ್ಕೆ ಪರಿಹಾರ ಕಂಡುಕೊಳ್ಳುವಲ್ಲಿ ಅವನು ನ್ಯಾಯಾಲಯದಲ್ಲಿ ಯಶಸ್ವಿಯಾಗಿದ್ದಾನೆ. ಇವತ್ತು ಸರ್ಕಾರ ಈ ಗ್ರಾಹಕರ ಬಳಕೆದಾರರ ನ್ಯಾಯಾಲಯಗಳನ್ನು ರಚಿಸುವಲ್ಲಿ, ವೇದಿಕೆಯ ಅಧ್ಯಕ್ಷ ಸ್ಥಾನ ನೇಮಕಾತಿ ಮಾಡುವಲ್ಲಿ ಏತಕ್ಕೆ ವಿಳಂಬ ತೋರಿಸುತ್ತೀರೆಂದು ನನಗೆ

ಅರ್ಥವಾಗುತ್ತಿಲ್ಲ. ಒಂದು ಕಡೆ ಹೈಕೋರ್ಟಿನಲ್ಲಿರತಕ್ಕ, ನ್ಯಾಯಾಲಯದಲ್ಲಿರತಕ್ಕ ಯಾವ ಒಂದು ವಿಚಾರಗಳು ಇವೆ, ಅವು ವಿಳಂಬವಾಗುತ್ತಿದೆ ಎನ್ನುವ ಮಾತನ್ನು ನಾವು ಹೇಳಿ, ಮತ್ತೊಂದು ಕಡೆ ಬಳಕೆದಾರರ ವೇದಿಕೆ ಸ್ಥಾಪನೆ ಮಾಡುವ ಅಧಿಕಾರವನ್ನು ನಿಮ್ಮಲ್ಲಿ ಇಟ್ಟುಕೊಂಡು ನೀವು ಏಕೆ ಪರಿಣಾಮಕಾರಿಯಾಗಿ ಪ್ರಯೋಗ ಮಾಡುವುದಕ್ಕೆ ಸಿದ್ಧರಿಲ್ಲ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಆದುದರಿಂದ ನಾನು ಗಂಭೀರವಾಗಿ ಹೇಳಬಯಸುವುದು ಇಷ್ಟೆ. ಕಳೆದ ಬಾರಿ ಹಿಂದಿನ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರಾದ ಶ್ರೀ ನಂಜಪ್ಪನವರು ಬಳಕೆದಾರರ ಹಿತರಕ್ಷಣೆಗೆ ಸರ್ಕಾರ ಬದ್ಧವಾಗಿದೆ ಎಂದು ಹೇಳಿಕೊಂಡಿದ್ದಾರೆ. ಆ ದಿಸೆಯಲ್ಲಿ ಸರಿಯಾದ ವ್ಯವಸ್ಥೆಯನ್ನು ರೂಪಿಸುವುದಕ್ಕೆ ಆಗಿಲ್ಲ. ಇದನ್ನು ಪರಿಣಾಮಕಾರಿಯಾಗಿ ಮಾಡಿದರೆ ಗ್ರಾಮಾಂತರ ಪ್ರದೇಶದ ಬಳಕೆದಾರನಿಗೆ ನ್ಯಾಯ ದೊರಕುವಲ್ಲಿ ವಿಶೇಷವಾಗಿ ಸರ್ಕಾರ ಕಾಳಜಿ ವಹಿಸಿಕೊಂಡಿದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

6.30 ಪಿ.ಎಂ.

ಇನ್ನು ನಾನು ವಿದ್ಯುತ್ ಯೋಜನೆ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಅಧ್ಯಕ್ಷರು:- ತಾವು ಒಂದು ಗಂಟೆ 20 ನಿಮಿಷ ಮಾತನಾಡಿದ್ದೀರಿ.

ಯು.ಆರ್.ಸಭಾಪತಿ:- ಸಾರ್, ಮಧ್ಯದಲ್ಲಿ ತುಂಬಾ ಡಿಸ್ಟರ್ಬೆನ್ಸ್ ಆಯಿತು. ಆದ್ದರಿಂದ ಸ್ವಲ್ಪ ಸಮಯ ಕೊಡಿ. ಬಹಳ ಪ್ರಾಮುಖ್ಯವಾದ ಪ್ರಶ್ನೆಗೆ ನಾನು ಬರುತ್ತೇನೆ.

ಅಧ್ಯಕ್ಷರು:- ಆಲ್‌ರೈಟ್.

ಯು.ಆರ್.ಸಭಾಪತಿ:- ಕೊನೆಯ ಬೇಡಿಕೆ ಮೇಲೆ ನಾನು ಮಾತನಾಡುತ್ತೇನೆ. ವಿದ್ಯುತ್ ಯೋಜನೆಗಳು.......

ಅಧ್ಯಕ್ಷರು:- ವಿದ್ಯುತ್ ಬಗ್ಗೆ ಮಾತನಾಡಿ ಆಫ್ ಮಾಡಿಬಿಡಿ.

ಶ್ರೀ ಯು.ಆರ್.ಸಭಾಪತಿ:- ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ದೇಶದಾದ್ಯಂತ ವಿದ್ಯುತ್ತಿನ ಬಗ್ಗೆ ಬಹಳಷ್ಟು ಮಹತ್ವ ಇದೆ. ವಿದ್ಯುತ್ ಸರಬರಾಜಿನಲ್ಲಿ ಆಗತಕ್ಕಂಥ ಅವ್ಯವಸ್ಥೆ ಏನಿದೆ ಅದನ್ನು ಹೋಗಲಾಡಿಸಬೇಕು ಎನ್ನುವಂಥ ಕಾಳಜಿ ಎಲ್ಲರಲ್ಲೂ ಇದೆ. ಇವತ್ತು ವಿದ್ಯುತ್ ಯೋಜನೆಗಳನ್ನು ತರಬೇಕು, ಹೊಸ ವಿದ್ಯುತ್ ಯೋಜನೆಗಳನ್ನು ತಂದು ಆ ಮೂಲಕ ವಿದ್ಯುತ್ತಿನ ಸರಬರಾಜಿನಲ್ಲಿ ಪರಿಣಾಮಕಾರಿಯಾದಂಥ ಬದಲಾವಣೆಯನ್ನು ತರಬೇಕೆಂಬ ಸರ್ಕಾರದ ಇಚ್ಛೆಗೆ ನಾನೂ ಒಬ್ಬ ಬೆಂಬಲಿಗನಾಗಿದ್ದೇನೆ. ಆದರೆ ಈ ವಿದ್ಯುತ್ ಯೋಜನೆಗಳನ್ನು ತರುವಾಗ ಅದನ್ನು ಎಲ್ಲಿ ಯಾವ ಪರಿಸರದಲ್ಲಿ ತರಬಹುದು, ಯಾವ ಪ್ರದೇಶದಲ್ಲಿ ತರಬಹುದು ಎನ್ನುವ ಹಿನ್ನೆಲೆಯನ್ನು ಕಂಡುಕೊಳ್ಳುವುದರಲ್ಲಿ ಕೂಡ ಸರ್ಕಾರ ಮುತುವರ್ಜಿ ವಹಿಸಬೇಕೆಂದು

ನಾನು ಬಹಳಷ್ಟು ಕಾಳಜಿಯಿಂದ ಸರ್ಕಾರವನ್ನು ವಿನಂತಿಸುತ್ತೇನೆ. ಇವತ್ತು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ವಿದ್ಯುತ್ ಯೋಜನೆಗಳನ್ನು ತರುವಂಥ ಇಚ್ಛೆಯನ್ನು ಸರ್ಕಾರ ವ್ಯಕ್ತಪಡಿಸಿದೆ. ನಮ್ಮಲ್ಲಿ ಕೊಜೆಂಟ್ರಿಕ್ಸ್ ಬರುತ್ತಿದೆ. ನಾಗಾರ್ಜುನಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ. ಇನ್ನು ಬಾರ್ಜ್ ಮೌಂಟೆಡ್ ಜನರೇಟರ್‌ಗಳನ್ನು ಅಳವಡಿಸುವಂಥ ಕಾರ್ಯಕ್ರಮಗಳನ್ನು ಮಂಗಳೂರು ಮತ್ತು ಉಡುಪಿಯಲ್ಲಿ ತರುವಂಥ ಯೋಜನೆಗಳನ್ನೆಲ್ಲಾ ತಂದು ಹಾಕಿದ್ದಾರೆ. ನಾನು ಇಷ್ಟೇ ಕೇಳುವುದು. ಈ ಯೋಜನೆಗಳನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನುಷ್ಠಾನಕ್ಕೆ ತರಲಿಕ್ಕೆ ಸಾಧ್ಯವೇ? ಇದರ ಬಗ್ಗೆ ಒಂದು ಚಿಂತನೆ ನಡೆಯಲೇಬೇಕಾಗಿದೆ. ಇವತ್ತು ಜಿಲ್ಲೆಯಾದ್ಯಂತ ಮಾತ್ರವಲ್ಲ. ರಾಜ್ಯದಾದ್ಯಂತ ಮಾತ್ರವಲ್ಲ. ರಾಷ್ಟ್ರದಾದ್ಯಂತ ಈ ಯೋಜನೆಗಳ ಅನುಷ್ಠಾನದ ಬಗ್ಗೆ ಚಿಂತನೆ ಕಾರ್ಯ ಪ್ರಾರಂಭವಾಗಿದೆ. ಪರಿಣಾಮಗಳೇನು ಎನ್ನುವ ಚಿಂತನೆ, ಜವಾಬ್ದಾರಿ ಕೂಡ ಸರ್ಕಾರಕ್ಕಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ 3000 ಮೆಗಾವ್ಯಾಟ್‌ಗಿಂತಲೂ ಮಿಕ್ಕಿ ವಿದ್ಯುತ್ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಂಥ ಕಾರ್ಯಕ್ರಮವನ್ನು ರೂಪಿಸಿದ್ದರೆ ಅದರಲ್ಲಿ ಅನೇಕ ತಪ್ಪು ನಡೆದಿದೆ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಸಾಮಾನ್ಯ ಜನರಿಗೆ ಇದರ ಮೇಲೆ ಆಗತಕ್ಕ ಪರಿಣಾಮ ಇವತ್ತು ದಕ್ಷಿಣ ಕನ್ನಡ ಜಿಲ್ಲೆ ಎನ್ನುವುದು ಇಡೀ ಜಗತ್ತಿನ 18 ಎಕಲಾಜಿಕಲೀ ಸೆನ್ಸಿಟೀವ್ ಏರಿಯಾ ಎಂದು ಡ್ಯಾನಿಡಾದವರು ಏನು ರೆಕಗ್ನೈಸ್ ಮಾಡಿದ್ದಾರೆ ಅದರಲ್ಲಿ ಒಂದು ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದನ್ನು ನಾನು ಹಿಂದಿನ ಅಧಿವೇಶನದಲ್ಲಿಯೂ ಸ್ಪಷ್ಟಪಡಿಸಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆ ಎನ್ನುವುದು ಒಂದು ಪರಿಸರ ಸೂಕ್ಷ್ಮಪ್ರದೇಶ. ಇಡೀ ಜಗತ್ತಿನಲ್ಲಿ ಇಂಥ 18 ಸ್ಥಾನಗಳನ್ನು ಮಾತ್ರ ಗುರುತಿಸಲಾಗಿದೆ. ಒಂದು ಕಡೆ ಸಮುದ್ರ, ಒಂದು ಕಡೆ 45ರಿಂದ 60 ಕಿಲೋಮೀಟರ್‌ಗಳಷ್ಟು ಬಯಲುಪ್ರದೇಶ, ಮತ್ತೊಂದು ಕಡೆಯಿಂದ ಅರ್ಧಚಂದ್ರಾಕೃತಿಯಲ್ಲಿರತಕ್ಕಂಥ ಪಶ್ಚಿಮಘಟ್ಟಗಳು, ಇದೊಂದು ಪ್ರಕೃತಿದತ್ತವಾದ ಕೊಡುಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿರುವಾಗ ಈ ಎಕಲಾಜಿಕಲಿ ಸೆನ್ಸಿಟೀವ್ ಏರಿಯಾ ಎಂದು ಜಾಗತಿಕವಾಗಿ ರೆಕಗ್ನೈಸ್ ಆದಂಥ ಒಂದು ಪ್ರದೇಶದಲ್ಲಿ ವಿದ್ಯುತ್ ಯೋಜನೆಗಳನ್ನು ರೂಪಿಸಲಿಕ್ಕೆ ಸಾಧ್ಯವಿದೆಯೆ? ಇದರ ಪರಿಣಾಮಗಳೇನು? ಇದರ ಬಗ್ಗೆ ಮಾತನಾಡಿದರೆ ಎಲ್ಲರೂ ಕೇಳುತ್ತಾರೆ ನಿಮಗೆ ವಿದ್ಯುತ್ ಬೇಡವೇ ಎಂದು. ಅಭಿವೃದ್ಧಿ ಬೇಡವೇ ಎಂದು ಹೇಳುತ್ತಾರೆ. ಇವತ್ತು ಅಭಿವೃದ್ಧಿ ಆಗಬೇಕೆನ್ನುವ ಹಂಬಲದಲ್ಲಿ, ಅಭಿವೃದ್ಧಿ ಆಗಬೇಕು ಎನ್ನುವ ದೃಷ್ಟಿಯಿಂದ ಫಲವತ್ತಾದ ಕೃಷಿಭೂಮಿಗಳು, ಫಲವತ್ತಾದ ಪ್ರದೇಶಗಳು, ಫಲವತ್ತಾಗಿ ಬೆಳೆದಿರತಕ್ಕ ಪಶ್ಚಿಮಘಟ್ಟಗಳನ್ನೆಲ್ಲಾ ಸರ್ವನಾಶ ಮಾಡಿಕೊಂಡು ಇಂಥ ಯೋಜನೆಗಳಿಗೆ ಅವಕಾಶ ಮಾಡಿ ಇವತ್ತು ಎಂಥ ಅನಾಹುತ ಆಗಿದೆ ಎನ್ನುವುದು ಮೊನ್ನೆ ತಾನೇ ನಡೆದ ಎಂ.ಆರ್.ಪಿ.ಎಲ್.ನಲ್ಲಿ ತ್ಯಾಜ್ಯ ವಸ್ತುಗಳನ್ನು ಬಿಟ್ಟು ಆದಂಥ ಹಗರಣದ ಬಗ್ಗೆ ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಈಗಾಗಲೇ ರಿಫೈನರಿ ಅಲ್ಲಿ ಬಂದು ಆಗಿರತಕ್ಕಂಥ ಅವ್ಯಾಹತವಾದಂಥ ವ್ಯವಸ್ಥಿತವಾದಂಥ ಗಲಾಟೆ ಏನು ನಡೆಯುತ್ತಿದೆ ಅದರ ಜೊತೆಗೆ ಈ

ವಿದ್ಯುತ್ ಯೋಜನೆಗಳನ್ನು ರೂಪಿಸುವ ಬಗ್ಗೆಯೂ ಹಂತಹಂತವಾಗಿ ಕಳೆದ ಒಂದು ವರ್ಷದಿಂದ ನಾವು ಪ್ರತಿಭಟನೆ ಮಾಡಿಕೊಂಡು ಬಂದಿದ್ದರೂ ಕೂಡ ಕರ್ನಾಟಕ ಸರ್ಕಾರವಾಗಲೀ ಕೇಂದ್ರ ಸರ್ಕಾರವಾಗಲೀ ಇದರ ಬಗ್ಗೆ ಗಮನ ಹರಿಸದೆ ಏಕಾಏಕಿಯಾಗಿ ಅವರದೇ ಆದ ಒಂದು ತತ್ವ ಧೋರಣೆಗಳ ಮೂಲಕ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಿಕ್ಕೆ ಹೊರಟಿದ್ದಾರೆ. ಇವತ್ತು ಕೋಸ್ಟಲ್ ಜೋನ್ ಮ್ಯಾನೇಜ್‌ಮೆಂಟ್ ಪ್ಲಾನ್ ಅಂತ ಹೇಳಿಕೊಂಡು ಡಿಪಾರ್ಟ್‌ಮೆಂಟ್ ಆಫ್ ಫಾರೆಸ್ಟ್ರಿ, ಎಕಾಲಜಿ ಅಂಡ್ ಎನ್‌ವೈರ್ನಮೆಂಟ್, ಗೌರ್ನಮೆಂಟ್ ಆಫ್ ಕರ್ನಾಟಕದವರು ಒಂದು ಪುಸ್ತಕ ಮಾಡಿದ್ದಾರೆ. ಸನ್ಮಾನ್ಯ ಸಭಾಧ್ಯಕ್ಷರೆ, ಈ ಪುಸ್ತಕದಲ್ಲಿ ನಮ್ಮ ಉಡುಪಿಯಲ್ಲಿ ಇರತಕ್ಕ ಸಣ್ಣಪುಟ್ಟ ಬಿತ್ರೋಡಿ, ಕುತ್ಪಾಡಿ, ತಡೆಕಾಡು, ಮೂಡಬೆಟ್ಟು ಎನ್ನತಕ್ಕ ಸಣ್ಣಪುಟ್ಟ ಗ್ರಾಮೀಣ ಪ್ರದೇಶದ ಹಳ್ಳಿಯ ಬಗ್ಗೆ ಎಕಲಾಜಿಕಲ್ ಸರ್ವೆ ಮಾಡಿಕೊಟ್ಟಿದ್ದಾರೆ. ಸರ್ವೆ ಮಾಡಿದವರು ಯಾರು ಸ್ವಾಮಿ? ಆಮೇಲೆ ಇದನ್ನು ರೂಪಿಸಿದವರು ಯಾರು? ಎಲ್ಲಾ ಐ.ಎ.ಎಸ್. ಅಧಿಕಾರಿಗಳು. ಯಾರವರು? ರವೀಂದ್ರ ಅವರು, ಥಾವ್‌ಸೆನ್ ಅವರು, ಲಕ್ಷ್ಮಣ ಅವರು, ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಯಾವ ವ್ಯಕ್ತಿಗಳೂ, ಅಲ್ಲಿಯ ಪರಿಸರದ ಮೇಲೆ ಆಗತಕ್ಕಂಥ ಪರಿಣಾಮವನ್ನು ವಿವರಿಸುವಂಥ ಯಾವ ವ್ಯಕ್ತಿಗಳೂ ಈ ಕಮಿಟಿಯಲ್ಲಿಲ್ಲ. ಅಷ್ಟೇ ಅಲ್ಲ. ಅಲ್ಲಿ ಈಗಾಗಲೇ ಮೂರು ಲಕ್ಷ ಮೀನುಗಾರರ ಜನಾಂಗ ಬಹಳ ಭೀತಿಯಲ್ಲಿ ಜೀವನ ಮಾಡುವಂಥ ಪರಿಸ್ಥಿತಿಯಾಗಿದೆ. 3 ಲಕ್ಷ ಮೀನುಗಾರರ ಜನಾಂಗಕ್ಕೆ 162 ಕೋಟಿ ರೂಪಾಯಿ ಮೀನುಗಾರಿಕಾ ಫಾರಿನ್ ಎಕ್ಸ್‌ಛೇಂಜನ್ನು ತರುವಂಥ ಒಂದು ದೊಡ್ಡ ಉದ್ದಿಮೆ ಇರುವಾಗ ಇವತ್ತು ಈ ಯಾವುದೋ ವಿದ್ಯುತ್ ಯೋಜನೆಗಳನ್ನು ಅಲ್ಲಿ ಜಾರಿಗೆ ತರುವಾಗ ಮುಖ್ಯವಾಗಿ ಅದರಲ್ಲಿ ಪರಿಣಾಮ ಬೀರುವುದು ಈ ಮೂರು ಲಕ್ಷ ಮೀನುಗಾರರಿಗೆ ಎಂದು ಸ್ಪಷ್ಟವಾಗಿ ನಾನು ಹೇಳಬಯಸುತ್ತೇನೆ. ಇವತ್ತು ಕೊಜೆಂಟ್ರಿಕ್ಸ್ ಯೋಜನೆ ಬೃಹತ್ ವಿದ್ಯುತ್ ಯೋಜನೆ ಅದು. ಒಂದು ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವಂಥದ್ದು. ಇನ್ನೊಂದು ನಾಗಾರ್ಜುನ ವಿದ್ಯುತ್ ಸ್ಥಾವರ. ಇದು ಒಂದು ಸಾವಿರ ಮೆಗಾವ್ಯಾಟ್. ಅದಲ್ಲದೆ 22 ಮೇಜರ್ ಇಂಡಸ್ಟ್ರೀಸ್‌ಗೆ ಇವರು ಅನುಮತಿಯನ್ನು ಕೊಟ್ಟಿದ್ದಾರೆ. ಪ್ರತಿಯೊಂದು ಮೇಜರ್ ಇಂಡಸ್ಟ್ರಿಗಳಿಗೂ ಕೂಡ 25 ಮೆಗಾವ್ಯಾಟ್ಸ್, 50, 75, 100 ಮೆಗಾವ್ಯಾಟ್ಸ್‌ನ ಅವರದೇ ಆದ ಸ್ವಂತ ವಿದ್ಯುತ್ ಯೋಜನೆಯನ್ನು ಸ್ಥಾಪನೆ ಮಾಡಲಿಕ್ಕೂ ಕೂಡ ನೀವು ಅನುಮತಿಯನ್ನು ಕೊಟ್ಟಿದ್ದೀರಿ. ಹಾಗಾದರೆ 3 ಸಾವಿರದಿಂದ 4 ಸಾವಿರ ಮೆಗಾವ್ಯಾಟ್ ವಿದ್ಯುತ್ ಯೋಜನೆ ಅಲ್ಲಿ ತರಬೇಕಾದರೆ ಅಲ್ಲಿಗೆ ಬರತಕ್ಕಂಥ ಸರಬರಾಜಾಗತಕ್ಕಂಥ ಕಲ್ಲಿದ್ದಿಲಿನ ಅಂಶ ಏನು? ಒಂದು ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಬೇಕಾದರೆ ಕನಿಷ್ಟ ಒಂದು ದಿನಕ್ಕೆ 3 ಸಾವಿರದಿಂದ 4 ಸಾವಿರ ಟನ್ ಕಲ್ಲಿದ್ದಲು ಉರಿಸಬೇಕು. ಒಂದು ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ 3 ಸಾವಿರದಿಂದ 4 ಸಾವಿರ ಟನ್ ಕಲ್ಲಿದ್ದಲನ್ನು ಉರಿಸುವುದಾದರೆ ಆ ಕಲ್ಲಿದ್ದಿಲಿನಿಂದ ಹುಟ್ಟತಕ್ಕಂಥ ಸುಮಾರು 4 ಸಾವಿರದಿಂದ 5 ಸಾವಿರ ಟನ್ ಹಾರುವ ಬೂದಿ

ಸೃಷ್ಟಿಯಾಗುತ್ತದೆ ಸ್ವಾಮಿ. ಈ ಬೂದಿಯನ್ನು ಇವರು ಎಲ್ಲಿ ಶೇಖರಣೆ ಮಾಡುತ್ತಾರೆ? ಇದಕ್ಕೆ ಯಾವ ರೀತಿಯ ಒಂದು ಚೌಕಟ್ಟನ್ನು ಹಾಕಿದ್ದಾರೆ ಎನ್ನುವುದು ಅರ್ಥವಾಗುತ್ತಿಲ್ಲ ನನಗೆ. ಸ್ಪಷ್ಟವಾಗಿ ನಾನು ಹೇಳಿದ್ದೇನೆ, ಈ ಯೋಜನೆಯನ್ನು ತರುವುದಕ್ಕೆ ಅಲ್ಲಿಯ ಜನ ಸಿದ್ಧರಿಲ್ಲ. ಜನ ಆಂದೋಳನ ಮಾಡಿಕೊಂಡು ಪ್ರತಿಭಟನೆ ಮಾಡುತ್ತಿದ್ದಾರೆ. ಅದನ್ನು ಲೆಕ್ಕಿಸದೆ ಇವತ್ತು ರಾನ್ ಥಾಮಸ್ ಯಾರಿದ್ದಾರೆ ಇವರನ್ನು ಇವತ್ತು ನಂದಿಕೂರಿನಲ್ಲಿ ಆಗತಕ್ಕ ಅವರ ಯೋಜನೆಯ ಪ್ರದೇಶದ ಒಳಗೆ ಹೋಗಲಿಕ್ಕೆ ಜನ ಬಿಡುತ್ತಿಲ್ಲ. ಅವರಿಗೆ ಒಂದು ಕಛೇರಿಯನ್ನು ಅಲ್ಲಿ ಓಪನ್ ಮಾಡಲಿಕ್ಕೆ ಜನ ಬಿಡಲಿಲ್ಲ. ಆದರೂ ಕೂಡ ಇವತ್ತು ಕೊಜೆಂಟ್ರಿಕ್ಸ್‌ಗೆ ನಾವು ಅನುಮತಿ ಕೊಟ್ಟಿದ್ದೇವೆ, ನಾವು ಮಾಡಿಯೇ ಸಿದ್ಧ ಎನ್ನುವಂಥ ಮಾತನ್ನು ನಾವು ಹೇಳುತ್ತಾ ಇದ್ದೇವೆ. ಅದರ ಹತ್ತಿರವೇ ಒಂದು ತಾಲ್ಲೂಕಿದೆ. ಅದರ ಪಕ್ಕದಲ್ಲೇ ಇನ್ನೊಂದು ಗ್ರಾಮದಲ್ಲಿ ಇನ್ನೊಂದು ಸಾವಿರ ಮೆಗಾವ್ಯಾಟ್ಸ್‌ಗೆ ನಾಗಾರ್ಜುನದವರಿಗೆ ಕೊಟ್ಟಿದ್ದಾರೆ. ಇವತ್ತು ಎರಡು ಸಾವಿರ ಮೆಗಾವ್ಯಾಟ್, ಒಂದು ನಮ್ಮ ಉಡುಪಿ ತಾಲ್ಲೂಕಿನೊಳಗೆ ಎರಡು ಸಾವಿರ ಮೆಗಾವ್ಯಾಟ್‌ನ ಒಂದು ವಿದ್ಯುತ್ ಯೋಜನೆಯನ್ನು ಇವರು ರೂಪಿಸುತ್ತಾರೆ ಎಂದು ಆದರೆ ಅದರೊಟ್ಟಿಗೆ ಸೈಮಲ್ಟೇನಿಯಸ್ಸಾಗಿ ಮಂಗಳೂರು ನನ್ನ ಉಡುಪಿಯ ತಡಕಾರು ಪಡುಕೆರೆ ಎನ್ನುವಲ್ಲಿ ಬಾರ್ಜ್‌ಮೌಂಟೆಡ್ ಜನರೇಟರ್‌ಗಳನ್ನು ಅಳವಡಿಸುವಂಥ 300 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡತಕ್ಕಂಥ ಬಾರ್ಜ್‌ಮೌಂಟೆಡ್ ಜನರೇಟರುಗಳನ್ನು ತರುವಂಥ ಯೋಜನೆಯನ್ನು ಇವರು ಹಾಕುತ್ತಾ ಇದ್ದಾರೆ. ಬಾರ್ಜ್ ಮೌಂಟೆಡ್ ಜನರೇಟರನ್ನು ನೀವು ಹಾಕುವ ಪ್ರದೇಶ ಯಾವುದು ಎನ್ನುವುದನ್ನು ತಾವು ದಯವಿಟ್ಟು ತಿಳಿದುಕೊಳ್ಳಿ. ಇವತ್ತು ಕೋಸ್ಟಲ್ ಬೆಲ್ಟ್‌ನಲ್ಲಿ ತಡಕಾರು, ಪಡುಕೆರೆ, ಮಲ್ಪೆ ಏನು ಪ್ರದೇಶ ಇದೆ ಅಲ್ಲಿ 3ರಿಂದ 5 ಸಾವಿರ ಬೆಸ್ತ ಕುಟುಂಬಗಳು ಮೀನು ಹಿಡಿದುಕೊಂಡು ಜೀವನ ಮಾಡುವಂಥ ಒಂದು ಪ್ರದೇಶ. ಇಲ್ಲಿ ಒಂದು ಕಡೆಯಿಂದ ಹೊಳೆಯಲ್ಲಿ ಮೀನುಗಾರಿಕೆ ಮಾಡುತ್ತಾರೆ. ಒಂದು ಕಡೆಯಿಂದ ಸಮುದ್ರದಲ್ಲಿ ಮೀನುಗಾರಿಕೆ ಮಾಡುತ್ತಾರೆ. ಈ ಎರಡೂ ಕಡೆಗಳಲ್ಲಿ ಮೀನುಗಾರಿಕೆ ಮಾಡುವಂಥ ಪ್ರದೇಶದಲ್ಲಿ ಇವರು ಬಾರ್ಜ್ ಮೌಂಟೆಡ್ ಜನರೇಟರುಗಳನ್ನು ತಂದು ಹಾಕಿದರೆ ಅದರ ವೈಬ್ರೇಷನ್ ಏನಿದೆ, ಅದರ ಕಂಪನ ಶಕ್ತಿ ಏನಿದೆ ಆ ಕಂಪನಶಕ್ತಿಗೆ 25 ಕಿಲೋಮೀಟರ್ ಆವರಣದಲ್ಲಿ ಸಮುದ್ರದಲ್ಲಾಗಲೀ ಹೊಳೆಯಲ್ಲಾಗಲೀ ಮೀನುಗಳು ಅಲ್ಲಿ ನಿಲ್ಲುವ ಪ್ರಶ್ನೆಯೇ ಇಲ್ಲ. ಆ ಕಂಪನದಿಂದ ಮೀನುಗಳು ಸರ್ವನಾಶವಾಗಿ ಹೋಗುವಂಥ ಸಂದರ್ಭವನ್ನು ಮೀನುಗಾರಿಕಾ ಇಲಾಖಾ ಕಾಲೇಜಿನಲ್ಲಿ ಸಹ ಇದರ ಬಗ್ಗೆ ಮಾಹತಿಯನ್ನು ಒದಗಿಸಿದ್ದಾರೆ. ಇದಷ್ಟೇ ಅಲ್ಲ 3 ಸಾವಿರ ಜನ ಕುಟುಂಬಗಳು ಅಲ್ಲಿರತಕ್ಕ ಸಂದರ್ಭದಲ್ಲಿ ಬಾರ್ಜ್‌ಮೌಂಟೆಡ್ ಜನರೇಟರುಗಳನ್ನು ನೀವು ತಂದು ಹಾಕಿದರೆ ಅದರ ಕಂಪನದ ಶಬ್ಧ, ಆ ಶಬ್ದವನ್ನು 3 ಸಾವಿರ ಕುಟುಂಬಗಳು ದಿನವಹಿ ಕೇಳುತ್ತಾ ಕುಳಿತುಕೊಳ್ಳುವುದಾದರೂ ಹೇಗೆ? ಇದರ ಬಗ್ಗೆ ಸ್ಪಷ್ಟವಾಗಿ ನೀವು ಒಂದು ಸರ್ವೆ ಮಾಡಬೇಕು. ಈ ವಿದ್ಯುತ್ ಯೋಜನೆಯನ್ನು ನಮ್ಮ ಜಿಲ್ಲೆಗೆ ತಂದು

ಹಾಕುವುದರಿಂದ ಆಗತಕ್ಕಂಥ ಒಂದು ಅನಾಹುತದ ಬಗ್ಗೆ.

ಶ್ರೀ ಸಿ.ಬೈರೇಗೌಡ:- ಈ ವಿಚಾರದಲ್ಲಿ ಸಾಕಷ್ಟು ವಿಚಾರ ವಿನಿಮಯವಾಗಿದೆ. ಪ್ರಪಂಚದಲ್ಲಿರತಕ್ಕ ಕೆಲವು ತಜ್ಞರ ಅಭಿಪ್ರಾಯ ಕೂಡ ಇದರಲ್ಲಿ ತೆಗೆದುಕೊಳ್ಳತಕ್ಕ ಪ್ರಯತ್ನ ನಡೆಸಿದ್ದೇವೆ. ನೀವು ಕಂಪನದಿಂದ ಮೀನುಗಳು ಅಲ್ಲಿರುವುದಿಲ್ಲವೆಂದು ತಾವು ಹೇಳುತ್ತಿದ್ದೀರಿ. ಇದು ಯಾವ ತಂತ್ರಜ್ಞರ ಅಥವಾ ಯಾವ ಇಂಜಿನಿಯರ್ ಈ ರೀತಿ ಹೇಳಿದ್ದಾರೆ ನೀವು ಹೇಳುತ್ತಿರುವುದಕ್ಕೆ ವೈಜ್ಞಾನಿಕವಾದಂತಹ ಅಥವಾ ತಾಂತ್ರಿಕವಾದಂತಹ ಆಧಾರವಿದ್ದರೆ ದಯವಿಟ್ಟು ತಿಳಿಸಿ.

ಯು.ಆರ್.ಸಭಾಪತಿ:- ನಾನೂ ಒಬ್ಬ ಮೀನುಗಾರ ಕುಟುಂಬದ ಬೆಸ್ತನಾಗಿ ಹೇಳುವುದಾದರೆ, ಈ ಮುನ್ನೂರು ಮೆಗಾವಾಟ್ ವಿದ್ಯುತ್ ತಯಾರಿಸುವ, ಮಾನ್ಯ ಬೈರೇಗೌಡರೆ ನಾನು ಹೇಳುವುದರ ಕಡೆಗೆ ಗಮನಹರಿಸಿ, ನಾನು ಹೇಳುತ್ತಿದ್ದರೆ ತಾವು ನಗೆಯಾಡುತ್ತಾ ಕುಳಿತುಕೊಂಡರೆ ಹೇಗೆ? ನಾನು ಹೇಳುತ್ತಿದ್ದೇನೆ ನೀವು ನಗೆಯಾಡುತ್ತಿದ್ದೀರಿ, ಕಿವಿಯಲ್ಲಿ ಕೇಳುತ್ತೀರಿ ಆದರೆ ಆ ಕಡೆ ತಿರುಗಿ ನಗೆಯಾಡುತ್ತಿದ್ದೀರಿ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಯಾವಾಗಲೂ ಸೀರಿಯಸ್ಸಾಗಿ ಇರುವುದಕ್ಕೆ ಆಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಸಭಾಪತಿಯವರು ಮಾತನಾಡುವಾಗ ಯಾರೂ ಎತ್ತಕಡೆ ತಿರುಗಿಯೂ ನೋಡಬಾರದು. ಇದು ಬಹಳ ಕಷ್ಟ. ಇವರು ಮಾನ್ಯ ಸಭಾಪತಿಯವರು ಮಾತನಾಡುತ್ತಾರೆಂದರೆ, ತಾವು ಅಧ್ಯಕ್ಷರು ಸಾರ್, ನಿಮ್ಮ ಮುಖ ನಾವು ನೋಡಬೇಕು. ಇವರು ಸಭಾಪತಿಯವರಾಗಿ ನಮ್ಮ ಹಣೆಯಬರಹ ಇವರು ಆ ಸದನದಲ್ಲಿರಬೇಕಾಗಿತ್ತು. ಇಲ್ಲಿ ಬಂದು ನಿಂತುಕೊಂಡು ಸಭಾಪತಿಯವರಾಗಿ ನಿಂತುಕೊಂಡು ನೀವು ಎಲ್ಲರೂ ನನ್ನನ್ನೆ ನೋಡಿ ಅಂದರೆ ನಾವು ಎಲ್ಲಿ ನೋಡೋಣ? ಯಾರೂ ಯಾರ ಕಡೆನೂ ತಿರುಗಿ ನೋಡಬಾರದು ನಗಬಾರದು ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ?

ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೆ, ನಾನು ನಿಮ್ಮ ಬಗ್ಗೆ ಹೇಳುತ್ತಿಲ್ಲ. ಈ ಪ್ರಶ್ನೆ ಕೇಳಿದವರು ಮಾನ್ಯ ಸಚಿವರು. ನಾನು ಉತ್ತರ ಹೇಳುವಾಗ ಅವರು ನಿಮ್ಮನ್ನು ನೋಡಿಕೊಂಡು ನಗೆಯಾಡುತ್ತಿದ್ದಾರೆ. ನಾನು ಏನು ಹೇಳಲಿ? ನಾನು ಯಾರಿಗೆ ಉತ್ತರ ಹೇಳಲಿ? ಪ್ರಶ್ನೆ ಕೇಳಿದವರಿಗೆ ನಾನು ಉತ್ತರ ಕೊಡಬೇಕಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಬೈರೇಗೌಡರು ನನ್ನನ್ನು ನೋಡಲೇ ಇಲ್ಲ. ನನ್ನ ಹಿಂದೆ ಇನ್ನು ಮೂರ್ನಾಲ್ಕು ಜನ ಇದ್ದಾರೆ.

ಯು.ಆರ್.ಸಭಾಪತಿ:- ಇರಬಹುದು, ಮಾನ್ಯ ಶಿವರಾಮೇಗೌಡರ ನೋಡಿರಬಹುದು. ಇವತ್ತು ನಮ್ಮ ಕೋಸ್ಟಲ್‌ಬೆಲ್ಟ್ ಏನಿದೆ ಪರಿಸರದಲ್ಲಿ ಸಮುದ್ರದಲ್ಲಿ

ಮೀನುಗಾರಿಕೆಯನ್ನು ಏನು ನಡೆಸುತ್ತಿದ್ದಾರೆ ಬೆಸ್ತರು ಅವರು ಕೇಂದ್ರಸರ್ಕಾರದ ವಿದೇಶ ಮೀನುಗಾರಿಕಾ ನೀತಿಯಿಂದ ಒಂದು ಕಡೆಯಿಂದ ತತ್ತರಿಸಿ ಹೋಗಿದ್ದಾರೆ. ಹೊರಗೆ ಹೋದರೆ ಅಲ್ಲಿ ಮೀನು ಸಿಗುತ್ತಿಲ್ಲ. ಅವರು ಏನು ಮಾಡಬೇಕು, ಈ ಕೋಸ್ಟಲ್ ಬೆಲ್ಟ್‌ನಲ್ಲಿ ಹೊಳೆಗಳಲ್ಲಿರತಕ್ಕ ಮೀನು ಸಮುದ್ರದ ಪಕ್ಕದಲ್ಲಿರತಕ್ಕ ಮೀನನ್ನು ನಂಬಿಕೊಂಡು ಈಗ ಬದುಕಬೇಕಾಗಿದೆ. ಇವತ್ತು ಮಂಗಳೂರಿನಲ್ಲಿ ಮೇಜರ್ ಇಂಡಸ್ಟ್ರೀಸ್‌ಗಳು ಕುದುರೆಮುಖ, ಎಂಸಿಎಫ್, ಅನೇಕ ಇಂಡಸ್ಟ್ರೀಸ್‌ಗಳು ಬಂದು ಅವು ಬಿಡತಕ್ಕ ತ್ಯಾಜ್ಯವಸ್ತುಗಳಿಂದ ಮೀನಿನ ಆದಾಯ ಕಡಿಮೆಯಾಗುತ್ತಾ ಬರುತ್ತಿದೆ. ಮೀನಿನ ಸಂಖ್ಯೆ ಕಡಿಮೆಯಾಗುತ್ತಾ ಬರುತ್ತಿದೆ. 300 ಮೆಗಾವಾಟ್ಸ್‌ನ ಜನರೇಟರ್ ವೈಬ್ರೇಷನ್ ಆಗುವಾಗ ಆ ಶಬ್ಧ ಮಾಲಿನ್ಯ ಏನಿದೆ, ಆ ಶಬ್ಧಕ್ಕೆ ಇವತ್ತು ಮೀನುಗಳು ನಿಲ್ಲುವಂತಹ ಪರಿಸ್ಥಿತಿ ಇಲ್ಲ. ಇದು ನೀವು ಯಾವ ತಾಂತ್ರಿಕ ತಜ್ಞರನ್ನು ಬೇಕಾದರೆ ಕರೆದುಕೊಂಡು ಬನ್ನಿ ನಾವು ಅಲ್ಲಿ ಸೆಮಿನಾರ್ ಮಾಡುವ ನಿಮ್ಮ ಅಗ್ರಿಕಲ್ಚರಲ್ ಕಾಲೇಜು ಇದೆ, ಅಲ್ಲಿ ಫಿಶರೀಸ್ ಕಾಲೇಜು ಇದೆ, ಅಲ್ಲಿ ಕುಳಿತುಕೊಂಡು ನಾವು ಬೇಕಾದರೆ ಚರ್ಚೆ ಮಾಡೋಣ. ಮುಕ್ತ ಚರ್ಚೆಯಾಗಲಿ, ಎಲ್ಲಿಯೊ ಯಾವ ಸೈಂಟಿಸ್ಟ್ ಯಾರೋ ಹೇಳಿದ್ದಾರೆ ಅಲ್ಲಿ ಹೇಳಿದ್ದಾರೆ ಇಲ್ಲಿ ಹೇಳಿದ್ದಾರೆಂದು ನಾನು ಹೇಳುವುದಿಲ್ಲ. ಅದಕ್ಕಿಂತಲೂ ಮುಖ್ಯವಾಗಿ ಹೇಳುತ್ತೇನೆ.

ಶ್ರೀ ಸಿ.ಬೈರೇಗೌಡ:- ಮಾನ್ಯ ಸದಸ್ಯರು ನಾನು ಹೇಳುವುದನ್ನು ದಯವಿಟ್ಟು ಕೇಳಿ. ಇದು ಪ್ರಪಂಚದ ನಾನಾ ಭಾಗಗಳಲ್ಲಿ ಬಳಕೆಯಾಗಿದೆ.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿ):- ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾಪತಿಯವರು ಬಾರ್ಜ್ ಮೌಂಟೆಡ್ ಜನರೇಟಿಂಗ್ ಸ್ಟೇಷನ್ ಎಲ್ಲಿದೆ ಎಂದು ನೋಡಿದ್ದಾರೋ ಎಲ್ಲಿಯಾದರೂ ನೋಡಿದ್ದರೆ ಹೇಳಿ?

ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೆ, ಬಾರ್ಜ್ ಮೌಂಟೆಡ್ ಜನರೇಟರ್ಸ್‌ನ್ನು ನಾನು ನೋಡದಿದ್ದರೂ ಕೂಡ, ಅದರಲ್ಲಿ ಏನು ಅನಾಹುತಗಳಿವೆ, ಅದರ ಪರಿಣಾಮಗಳೇನು ಎನ್ನುವುದರ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ನಾನು ಹೇಳಿದ್ದೇನೆ. ಇರಲಿ, ತಂತ್ರಜ್ಞಾನ ನನಗೆ ಇಲ್ಲವೆಂದು ಹೇಳುತ್ತೀರಿ. ನಾನು ಹೇಳುತ್ತಿರುವ ರೀತಿಯ ಸಂಶಯ ನಮ್ಮ ಜನರಿಗೆ ಕಾಡುತ್ತಿದೆ. ಇವತ್ತು ನಮ್ಮ ಸಮುದ್ರದ ಬದಿಯಲ್ಲಿ ಸಮುದ್ರ ತಡೆಗೋಡೆಯನ್ನು ನೀವು ಹಾಕಲಿಕ್ಕೆ ಆಗಲಿಲ್ಲ. ಅದರ ಬದಲಿಗೆ ನಾವು ಮ್ಯಾಂಗ್ರೊ ಗಿಡಗಳನ್ನು ನೆಟ್ಟಿದ್ದೇವೆ. ಈ ಮ್ಯಾಂಗ್ರೊ ಗಿಡಗಳನ್ನು ಏಕೆ ನೆಟ್ಟಿದ್ದೇವೆಂದರೆ ಸಮುದ್ರ ಕೊರೆತ ನಿಲ್ಲಲಿಯೆಂದು ಹೇಳಿ. ಈ ಮ್ಯಾಂಗ್ರೋ ಗಿಡಗಳು ಏನು ಬೆಳಿದಿವೆ ಅದರಲ್ಲಿ ಮೀನುಗಳು ಬಂದು ಮೊಟ್ಟೆಗಳನ್ನು ಇಡುತ್ತವೆ.

ಅಧ್ಯಕ್ಷರು:- ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಾದ ಬೈರೇಗೌಡರು ನಿಮಗೆ ಕೇಳಿದ್ದುದು ಕಂಪನದಿಂದ ಮೀನುಗಳು ಸತ್ತುಹೋಗುತ್ತವೆ ಎನ್ನತಕ್ಕ ಮಾತನ್ನು ಹೇಳಿದಿರಲ್ಲ, ಇದು ಯಾವ ವೈಜ್ಞಾನಿಕ ಆಧಾರದ ಮೇಲೆ ಹೇಳಿದಿರಿ, ಯಾವ ತಂತ್ರಜ್ಞ

ಪರಿಣಿತರು ಕೊಟ್ಟಿರತಕ್ಕ ವರದಿಯ ಆಧಾರದ ಮೇಲೆ ಹೇಳಿದಿರಿ ಎಂದು ಕೇಳಿದರು. ನಾವು ಪುಕಾರುಗಳ ಮೇಲೆ ಮಾತನಾಡುವುದಕ್ಕೆ ಆಗುವುದಿಲ್ಲ. ಮಾತನಾಡಬೇಕಾದರೆ ಒಂದು ಆಧಾರವಿರಬೇಕಲ್ಲ. ಅದಕ್ಕೆ, ಕೆಲವರು ಚೆರ್ನೋಬಿಲ್‌ದು ಕೋಟ್ ಮಾಡುತ್ತಾರೆ. ಹಾಗೆ ಎಲ್ಲಿಯಾದರೂ ಈ ತರಹದ ಇಂತಹ ಪ್ರದೇಶದಲ್ಲಿ ಇಂತಹ ಜಾಗದಲ್ಲಿ ಈ ಪ್ರಾಜೆಕ್ಟ್ ಮಾಡಿದಾಗ ಹೀಗಾಗಿತ್ತು ಎಂದು ಹೇಳಿ ಇದ್ದು, ಆ ವರದಿ ಇದ್ದರೆ ಅದನ್ನು ಆಧಾರವಾಗಿಟ್ಟುಕೊಂಡು ಇದನ್ನು ಮಾಡಬೇಡಿಯೆಂದು ಹೇಳಬಹುದು ನಾವು. ನಮ್ಮ ಜನರಿಗೆ ಸಂಶಯ ಬಂದಿದೆ ಅಂದರೆ ಹೇಗೆ?

ಯು.ಆರ್.ಸಭಾಪತಿ:- ಮಂಗಳೂರಿನ ಮೀನುಗಾರಿಕಾ ಕಾಲೇಜನ......

ಅಧ್ಯಕ್ಷರು:- ನೋಡೋಣ ಮಾನ್ಯ ಜಯರಾಮಶೆಟ್ಟಿಯವರು ನಿಮ್ಮ ನೆರವಿಗೆ ಬರುತ್ತಿದ್ದಾರೆ ಮತ್ತೆ ಎಲ್ಲಿಯಾದರೂ ಕೇಸ್ ಹಾಕಿಯಾರು? ಅಲ್ಲ ನೀವು ನೆರವಿಗೆ ಹೋಗಿ, ಅವರು ನಿಮ್ಮ ನೆರವಿಗೆ ಬಂದು ಮತ್ತೆ ಕೇಸು ಬಿದ್ದಾತು ಅಂದೆ. (ನಗು)

ಶ್ರೀ ಐ.ಎಂ.ಜಯರಾಮಶೆಟ್ಟಿ:- ಮಾನ್ಯ ಅಧ್ಯಕ್ಷರೆ, ಮೊನ್ನೆ ಮೊನ್ನೆ ನಮ್ಮ ಕುಂದಾಪುರ ತಾಲ್ಲೂಕಿನ ಕೋಟೇಶ್ವರದಲ್ಲಿ ಒಂದು ಡೈನಮೆಂಟ್ ಹಾಕಿದ್ದರಿಂದ ಹೆಚ್ಚು ಕಮ್ಮಿ ಸಾವಿರಾರು ಮೀನು ಸತ್ತುಹೋಗಿವೆ. ಇದು ನಾವು ಕಣ್ಣಾರೆ ನೋಡಿದಂತಹ ದೃಶ್ಯ. ಒಂದು ಡೈನಮೆಂಟಿನಲ್ಲಿ ಅಷ್ಟು ಮೀನು ಸತ್ತುಹೋಗಬೇಕಾದರೆ, ಇನ್ನು ವೈಬ್ರೇಷನ್ ಮೀನಿನ ಮೇಲೆ ಬೀರಿದರೆ ಆದ ಪರಿಣಾಮ ಏನಾಗಬಹುದು? ನಾನು ಟೆಕ್ನಿಕಲ್ ಆಗಿ ಮಾತನಾಡುವಂತಹ ಶಕ್ತಿಯಿಲ್ಲ ಇದರ ಬಗ್ಗೆ ತಾವು ಫಿಶರೀಸ್ ಡಿಪಾರ್ಟ್‌ಮೆಂಟ್‌ನವರ ಹತ್ತಿರ ವಿಚಾರಿಸಬಹುದು.

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಅಧ್ಯಕ್ಷರೆ, ದಯವಿಟ್ಟು ನನ್ನ ಮನವಿ ಏನೆಂದರೆ, ನಿಜವಾಗಿಯೂ ಅದು ಸಮುದ್ರದಲ್ಲಿರತಕ್ಕ ಜಲಜೀವಿಗಳಿಗೆ ಹಾನಿಕಾರಕವಾಗಿ ಮತ್ತು ಅದರಿಂದ ಪಲ್ಯೂಷನ್ ಆಗಿ ಮನುಷ್ಯನಿಗೂ ಹಾನಿಕಾರಕವಾದರೆ ನಾವು ಅದನ್ನು ಕ್ಲಿಯರ್ ಮಾಡುತ್ತಿರಲಿಲ್ಲ. This is the first of its kind in our country. ಅದಕ್ಕೆ ಯಾವುದೇ ಒಂದು ವೈಜ್ಞಾನಿಕ ಆಧಾರವಿಲ್ಲದೆ ನಮಗೆ ಹಾಗೆ ಹೇಳಿದ್ದಾರೆ ಹೀಗೆ ಹೇಳಿದ್ದಾರೆಂದರೆ, ಹೇಳುವವರಾದರೂ ಇಂತಹ ಕಡೆ ಹೀಗಾಗಿದೆ, ಇದು ಪ್ರಪಂಚದಲ್ಲಿ ಎರಡೂ ಮೂರು ಕಡೆ ಎರಡು ದೇಶದಲ್ಲಿದೆ. ಅದನ್ನೆಲ್ಲ ನೋಡಿ ಇವತ್ತು ನಾವು ಅವರನ್ನು ಇನ್‌ವೈಟ್ ಮಾಡಿದ್ದೇವೆ. ಆ ತರಹ ಯಾವುದಾದರೂ ಆಧಾರವಿದ್ದರೆ ದಯವಿಟ್ಟು ಕೊಡಿ. ನಾನು ನೋಡುತ್ತೇನೆ.

ಯು.ಆರ್.ಸಭಾಪತಿ:- ಮಾನ್ಯ ಸಭಾಧ್ಯಕ್ಷರೆ, ನಾನು ಇವತ್ತು ಏನು ಮಾಹಿತಿಯನ್ನು ಪಡೆದುಕೊಂಡಿದ್ದೇನೆ ಅದು ಮೀನುಗಾರಿಕಾ ಕಾಲೇಜಿನಿಂದ ಪಡೆದಕೊಂಡಂತಹ ಮಾಹಿತಿ. ಮೀನುಗಳಿಗೆ ಮಿದುಳಿನ ಮೇಲೆ ಪ್ರಭಾವ ಜಾಸ್ತಿ. ಯಾವುದೇ ಕಂಪನ ಪ್ರಾರಂಭವಾದಾಗ ಮಿದುಳಿಗೆ ಕಂಪನ ತಲುಪಿದಾಗ ಆ ಮೀನುಗಳು ಆ ಸರಹದ್ದನ್ನು

ಬಿಟ್ಟು ಓಡಬೇಕು. ಓಡದಿದ್ದರೆ ಅವುಗಳು ಸಾಯಬೇಕು. ಎರಡರಲ್ಲಿ ಒಂದು ಮಾಡುತ್ತವೆ. ಓಡುವುದು ಅಂದರೆ ಕನಿಷ್ಠ 25-30 ಕಿಲೋಮೀಟರ್‌ನಷ್ಟು ಈ ಜನರೇಟರ್‌ನ ವೈಬ್ರೇಷನ್‌ನಿಂದ ಆ ಪರಿಸರವನ್ನು ಬಿಟ್ಟು ಹೋಗುತ್ತವೆ ಎನ್ನುವಂತಹ ಮಾಹಿತಿಯನ್ನು ಮೀನುಗಾರಿಕಾ ಇಲಾಖೆಯ ಮಾಹಿತಿಯ ಪ್ರಕಾರ ನಾನು ನಿಮಗೆ ಹೇಳುತ್ತಿದ್ದೇನೆಯೇ ವಿನಃ ನಾನು ಬಾರ್ಜ್ ಮೌಂಟೆಡ್ ಜನರೇಟರನ್ನು ನೋಡಲಿಕ್ಕೆ ಹೋಗಲಿಲ್ಲ. ಆದರೂ ಈ ಬಗ್ಗೆ ಇನ್ನಷ್ಟು ಮಾಹತಿಗಳನ್ನು ಕಲೆಕ್ಟ್ ಮಾಡುತ್ತಿದ್ದೇವೆ. ಅನೇಕ ಮೀನುಗಾರಿಕಾ ಅಸೋಸಿಯೇಷನ್ಸ್‌ಗಳು ಈಗಾಗಲೇ ಪ್ರತಿಭಟನೆಯನ್ನು ಪ್ರಾರಂಭ ಮಾಡಿವೆ. ಈಗಾಗಲೇ ಅದರ ಬಗ್ಗೆ ಸೆಮಿನಾರ್ಸ್‌ಗಳನ್ನು ಕಂಡೆಕ್ಟ್ ಮಾಡಲಿಕ್ಕೆ ಅನೇಕ ಕಾಲೇಜುಗಳಲ್ಲಿ ಕೂಡ ಅದರ ಬಗ್ಗೆ ವಿವರಗಳನ್ನು ನೀಡುವುದಕ್ಕೆ ಅನೇಕ ಪರಿಸರ ಸಂಘಸಂಸ್ಥೆಗಳು ಮುಂದೆ ಬಂದಿವೆ. ನಾನೇನು ಈ ಮಾತನ್ನು ಹೇಳುತ್ತಿದ್ದೇನೆ, ಇವತ್ತು ನೀವು ಬಾರ್ಜ್ ಮೌಂಟೆಡ್ ಜನರೇಟರ್ಸ್‌ನ್ನು ಇಡುವುದು ಇದ್ದರೆ ಮೀನುಗಾರಿಕಾ ಬಂದರಿನ ಪಕ್ಕದಲ್ಲಿಯೇ ನೀವು ಏಕೆ ಮಾಡಬೇಕು ಎನ್ನುವುದು ನನ್ನ ಪ್ರಶ್ನೆ? ಮಲ್ಪೆ ಮೀನುಗಾರಿಕಾ ಬಂದರು, ಇಡೀ ದೇಶದಲ್ಲಿಯೇ ಅತ್ಯಂತ ಹೆಚ್ಚಿಗೆ ಮೀನು ಸರಬರಾಜು ಆಗುವಂತಹ ಕೇಂದ್ರ ಅದು. ಇಂತಹ ಕೇಂದ್ರದ ಪರಿಸರದಲ್ಲೆ ಸಾವಿರಾರು ಜನ ಬೆಸ್ತರು ಅಲ್ಲಿ ವಾಸ ಮಾಡುತ್ತಿದ್ದಾರೆ.

ಶ್ರೀ ಜೆ.ಹೆಚ್.ಪಟೇಲ್:- ಬಾರ್ಜ್ ಮೌಂಟೆಡ್ ಅಂದರೆ ಅದೊಂದು ಹಡಗಿನ ರೂಪದಲ್ಲಿರುತ್ತದೆ. ಅದು ನೆಲದ ಮೇಲೆ ನಡೆಯುವುದಿಲ್ಲ. ಹಡಗು ನಡೆಯಬೇಕಾದರೆ ನೀರೇ ಬೇಕಾಗುತ್ತದೆ.

ಯು.ಆರ್.ಸಭಾಪತಿ:- ಅದು ನನಗೆ ಗೊತ್ತಿದೆ, ಅದನ್ನು ನೆಲದ ಮೇಲೆ ಇಡುವುದಕ್ಕೆ ಆಗುವುದಿಲ್ಲ. ಸಮುದ್ರದಲ್ಲಿಯೇ ಇಡುವಂತಹದ್ದು. ಆದರೆ ಈ ಮೀನುಗಾರಿಕಾ ಬಂದರಿನ ಸಮೀಪದಲ್ಲಿ ಮೀನುಗಾರಿಕೆ ನಡೆಯುವ ವ್ಯಾಪ್ತಿಯಲ್ಲಿ ನೀವು ಏಕೆ ಇಡಬೇಕು? ಅದಕ್ಕೆ ನಾನು ಹೇಳುತ್ತಿದ್ದೇನೆ. ಎಲ್ಲಿ ಮೀನುಗಾರಿಕೆ ನಡೆಯುತ್ತಿಲ್ಲ, ಆ ಪ್ರದೇಶಗಳನ್ನು ನೀವು ಚಾಯ್ಸ್ ಮಾಡಿಕೊಳ್ಳಿ, ಅಲ್ಲಿ ನೀವು ಇಡಿ ನನ್ನಿಂದ ಏನೂ ಆಕ್ಷೇಪವಿಲ್ಲ. ಇವತ್ತು ಈ ಜನರೇಟರ್ಸ್‌ಗಳನ್ನು ನೀವೇನು ಇಡುತ್ತಿದ್ದೀರಿ ಅದನ್ನು ನಾಫ್ತ ಮೂಲಕ ಆಪರೇಟ್ ಮಾಡುತ್ತಾರೆ. ಅದರಿಂದ ಗ್ರೀಸ್ ಆಯಿಲ್ ಲೀಕೇಜ್ ಇದ್ದೇ ಇರುತ್ತದೆ. ಗ್ರೀಸ್ ಆಯಿಲ್ ಲೀಕೇಜ್ ಆದದ್ದು ಏನಾಗುತ್ತದೆ, ಹೊಳೆ ಮಧ್ಯದಲ್ಲಿದ್ದರೆ ಬಹಳ ಡೇಂಜರ್. ಏಕೆಂದರೆ ಹೊಳೆಯ ಮೇಲೆ ಈ ಗ್ರೀಸ್ ಮತ್ತು ಆಯಿಲ್ ಹೋದರೆ, ನಮ್ಮಲ್ಲಿ ಮಸಲು ಫಿಶ್ ಎಂದು ಹೇಳುತ್ತಾರೆ. ಮರುವಾಯಿ ಎಂದು ಹೇಳುತ್ತಾರೆ. ಅದು ಬಾಯಿ ಆ.... ಹಾ.... ಮಾಡಿಕೊಂಡು ಹೋಗುತ್ತಿರುತ್ತದೆ. ಬಾಯಿ ಆ....ಹಾ.... ಮಾಡಿಕೊಂಡು ಸಾಯುವುದಿಲ್ಲ. ನಿಮ್ಮ ಆಯಿಲ್ ಗ್ರೀಸ್ ಏನಿದೆ ಅದನ್ನು ತಿನ್ನುತ್ತಾ ಹೋಗುತ್ತದೆ. ಅದು ತಿಂದದ್ದನ್ನು ನಾವು ತಿನ್ನಬೇಕಾಗುತ್ತದೆ. ಅದರ ಪರಿಣಾಮ ಏನಾಗುತ್ತದೆ? ನಮ್ಮ ಜನತೆಯ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ನಿಮ್ಮ

ಯೋಜನೆಗಳನ್ನು ತರಲಿಕ್ಕೆ ನಾನು ಏಕಾಏಕಿ ವಿರೋಧ ಮಾಡಲಿಕ್ಕೆ ತಯಾರಿಲ್ಲ. ಪ್ರಾಮಾಣಿಕವಾಗಿ ಹೇಳುತ್ತೇನೆ, ದಕ್ಷಿಣ ಕನ್ನಡ ಜಿಲ್ಲೆಗೆ ಬಂದು ನೀವು ಅಲ್ಲಿ ಎಲ್ಲ ಮುಖಂಡರುಗಳನ್ನು ಎಲ್ಲಾ ಶಾಸಕರುಗಳನ್ನು ಒಟ್ಟಿಗೆ ಸೇರಿಸಿ ನಿಮ್ಮ ತಾಂತ್ರಿಕ ತಜ್ಞರು ಯಾರಿದ್ದಾರೆ ಅವರನ್ನು ಕರೆಯಿಸಿ ನಾನು ಬೇಡ ಎಂದು ಹೇಳುವುದಿಲ್ಲ. ಯಾರು ದೊಡ್ಡ ದೊಡ್ಡ ತಾಂತ್ರಿಕ ತಜ್ಞರು ಇದ್ದಾರೆ ಮತ್ತೇನು ಸೈಂಟಿಸ್ಟ್ ಇದ್ದಾರೆಂದು ಹೇಳಿದರು ಅವರನ್ನೆಲ್ಲ ಕರೆಸಿ. ಅವರೆಲ್ಲ ಸೇರಿ ಕುಳಿತು ಚರ್ಚೆ ಮಾಡೋಣ.

ಶ್ರೀ ಜೆ.ಹೆಚ್.ಪಟೇಲ್:- ನಾನು ಭಾವಿಸಿದ್ದುದು ನೀವು ನಮ್ಮವರೇ ಅಂತ. ನಿಮ್ಮವರನ್ನು ಕರೆಯಿಸಿಯೆಂದು ಹೇಳುತ್ತೀರಿ ನೀವು.

ಶ್ರೀ ಎಸ್.ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, ಒಂದು ಕ್ಲಾರಿಫಿಕೇಶನ್ ಬೇಕು. ಕಂಪನ ಅಂದರೆ ನಮಗೆ ಅರ್ಥವಾಗಲಿಲ್ಲ. ಸಮುದ್ರ ನಮ್ಮ ಪಕ್ಕದಲ್ಲಿ ಇಲ್ಲ. ಕಂಪನ ಅಂದರೆ ನಾವೇನು ತಿಳಿದುಕೊಂಡಿದ್ದೇವೆ, ಸಮುದ್ರದ ಅಲೆ ಬರುತ್ತದೆಯಲ್ಲ ಅದಕ್ಕಿಂತ ಜೋರಾಗಿ ಭೂಮಿ ನಡುಗುತ್ತದೆ ಕಂಪನದಿಂದ ಮೀನುಗಳಿಗೆ ತೊಂದರೆಯಾಗುತ್ತದೆಂದರೆ, ಕಂಪನ ಅಂದರೇನು ಎನ್ನುವ ಬಗ್ಗೆ ಸ್ವಲ್ಪ ತಿಳಿಸಬೇಕು. ಅಲೆಗಳಿಗಿಂತ ಬಿರುಸಾದ ಕಂಪನ ಯಾವುದು ಇದೆಯೆಂದು ಸ್ವಲ್ಪ ಅವರು ಹೇಳಬೇಕು.

ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೆ, ನಾವು ಇದರ ಬಗ್ಗೆ ಒಂದು ಟ್ರಯಲ್ ಮಾಡಿ ನೋಡುವುದು ಒಳ್ಳೆಯದು. ಒಂದು ಸಣ್ಣ ಜನರೇಟರ್ ಇಟ್ಟರೆ ಎಷ್ಟು ವೈಬ್ರೇಷನ್ ಬರುತ್ತದೆ?

ಶ್ರೀ ಎಸ್.ಕೃಷ್ಣಪ್ಪ:- ಕಂಪನ ಅಂದರೆ ಸಮುದ್ರದಲ್ಲಿ ಅಲೆಗಳು ಬಹಳ ಎತ್ತರವಾಗಿ ಸ್ಪೀಡಾಗಿ ಹಡಗನ್ನೇ ಹೊತ್ತುಕೊಂಡು ಬರುವಂತಹ ಅಲೆಗಳು ಬರುತ್ತವೆ. ಅದನ್ನು ನಾವು ನೋಡಿದ್ದೇವೆ. ಅಂತಹ ಸಮುದ್ರದಲ್ಲಿ ಕಂಪನದಿಂದ ಮೀನು ಸಾಯುತ್ತವೆ ಅಂದರೆ ಅದು ಯಾವ ತರಹ ಕಂಪನವೆಂದು ಮಾನ್ಯ ಸದಸ್ಯರು ಹೇಳಲಿ?

ಶ್ರೀ ಕೆ.ಜಯರಾಮಶೆಟ್ಟಿ:- ಮಾನ್ಯ ಅಧ್ಯಕ್ಷರೆ, ಗ್ರಾಮಾಂತರ ಪ್ರದೇಶದಲ್ಲಿ ಗಾಳ ಹಾಕಿ ಮೀನು ಹಿಡಿಯುತ್ತಾರೆ ಬಲೆ ಹಾಕಿ ಮೀನು ಹಿಡಿಯುತ್ತಾರೆ. ಇನ್ನು ಕೆಲವು ಕಡೆ ಮಳೆಗಾಲದಲ್ಲಿ ಗ್ರಾಮಾಂತರ ಪ್ರದೇಶಗಳಿಂದ ನದಿಗೆ ನೀರು ಸೇರುವಂತಹ ದೊಡ್ಡ ತೋಡಿ ಇರುತ್ತದೆ. ಎರಡೂ ಮುಖಜ ಭೂಮಿಗಳಲ್ಲಿ ಮಳೆಗಾಲದಲ್ಲಿ ಮತ್ತು ಬಾಕಿ ದಿವಸಗಳಲ್ಲಿ ತೋಟ ಇಟ್ಟು ಮೀನನ್ನು ಹಿಡಿಯುತ್ತಾರೆ. ದೊಡ್ಡದಾದ ಕಂಪನವನ್ನು ತೋಟದ ಮುಖಾಂತರ ಹಾರಿಸಿ ಮೀನಿನ ಮೇಲಿನ ಕಿವಿಯ ಪೊರೆಗಳು ಇರುವಲ್ಲಿ ಅದು ತಾಗುತ್ತದೆ ಮೀನು ಅಲ್ಲೆ ಸ್ಮೃತಿ ತಪ್ಪಿ ಬೀಳುತ್ತದೆ. ಆ ಕಡೆಯಲ್ಲಿ ಕುಳಿತುಕೊಂಡು ಆಗ ಮೀನನ್ನು ಹಿಡಿಯುತ್ತಾರೆ. ಬಾರ್ಜ್ ಮೌಂಟೆಡ್ ಕಾರ್ಯಕ್ರಮವನ್ನು ಆ ತರಹದಲ್ಲಿ ವಿರೋಧಿಸುತ್ತಾರೆ. ಆ ಸುತ್ತಮುತ್ತಲಿನ 1 ಕಿಲೋಮೀಟರ್ ಏರಿಯಾದಲ್ಲಿ ಮೀನು ಹಿಡಿಯಲಿಕ್ಕೆ ಸಾಧ್ಯತೆಯಿಲ್ಲ. ಆ ತರಹ ಎಂದು ತಾವು ಹೇಳುತ್ತಿದ್ದೀರೋ?

ಶ್ರೀ ಎಸ್.ಕೃಷ್ಣಪ್ಪ:- ತೋಟಾ ಹಾಕುವುದನ್ನು ಫಿಶರೀಸ್ ಡಿಪಾರ್ಟ್‌ಮೆಂಟ್‌ನವರು ನಿಷೇಧಿಸಿದ್ದಾರೆ. ಇದನ್ನು ಎಲ್ಲೂ ಹಾಕಕೂಡದು ಏಕೆಂದರೆ ಸ್ವಲ್ಪ ನೀರಿನಲ್ಲಿ ಸಣ್ಣ ಮೀನುಗಳು ಸಾಯುತ್ತವೆ. ಸಣ್ಣ ಮೀನು ಸಾಯುವುದರಿಂದ ಅವುಗಳ ಅಭಿವೃದ್ಧಿಯಾಗುವುದಕ್ಕೆ ತೊಂದರೆಯಾಗುತ್ತದೆ. ಈ ಕಾರಣಕ್ಕಾಗಿ ತೋಟಾ ಹಾಕುವುದನ್ನು ಸರ್ಕಾರ ತಡೆಯುತ್ತದೆ.

ಶ್ರೀ ಯು.ಆರ್.ಸಭಾಪತಿ:- ಸನ್ಮಾನ್ಯ ಅಧ್ಯಕ್ಷರೇ, ಇದು ಸಮುದ್ರ ಮಧ್ಯದಲ್ಲಿ ಬಾರ್ಜ್ಡ್ ಮೌಂಟಡ್ ಜನರೇಟರ್ ಸೆಟ್‌ನ್ನು ಅಳವಡಿಸುವುದು ಇದನ್ನು ಕಿನಾರೆ ಭಾಗದಲ್ಲಿ ಇಡುತ್ತಾರೆ. ಐದು ಕಿಲೋಮಿಟರ್ ಒಳಗಡೆ ಆ ರೀತಿ ತೆರೆಗಳ ಅಬ್ಬರ ಏನೂ ಇಲ್ಲ. ಮತ್ತು ಕೆಲವು ಕಡೆಗಳಲ್ಲಿ ದೊಡ್ಡ ದೊಡ್ಡ ಹೊಳೆಗಳು ಏನಿವೆ, ಪ್ರಾಯಶಃ ಮಂಗಳೂರಿನಲ್ಲಿ ಗುರಪುರ ಹೊಳೆಯಲ್ಲಿ ಬಾರ್ಜ್ಡ್ ಮೌಂಟೆಡ್ ಜನರೇಟರ್‌ನ್ನು ಇಡುವಂಥ ಕಾರ್ಯಕ್ರಮ ಅಳವಡಿಸುತ್ತಾರೆ ಎನ್ನತಕ್ಕಂಥ ಮಾತು ನಮಗೆ ಬಂದಿದೆ. ಈ ಹೊಳೆಯಲ್ಲಾಗಲೀ, ಸಮುದ್ರ ತೀರದಲ್ಲಿ ಆಗಲಿ ಬಾರ್ಜ್ಡ್ ಮೌಂಟಡ್ ಜನರೇಟರ್‌ನ್ನು ಎಲ್ಲಿಯೂ ಕೂಡ, ಎಲ್ಲಿ ಮಿನುಗಾರಿಕೆ ನಡೆಯುತ್ತದೆ, ಈ ಮೀನುಗಾರಿಕೆ ನಡೆಯುವಂಥ ವ್ಯಾಪ್ತಿಯಲ್ಲಿ ನೀವು ಇಟ್ಟರೆ ಅದರಿಂದ ಬಹಳಷ್ಟು ಹಾನಿಯಿದೆ. ಇಷ್ಟೇ ಅಲ್ಲ ಇದರಲ್ಲಿ ಸೋರತಕ್ಕಂಥ ಎಣ್ಣೆಗಳು, ಗ್ರೀಸುಗಳು ಏನಿದೆ ಇದನ್ನು ತಿನ್ನತಕ್ಕಂಥ ಮೀನನ್ನು ಹಿಡಿದು ನಾವು ಸೌತ್‌ಕೆನರಾದಲ್ಲಿ ಎಕ್ಸ್‌ಪೋರ್ಟ್ ಮಾಡುತ್ತಿದ್ದೇವೆ. ಎಲ್ಲಿಯವರೆಗೆ ರಿಫೈನರಿ ಇರುತ್ತದೋ ಅಲ್ಲಿಯ ಮೀನುಗಳನ್ನು ನಮಗೆ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಆಗುತ್ತಿಲ್ಲ. ತಾವು ಬೇಕಾದರೆ ನೋಡಿ ಅಂಕಿ ಅಂಶಗಳನ್ನು ತೆಗೆದುಕೊಂಡು ಬನ್ನಿ ಮದ್ರಾಸಿನಲ್ಲಿ ಬಾಂಬೆಯ ಮೀನುಗಳು ಎಷ್ಟು ಎಕ್ಸ್‌ಪೋರ್ಟ್ ಆಗುತ್ತವೆ, ಮಲ್ಪೆ ಮೀನುಗಳು ಎಷ್ಟು ಎಕ್ಸ್‌ಪೋರ್ಟ್ ಆಗುತ್ತದೆ ಎನ್ನತಕ್ಕಂಥ ಮಾಹಿತಿ ತೆಗೆದುಕೊಂಡು ಬಂದರೆ ಖಂಡಿತ ನೀವೇ ಇದರ ಬಗ್ಗೆ ಉತ್ತರ ಕೊಡಬಹುದು. ಆದ್ದರಿಂದ ನಾನು ಇಷ್ಟು ಹೇಳುವುದಕ್ಕೆ ಬಯಸುತ್ತೇನೆ. ದಯವಿಟ್ಟು ವಿದ್ಯುತ್ ಯೋಜನೆ ಬೇಡವೆಂದು ನಾನು ಹೇಳುವುದಿಲ್ಲ. ನೀವೇ ಹೇಳಿದಿರಿ, ಎಂ.ಆರ್.ಪಿ.ಎಲ್. ಬಗ್ಗೆ ಚಳುವಳಿ ಅಲ್ಲಿ ಸಾಕಷ್ಟು ನಡೆದಾಗ, ಮೀನುಗಾರರು ಬಹಳ ದೊಡ್ಡ ಚಳುವಳಿ ಮಾಡಿದಾಗ, ಮೂರು ದಿನ ಇಡೀ ಜಿಲ್ಲೆಯಲ್ಲಿ ಗೊಂದಲಮಯ ವಾತಾವರಣ ಉಂಟಾಗಿತ್ತು. ಆಗ ಮುಖ್ಯಮಂತ್ರಿಗಳು ಮತ್ತು ಎಲ್ಲ ಶಾಸಕರು ಕೂಡ ಸೇರಿ ಒಂದು ನಿರ್ಣಯವನ್ನು ಮಾಡಿದ್ದರು. ಎಂ.ಆರ್.ಪಿ.ಎಲ್. ಸಂಸ್ಥೆಗಳು ಆ ರೀತಿ ಮಾಡಬೇಕು. ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಧಾರಣ ಶಕ್ತಿ, ಕ್ಯಾರಿಯಿಂಗ್ ಕೆಪ್ಯಾಸಿಟಿಯ ಅಧ್ಯಯನವನ್ನು ಮಾಡಿದ ಮೇಲೆಯೇ ತಮಗೆ ಯಾವುದೇ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು ಎಂಬ ಮಾತನ್ನು ಸ್ಪಷ್ಟವಾಗಿ ಆ ನಿರ್ಣಯದಲ್ಲಿ ರೂಪಿಸಲಾಗಿದೆ ಕೆಪ್ಯಾಸಿಟಿಯನ್ನು ಅಧ್ಯಯನ ಮಾಡಿ ಅದರ ಮೇಲೆ ಈ ಸ್ಕೀಮ್‌ನ್ನು ತೆಗೆದುಕೊಂಡು ಬನ್ನಿ, ಇವತ್ತು ಪಶ್ಚಿಮ ಘಟ್ಟದಲ್ಲಿ ಇರತಕ್ಕಂಥ ಏಲಕ್ಕಿ, ಕಾಫಿ ಬೆಳೆ, ಚಹ ಬೆಳೆಗೆ ಈ ವಿದ್ಯುತ್ ಯೋಜನೆಗಳಿಂದ ಆಗತಕ್ಕಂಥ ಪರಿಣಾಮಗಳನ್ನು ನೀವು ಅಧ್ಯಯನ ಮಾಡಿ ದಯವಿಟ್ಟು ನೀವು ಯಾರೋ ಹೇಳಿದರೆ ಎಂದು

ಏಕಪಕ್ಷೀಯವಾಗಿ ಅಧ್ಯಯನ ಮಾಡಬೇಡಿ; ಪ್ರತಿ ದಿವಸಕ್ಕೆ ಮೂರು ಸಾವಿರದಿಂದ ನಾಲ್ಕು ಸಾವಿರ ಟನ್ ಗಂಧಕಾಂಶ ಏನು ಕಲ್ಲಿದ್ದಲು ಉರಿಯುತ್ತದೆ, ಅದು ಉರಿಯುವಾಗ ಹೊರಬರತಕ್ಕಂಥ ಗಂಧಕಾಂಶದ ಹೊಗೆ ಅದು ಬಂದು ಬಡಿಯುವುದು ಪಶ್ಚಿಮ ಘಟ್ಟಕ್ಕೆ. ನಿಮ್ಮ ಬಯಲುಸೀಮೆಯಲ್ಲಿ ಆದರೆ ಪಶ್ಚಿಮದಲ್ಲಿ ಗಾಳಿ ಬಂದರೆ ಅದು ಪೂರ್ವಕ್ಕೆ ಬೀಸಿಕೊಂದು ಹೋಗುತ್ತದೆ ನಮ್ಮಲ್ಲಿ ಆ ವಾತಾವರಣ ಇಲ್ಲ. ಪಶ್ಚಿಮದಲ್ಲಿ ಗಾಳಿ ಬೀಸಿದರೆ ಆ ಗಾಳಿ ಹೋಗಿ ಪಶ್ಚಿಮಘಟ್ಟಕ್ಕೆ ಬಡಿದು ಪುನಃ ಮಳೆಯಾಗಿ ವಾಪಾಸ್ಸು ಬರಬೇಕು. ಇವತ್ತು ಗಂಧಕಾಂಶದ ಹೊಗೆಯನ್ನು ಕಾರತಕ್ಕಂಥ ಈ ವಿದ್ಯುತ್ ಯೋಜನೆಗಳು ಸಹಸ್ರಾರು ಟನ್‌ಗಟ್ಟಲೆ ಗಂಧಕಾಂಶವನ್ನು ಹೊರಹಾಕುವಾಗ, ಅದು ಪಶ್ಚಿಮಘಟ್ಟಕ್ಕೆ ಬಡಿದರೆ ಪಶ್ಚಿಮಘಟ್ಟದಲ್ಲಿರತಕ್ಕಂಥ ಈ ಚಹ, ಕಾಫಿ, ರಬ್ಬರ್ ಬೆಳೆ ಸರ್ವನಾಶವಾಗುವಾಗ ಸಾವಿರಾರು ಕೋಟಿ ರೂಪಾಯಿಗಳ ಉತ್ಪನ್ನಗಳು ನಾಶವಾಗಿ, ಎಷ್ಟೋ ಮಂದಿ ಉದ್ಯೋಗ ಇಲ್ಲದೆ ನಿರಾಶ್ರಿತರಾಗುವಂಥ ಪರಿಣಾಮವಾಗುವಾಗ, ಇನ್ನು ನೂರು ವರ್ಷಗಳ ನಂತರ ಜನ ನಿಮಗೆ ಶಾಪ ಇಡುವಂಥ ಕೆಲಸವನ್ನು ದಯವಿಟ್ಟು ಮಾಡಬೇಡಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸ್ಪಷ್ಟವಾದ ಚಿತ್ರವನ್ನು ತಮ್ಮ ಮುಂದೆ ಇಟ್ಟರೂ ಕೂಡ ನೀವು ಆ ದಿವಸ ಎಂ.ಆರ್.ಪಿ.ಎಲ್ ಬಗ್ಗೆ ಮಂಗಳೂರು ರಿಫೈನರಿ ಬಗ್ಗೆ ನಾಲ್ಕು ಟೀಮ್‌ಗಳನ್ನು ಮಾಡಿ ಬೆಸ್ತರನ್ನು ನಾಲ್ಕು ಕಡೆಗೆ ಕಳಿಸಿದಿರಿ. ಬೊಂಬಾಯಿ ಆಜೆ ಕಳಿಸಿದರಿ, ಮಹಾರಾಷ್ಟ್ರಕ್ಕೆ ಕಳಿಸಿದಿರಿ, ಮದ್ರಾಸಿಗೆ ಕಳಿಸಿದಿರಿ, ಎಲ್ಲ ಕಡೆಗೆ ಕಳಿಸಿದಿರಿ,. ಅಲ್ಲಿಯ ವರದಿ ಏನು ಬಂತು ಮತ್ತು ಆ ವರದಿಯಲ್ಲಿ ಏನು ಹೇಳಿದರು? ರಿಫೈನರಿಯಿಂದ ಆಗತಕ್ಕಂಥ ಪರಿಣಾಮವನ್ನು ಅವರು ಗಂಭೀರವಾಗಿ ಹೇಳಿದ್ದಾರೆ. ಇದರ ಬಗ್ಗೆ ನೀವು ಏಕೆ ಕ್ರಮ ತೆಗೆದುಕೊಳ್ಳಲಿಲ್ಲ? ಮೀನುಗಾರರನ್ನು ಸರ್ಕಾರಿ ವೆಚ್ಚದಲ್ಲಿ ನೀವು ಅಲ್ಲಿ ಕಳಿಸಿದ್ದಿರಲ್ಲ ಹಾಗೆ ಕಳಿಸಿದಾಗ ಅಲ್ಲಿ ಅವರು ಕೊಟ್ಟಿರುವಂಥ ವರದಿಯಲ್ಲಿ ಸಂಪೂರ್ಣವಾಗಿ ರಿಫೈನರಿಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಮೀನುಗಾರಿಕೆ ಪ್ರದೇಶದಲ್ಲಿ ಹಾಕುವುದಕ್ಕೆ ಬರುವುದಿಲ್ಲ, ಎನ್ನುವುದನ್ನು ಅವರು ಪ್ರತಿಪಾದಿಸಿದ್ದಾರೆ, ಈಗಾಗಲೇ ಎಂ.ಆರ್.ಪಿ.ಎಲ್. ಬಂದುಬಿಟ್ಟಿದೆ ಮತ್ತು ನಾವು ಅದನ್ನು ಅಕ್ಸೆಪ್ಟ್ ಮಾಡಿದ್ದೇವೆ ಪ್ರಾಯೋಗಿಕ ಹಂತದಲ್ಲಿ ಆ ಕೊಳವೆಯಲ್ಲಿ ಮಳೆ ಬಂದ ಕೂಡಲೇ ಪಂಪ್‌ಸೆಟ್ ಹಾಳಾಗಿ, ಇದು ದೇವರು ನಮಗೆ ತೋರಿಸಿಕೊಟ್ಟಿದ್ದು. ಪ್ರಾಯೋಗಿಕ ಹಂತದಲ್ಲಿಯೇ ಐದು ನೂರು ಎಕರೆ ಭುಮಿಗೆ ಇವರು ಕಳಿಸಿದಂಥ ಡಾಮರು, ಗ್ರೀಸ್ ಮಿಕ್ಸ್ ಆಗಿ ಆದಂಥ ತ್ಯಾಜ್ಯವಸ್ತು ಬಂದು ಅದು ಎಕರೆಗಟ್ಟಲೆ ಭೂಮಿಯನ್ನು ಪಸರಿಸಿದ್ದನ್ನು ನೋಡಿದರೆ ಹೊಟ್ಟೆಯಲ್ಲಿ ಉರಿ ಬರುತ್ತದೆ. ಇವತ್ತು ನಾನು ಬೇರೆ ಏನೂ ಹೇಳುವುದಿಲ್ಲ. ಇವತ್ತು ಗದ್ದೆ ಹೋಯಿತು. ಆ ಗ್ರೀಸ್. ಡಾಮರು ಹರಡಿದಂಥ ಗದ್ದೆ ಇದೆಯಲ್ಲ, ಅಲ್ಲಿ ಇನ್ನು ಐದು ವರ್ಷ ಅಲ್ಲ, ಹತ್ತು ವರ್ಷ ನಿಮಗೆ ಅಗ್ರಿಕಲ್ಚರ್ ಮಾಡುವುದಕ್ಕೆ ಬರುವುದಿಲ್ಲ, ಬೇಸಾಯ ಮಾಡುವುದಕ್ಕೆ ಬರುವುದಿಲ್ಲ. ಅದು ನೀರಿನೊಳಗೆ, ಮಣ್ಣಿನೊಳಗೆ ಹೋದಮೇಲೆ ಅದನ್ನು ತೊಳೆಯುವುದಕ್ಕೆ ಬರುವುದಿಲ್ಲ. ಚಿಮಣಿ ಎಣ್ಣೆ ಹಾಕಿ ತೊಳೆಯುವಂತೆ ಅದನ್ನು ತೊಳೆಯುವುದಕ್ಕೆ

ಆಗುವುದಿಲ್ಲ,. ಇದರ ಪರಿಣಾಮ, ಇವತ್ತು ದೇವರೇ ತೋರಿಸಿಕೊಟ್ಟಿದ್ದು ಎಂದು ನಾನು ಹೇಳುತ್ತೇನೆ. ಏಕೆಂದರೆ ನಾಳೆ ಫುಲ್‌ಸ್ವಿಂಗ್‌ನಲ್ಲಿ ಅವರು ಮಿಲಿಯಗಟ್ಟಲೆ ಟನ್ ಪ್ರಯೋಗ ಮಾಡತ್ತಾರೆ, ಉತ್ಪಾದನೆ ಮಾಡುತ್ತಾರೆ, ಹಾಗೆ ಉತ್ಪಾದನೆ ಮಾಡುವಾಗ ಎಲ್ಲಿಯಾದರೂ ಸ್ವಲ್ಪ ಏನಾದರೂ ಗಂಡಾಂತರ ಆದರೆ ಆ ಜಿಲ್ಲೆಯ ಜನ ತಮ್ಮ ಜೀವಗಳನ್ನು ಬಲಿಗೊಡುವಂಥ ಪರಿಸ್ಥಿತಿ ನಿರ್ಮಾಣವಾದರೆ, ಭೋಪಾಲ್ ದುರಂತದ ತರಹ ಆದರೆ, ಅದರ ಪರಿಣಾಮ ಏನಾಗಬಹುದು? ದಯವಿಟ್ಟು ತಾವು ಇದನ್ನು ಆಲೋಚನೆ ಮಾಡಿ. ಎಲ್ಲ ಕೈಗಾರಿಕೆಗಳು ಬರುವಾಗ ನೀವು ಎಲ್ಲರಿಗೂ ರಿಸೈಕಲಿಂಗ್ ಮಾಡುತ್ತೇವೆ, ಅದು ಮಾಡುತ್ತೇವೆ ಎಂದು ಹೇಳುತ್ತೀರಿ, ಅಲ್ಲಿ 30 ಸಾವಿರ ದೊಡ್ಡದೊಡ್ಡ ಮರಗಳನ್ನು ಎಲ್ಲ ನಿರ್ನಾಮ ಮಾಡಿದರು. 60 ಸಾವಿರ ಸಸಿ ನೆಡುತ್ತಾ ಹೋಗುತ್ತೇವೆ ಎಂದು ಹೇಳುತ್ತಾರೆ 30 ಸಾವಿರ ಮರಗಳು ಎಂ.ಆರ್.ಪಿ.ಎಲ್.ನಲ್ಲಿ ನಾಶವಾಗಿ ಅಲ್ಲಿ ಈಗ 60 ಸಾವಿರ ಸಸಿಗಳನ್ನು ನೆಟ್ಟರೆ, ಅದು ಮರ ಆಗುವುದಕ್ಕೆ ಎಷ್ಟು ವರ್ಷ ಆಗಬೇಕು? ಇವತ್ತು 30 ಸಾವಿರ ಮರಗಳು ಹೋಗಿರುವಂತ ಸನ್ನಿವೇಶದಲ್ಲಿ ಇಕಲಾಜಿಕಲ್ ಪರಿಸ್ಥಿತಿ ಏನಾಗುತ್ತದೆ? 60 ಸಾವಿರ ಸಸಿ ನೆಡುತ್ತೇವೆ ಎಂದು ಹೇಳಿದ್ದಾರಲ್ಲ, ತಾವು ಸ್ವಲ್ಪ ನಮ್ಮೊಡನೆ ಬನ್ನಿ, ಎಂ.ಆರ್.ಪಿ.ಎಲ್.ಗೆ ಹೋಗಿ ಎಷ್ಟು ಸಸಿ ಅಲ್ಲಿ ನೆಟ್ಟಿದ್ದಾರೆ ಎಂದು ನೋಡೋಣ. ಇದು ನಮ್ಮ, ಈ ಜಿಲ್ಲೆಯ ಜೀವನ್ಮರಣದ ಪ್ರಶ್ನೆ ಇದೆ. ಆದ್ದರಿಂದ ತಾವು ದಯವಿಟ್ಟು ಇದರ ಬಗ್ಗೆ ಚಿಂತಿತರಾಗಬೇಕಂದು, ಕಾಳಜಿ ವಹಿಸಬೇಕೆಂದು ನಾನು ಕೇಳಿಕೊಳ್ಳುತೇನೆ,

ಶ್ರೀ ಜೆ.ಎಚ್.ಪಟೇಲ್ (ಮುಖ್ಯಮಂತ್ರಿ):- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಕಳಕಳಿ ಬಗ್ಗೆ ನಮಗೆ ನಂಬಿಕೆ ಇದೆ. ಎಂ.ಆರ್.ಪಿ.ಎಲ್.ನಿಂದ ಆಗತಕ್ಕಂಥ ಪೊಲ್ಯೂಶನ್ ಬೇರೆ. ಈಗ ನಾವು ಪ್ರಾರಂಭ ಮಾಡುತ್ತಾ ಇರತಕ್ಕಂತ ಬಾರ್ಜ್ಡ್ ಮೌಂಟಡ್ ಆಗಲಿ ಅಥವಾ ಕೋಲ್ ಬೇಸ್ಡ್ ಥರ್ಮಲ್ ಪವರ್ ಪ್ಲಾಂಟ್‌ನಿಂದಾಗಲೀ ಇಲ್ಲಿ ಚರ್ನಬೈಲ್ ತರಹ ಆಗುತ್ತದೆ ಎಂದು ಹೇಳಲಿಲ್ಲ. ಆಗಿದೆ, ದುರಂತ ಆಗಿಲ್ಲವೆಂದು ನಾನು ಹೇಳುವುದಿಲ್ಲ, ಆದರೆ ಆದಷ್ಟು ಸೇಫ್ಟಿ, ಮನುಷ್ಯರಿಗೆ, ಜಲಜೀವಿಗಳಿಗೆ ಅತ್ಯಂತ ಕಡಿಮೆ, ಮಿನಿಮಮ್ ಡ್ಯಾಮೇಜ್ ಆಗತಕ್ಕಂಥ ಮಾರ್ಗಗಳನ್ನು ನಾವು ಇವತ್ತು ವೈಜ್ಞಾನಿಕವಾಗಿ ನೋಡಬೇಕೇ ಹೊರತು, ಈಗ ಆಗಿರತಕ್ಕಂಥದ್ದು ನಾಶವಾಗಿದೆ ಅಥವಾ ಆ ಹಾನಿಯಾಗಿದೆ. ನಾನು ಆವತ್ತು ಹೇಳಿದ್ದೆ. ಬೇರೆ ಏನಾದರೂ ಮಾರ್ಗ ಇದ್ದರೆ, ವಿದ್ಯುಚ್ಛಕ್ತಿಯನ್ನು ಬೇರೇ ಯಾವುದೇ ಪೊಲ್ಯೂಶನ್ ಇಲ್ಲದೆ, ಯಾವುದೇ ಹಾನಿ ಇಲ್ಲದೆ ಉತ್ಪಾದನೆ ಮಾಡತಕ್ಕಂಥ ಒಂದು ಮಾರ್ಗವನ್ನು ಯಾರಾದರೂ ತೋರಿಸಿದರೆ, ನಾವು ಇದರ ಕಡಗೇ ಹೋಗುವುದಿಲ್ಲ. ಆದರೆ ಇದು ಅನಿವಾರ್ಯವಾಗಿದೆ. ಈಗ ಆ್ಯಸಿಡ್ ರೇನ್ ಬರುತ್ತದೆ ಎಂದು ಯಾರೋ ಹೇಳಿದರು. ಯಾವ ದೇಶದಲ್ಲಿ ಬಂದಿದೆ? ನಾವೂ ಸ್ವಲ್ಪ ತಿಳಿದುಕೊಳ್ಳಬೇಕಲ್ಲ? ಇಂತಹ ಕಡೆ ಇಲ್ಲಿ ಕೋಲ್ ಬೇಸ್ಡ್ ಥರ್ಮಲ್ ಪ್ಲಾಂಟ್‌ನ್ನು ಹಾಕಿದ್ದರಿಂದ ಆ್ಯಸಿಡ್ ರೇನ್ ಬಂತು, ಪೈರುಗಳೆಲ್ಲ ಹಾಳಾಗಿಹೋದವು ಎಂದು ಹೇಳಲಿ. ಒಂದು ನಿಜ, ಮಾನವ ಸಂತತಿ ಬಗ್ಗೆ

ಮಾನ್ಯ ಸಭಾಪತಿಯವರಿಗೆ ಕಳಕಳಿ ಇದೆಯೆಂದು ನನಗೆ ಗೊತ್ತು. ಆದರೆ ಇದರ ಜೊತೆಗೆ ಇದನ್ನು ಮಧ್ಯಪ್ರದೇಶದ ಗ್ಯಾಸಿಗೆ ಕನೆಕ್ಟ್ ಮಾಡಿ, ಎಂ.ಆರ್.ಪಿ.ಎಲ್. ಎಣ್ಣೆಗೆ ಕನೆಕ್ಟ್ ಮಾಡಿ, ಬಾರ್ಜ್ಡ್ ಮೌಂಟಡ್ ಆಯಿಲ್ ಲೀಕ್ ಆಗುತ್ತದೆ ಎಂದರೆ, ಇದನ್ನು ವೈಜ್ಞಾನಿಕವಾಗಿ ತಿಳಿದುಕೊಂಡರೆ ಆ ತರಹ ಆಗುವುದಿಲ್ಲ. ನಾವು ಜನರನ್ನು ಕೊಲ್ಲುವುದಕ್ಕೆ ಅಥವಾ ಪ್ರಾಣಿಗಳನ್ನು ಕೊಲ್ಲುವುದಕ್ಕಲ್ಲ ಈ ಪ್ಲಾಂಟ್‌ನ್ನು ಮಾಡುತ್ತಿರುವುದು. ನಮ್ಮಲ್ಲಿರತಕ್ಕಂಥ ಉದ್ಯೋಗಗಳು, ನಮ್ಮಲ್ಲಿರತಕ್ಕಂಥ ದಿನನಿತ್ಯ ಜೀವನಕ್ಕೆ ಬೇಕಾಗಿರತಕ್ಕಂಥ ಅವಶ್ಯಕ ವಸ್ತುಗಳನ್ನು ಜನರೇಟ್ ಮಾಡುವುದಕ್ಕೆ ಮಾಡುತ್ತಿದ್ದೇವೆ.

ಶ್ರೀ ಯು.ಆರ್.ಸಭಾಪತಿ:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರಲ್ಲಿ ನನ್ನ ಪೂರ್ಣ ಸಹಮತ ಇದೆ. ಆದರೆ ಇವತ್ತು ನಮ್ಮ ಜಿಲ್ಲೆ ಇಡೀ ಜಗತ್ತಿನ 18 ಎಕಲಾಜಿಕಲೀ ಸೆನ್ಸಿಟಿವ್ ಏರಿಯಾ ಅಂತ ಗುರುತಿಸಲ್ಪಟ್ಟಿರತಕ್ಕಂಥ ಪ್ರದೇಶಗಳಲ್ಲಿ ಒಂದಾಗಿದೆ. ಇಂತಹ ಪ್ರದೇಶದಲ್ಲಿ ಎಲ್ಲಿಯಾದರೂ ವಿದ್ಯುತ್ ಯೋಜನೆ ಬಂದಿದ್ದರೆ ನೀವು ತೋರಿಸಿ. ಅಲ್ಲಿ ಆ್ಯಸಿಡ್ ರೇನ್ ಆಗಿದೆಯೋ ಇಲ್ಲವೋ ಎಂದು ನಾನು ಹೇಳುತ್ತೇನೆ. ಎಲ್ಲೂ ಇಂತಹ ಪ್ರದೇಶದಲ್ಲಿ ವಿದ್ಯುತ್ ಯೋಜನೆಯನ್ನು ರೂಪಿಸಿಯೇ ಇಲ್ಲ. ರೂಪಿಸುವುದಕ್ಕೆ ಆಗುವುದಿಲ್ಲ ಎನ್ನುವುದನ್ನು ನಿಮ್ಮ ಡ್ಯಾನಿಡಾ ವರದಿಯಲ್ಲಿ ಕೂಡ ಅವನು ಹೇಳುತ್ತಾನೆ. ದಯವಿಟ್ಟು ನೀವು ಇದನ್ನು ಗಮನಕ್ಕೆ ತೆಗೆದುಕೊಳ್ಳಿ. ನಾನು ಏನು ಹೇಳುತ್ತೇನೆ ಎಂದರೆ, ನೀವು ಮೂರೂವರೆ ಸಾವಿರ, ನಾಲ್ಕು ಸಾವಿರ ಮೆಗಾವ್ಯಾಟ್ ಥರ್ಮಲ್ ಪ್ಲಾಂಟ್‌ಗಳನ್ನು ಒಂದು ಸಾವಿರ, ಒಂದು ಸಾವಿರದ ಇಪ್ಪತ್ತೈದು, ನೂರು ಅಂತ ಈ ಥರ್ಮಲ್ ಪ್ಲಾಂಟ್‌ಗಳನ್ನು ನಮ್ಮ ಜಿಲ್ಲೆಯಲ್ಲಿಯೇ ಏಕೆ ರಾಶಿಹಾಕಿ ನಮ್ಮ ಸರ್ವನಾಶ ಮಾಡುತ್ತೀರಿ? ಒಂದು 500 ಮೆಗಾವ್ಯಾಟ್ ನಮಗೆ ಕೊಡಿ. ಒಂದು ಐದುನೂರು ಮೆಗಾವ್ಯಾಟ್ ಶಿವಮೊಗ್ಗಕ್ಕೆ ಹಾಕಿಕೊಳ್ಳಿ. ಐದುನೂರು ಮೆಗಾವ್ಯಾಟನ್ನು ಹಾಸನದಲ್ಲಿ ಹಾಕಿಕೊಳ್ಳಿ. ನೀವು ರಾಜ್ಯದಾದ್ಯಂತ ಥರ್ಮಲ್ ಪ್ಲಾಂಟ್‌ಗಳನ್ನು ಹಾಕಬಹುದು ತಾನೆ? ಟ್ರಾನ್ಸ್‌ಮಿಶನ್ ಅಂಡ್ ಡಿಸ್ಟ್ರಿಬ್ಯುಶನ್ ಲಾಸನ್ನು ಉಳಿಸಬಹುದು ತಾನೆ? ಇವತ್ತು ಏನು ಕೊಜೆಂಟ್ರಿಕ್ಸ್ ಬರುತ್ತದೆ, ಅದರ ಸಂಪೂರ್ಣ ವಿದ್ಯುತ್‌ನ್ನು ಬೆಂಗಳೂರಿಗೆ ರವಾನೆ ಮಾಡಬೇಕಾಗಿದೆ. ಇವತ್ತು ಬೆಂಗಳೂರಿಗೆ ಉಡುಪಿಯಿಂದ ರವಾನೆ ಮಾಡುವುದಿದ್ದರೆ ಟ್ರಾನ್ಸ್‌ಮಿಶನ್ ಅಂಡ್ ಡಿಸ್ಟ್ರಿಬ್ಯುಶನ್ ಲಾಸ್ ಎಷ್ಟು ಆಗುತ್ತದೆ? ಉದಾಹರಣೆಗೆ ಶಿವಮೊಗ್ಗದಲ್ಲಿ ಒಂದು ಥರ್ಮಲ್ ಪ್ಲಾಂಟ್ ಹಾಕಿದರೆ ಅಲ್ಲಿಂದ ಬೆಂಗಳೂರಿಗೆ ತೆಗೆದುಕೊಂಡು ಹೋಗುವುದಕ್ಕೆ ಹತ್ತಿರವಾಗುತ್ತದೆ. ಹಾಸನದಲ್ಲಿ ಹಾಕುವುದಿದ್ದರೆ ಹತ್ತಿರವಾಗುತ್ತದೆ. ಇವತ್ತು ನಮ್ಮಲ್ಲಿ ಹಾಕಿ, ಬೇಡವೆಂದು ಹೇಳುವುದಿಲ್ಲ. ಒಂದು ಐನೂರು ಮೆಗಾವ್ಯಾಟ್ ನಮ್ಮಲ್ಲಿ ಹಾಕಿ. ಇದನ್ನು ನಮ್ಮ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗೆ ಸೀಮಿತಗೊಳಿಸಿ. ಆವಾಗ ನಿಮಗೆ ಈ ಟ್ರಾನ್ಸ್‌ಮಿಶನ್ ಲಾಸ್ ಕೂಡ ಕಡಿಮೆಯಾಗುತ್ತದೆ.

ಜೆ.ಹೆಚ್.ಪಟೇಲ್:- ಈಗ ಮಾಡಿರುವುದು ಹಾಗೆಯೇ ಮಾನ್ಯ ಅಧ್ಯಕ್ಷರೇ. ಸಣ್ಣಸಣ್ಣ ಥರ್ಮಲ್ ಪ್ಲಾಂಟ್‌ಗಳನ್ನೆಲ್ಲ 25, 40 ಮೆಗಾವ್ಯಾಟ್, ಅಥವಾ 300, 100 ಇಷ್ಟು ಮೆಗಾವ್ಯಾಟ್ ಕೆಪ್ಯಾಸಿಟಿ ಇರುವುದನ್ನು ರಾಜ್ಯದ ಎಲ್ಲ ಕಡೆಗಳಲ್ಲಿ ಹಾಕಿದ್ದೇವೆ. ಇದು ಅದೃಷ್ಟವೋ, ದುರಾದೃಷ್ಟವೋ ಮಂಗಳೂರಿನ ಹತ್ತಿರ ಸಮುದ್ರ ಇದೆ. ಬೆಂಗಳೂರಿನ ಹತ್ತಿರ ಇದ್ದರೆ ನಾವು ಇವರ ಹತ್ತಿರ ಹೋಗುತ್ತಿರಲಿಲ್ಲ.

ಶ್ರೀ ಯು.ಆರ್.ಸಭಾಪತಿ:- ಸಮುದ್ರಕ್ಕೆ ನಾನು ಹೇಳುತ್ತಿಲ್ಲ. ಪಶ್ಚಿಮ ಘಟ್ಟಗಳು ಎಲ್ಲೂ ಇಲ್ಲ. ಪಶ್ಚಿಮ ಘಟ್ಟಗಳಿಂದ ಆವರಿತವಾದಂಥ ಎಕಲಾಜಿಕಲ್ ಸೆನ್ಸಿಟಿವ್ ಏರಿಯಾ ಅಂತ ಹೇಳಿ ನಾನು ಮತ್ತೆ ಮತ್ತೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸಮುದ್ರ ಎಲ್ಲ ಕಡೆ ಇದೆ. ಸಮುದ್ರ ಇದೆಯೆಂದು ಹೇಳಿ ನಾನು ಆಕ್ಷೇಪ ಮಾಡುತ್ತಿಲ್ಲ. ಇವತ್ತು ಒಂದು ಕಡೆಯಿಂದ ಗಂಧಕಾಂಶ ಹೊರಬರುವಂಥಾದ್ದು ಇದೆಯಲ್ಲ, ಪಶ್ಚಿಮಘಟ್ಟದಲ್ಲಿ ಅದು ಚಹಾ, ಕಾಫಿ, ರಬ್ಬರ್ ಮಾತ್ರ ಅಲ್ಲ, ಆರು ಸಾವಿರ ಸಸ್ಯಸಂಪತ್ತು ಇದೆ. ಇದರಿಂದ ಆಯುರ್ವೇದ ಔಷಧಿಗಳನ್ನು ತಯಾರು ಮಾಡುತ್ತಾರೆ. ಅದರ ಮೇಲೂ ಕೂಡ ಇದರ ಪರಿಣಾಮವಾಗುವುದನ್ನು ಗಮನದಲ್ಲಿಟ್ಟುಕೊಂಡು, ಅದು ಆಗುವುದಕ್ಕೆ ಮೊದಲೇ ಚಿಂತನೆ ಮಾಡಿ ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿರುವುದು.

7.00 ಪಿ.ಎಂ.

ಮತ್ತೆ ನೀವು ಸಾವಿರಗಟ್ಟಲೆ, ಮೂರೂವರೆ ನಾಲ್ಕು ಸಾವಿರ ಮೆಗಾವ್ಯಾಟನ್ನು ಒಂದೇ ಜಿಲ್ಲೆಗೆ ಸೀಮಿತವಾಗಿಡಬೇಡಿ. ಅದನ್ನು ಬೇರೆ ಜಿಲ್ಲೆಗೂ ಸ್ವಲ್ಪ ಹರಡಿ. ಇವತ್ತು ಜನರ ಹೋರಾಟ ಏನಿದೆ, ಆ ಹೋರಾಟದಲ್ಲಿ ನಾವು ಚುನಾಯಿತ ಪ್ರತಿನಿಧಿಗಳಾಗಿ ಬಂದು ಇವರು ಏತಕ್ಕಾಗಿ ಹೋರಾಟ ಮಾಡುತ್ತಿದ್ದಾರೆ, ಇದರ ಸತ್ಯಾಂಶ ಏನು ಎನ್ನುವುದನ್ನು ಇವತ್ತು ಈ ಸದನದಲ್ಲಿ ಮಾತನಾಡಬೇಕಾದರೆ, ನಮ್ಮೊಟ್ಟಿಗೆ ಸಂಪೂರ್ಣ ಮಾಹಿತಿ ಇರಬೇಕು. ಈ ಸಂಪೂರ್ಣ ಮಾಹಿತಿ ಇಲ್ಲದೇ ವಾದ ಮಾಡಿದರೆ, ನಿಮ್ಮಂಥ ಹಿರಿಯರ ಎದುರಿಗೆ ನಾವು ಕುಳಿತುಕೊಳ್ಳುವುದಕ್ಕೆ ಸಾಧ್ಯವೇ? ನಾವು ಇಷ್ಟು ಜನರನ್ನು ಅಲ್ಲಿ ಬೆದರಿಸಿಕೊಂಡು, ನಾವೇನು ಅಲ್ಲಿ ರಾಜಕೀಯ ಕಟ್ಟುವುದಕ್ಕೋಸ್ಕರ ಅಲ್ಲ. ಕಳೆದಬಾರಿ ನಾನು ಮಾತನಾಡಿದಾಗ, ಸನ್ಮಾನ್ಯ ಸಭಾಧ್ಯಕ್ಷರು ನನಗೊಂದು ಪ್ರಶ್ನೆ ಕೇಳಿದರು. ಏನು ಸಭಾಪತಿಗಳೇ, ಲೋಕಸಭೆಗೆ ನಿಲ್ಲುವ ಇರಾದೆ ಇದೆಯೇ ಎಂದು ಕೇಳಿದರು. ನನಗೆ ಇವತ್ತು ನೆನಪು ಬರುತ್ತಿದೆ. ನಾನು ಆ ಇರಾದೆಯಿಂದ ಮಾಡುತ್ತಾ ಇಲ್ಲ. ನನಗೆ ಅದು ಬೇಕಾಗಿಲ್ಲ. ನನ್ನ ಉಡುಪಿಯೊಳಗೆ ಬರುವುದು, ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವುದು ಕೇವಲ ಬಾರ್ಜ್ ಮೌಂಟೆಡ್ ಜನರೇಟರ್ ಸೆಟ್ ಯೋಜನೆ ಮಾತ್ರ ಕೊಜೆಂಟ್ರಿಕ್ಸ್ ನನ್ನ ಕ್ಷೇತ್ರದಲ್ಲಿ ಬರುವುದಿಲ್ಲ, ಪಕ್ಕದಲ್ಲಿ ಬರುತ್ತೆ. ಆದರೆ, ಇದು ಸಾರ್ವತ್ರಿಕವಾಗಿ ಮತ್ತು ಜಿಲ್ಲೆಯ ಸಮಸ್ತ ಜನರಿಗೆ ಜಿಲ್ಲೆಯ ಮೀನುಗಾರರಿಗೆ, ಆಗತಕ್ಕ ಒಂದು ಅನ್ಯಾಯ, ಇವತ್ತು 3 ಲಕ್ಷ ಮೀನುಗಾರರು ಇನ್ನು ಮುಂದಿನ ದಿನಗಳಲ್ಲಿ ಬವಣೆ ಪಡುವುದನ್ನು ನಿಮ್ಮ ಕಣ್ಣಿನಲ್ಲಿ ನೋಡಿ, ಯೋಚನೆ ಮಾಡಿದರೆ, ಆಗ ನಿಮಗೆ ಇದರ

ಪರಿಣಾಮ ಏನಾಗುತ್ತದೆಂಬುದನ್ನು ನಾನು ಹೇಳಬಯಸುತ್ತೇನೆ.

ಶ್ರೀ ಜೆ.ಹೆಚ್.ಪಟೇಲ್:- ಮಂಗಳೂರು ಜನ ನಮ್ಮವರಲ್ಲ, ಶಿವಮೊಗ್ಗದವರು ಮಾತ್ರ ನಮ್ಮವರು ಎಂದು ನಾನೆಂದೂ ಭಾವಿಸಿಲ್ಲ. ಮಂಗಳೂರಿನಲ್ಲಿ ಜನರಿಗೆ ಹಾನಿಯಾದರೆ, ಮಂಗಳೂರಿನಲ್ಲಿ ಪರಿಸರ ಮಾಲಿನ್ಯವಾದರೆ, ಮಂಗಳೂರಿನಲ್ಲಿ ಸಸ್ಯ ಜೀವಿಗಳಿಗೆ ಹಾನಿಯಾದರೆ, ನಮ್ಮೆಲ್ಲರಿಗೂ ಆದಹಾಗೆಯೇ. We are not interested in any location. ಆದರೆ, ಮಂಗಳೂರು ಹತ್ತಿರ ಕೆಲವು ಅಡ್ವಾಂಟೇಜಸ್ ಇವೆ. ಬೆಂಗಳೂರಿಗೆ ಏಕೆ ಬರಬಾರದು ಮಂಗಳೂರಿನಲ್ಲಿಯೇ ಏಕೆ ಎಂದರೆ ಅಲ್ಲಿ ಕೆಲವೊಂದು ಅಡ್ವಾಂಟೇಜಸ್ ಇವೆ ಅದಕ್ಕೋಸ್ಕರ ಮಂಗಳೂರಿಗೆ ಹೋಗುತ್ತೇವೆ. ತಾವು ಅನ್ಯಥಾ ಭಾವಿಸಬಾರದು. ಅಲ್ಲಿಯ ಜನಕ್ಕೆ ಏನಾದರೂ ಆಗಲಿ, ನಮಗೇನಂತೆ ಎಂದಲ್ಲ. ಮಂಗಳೂರಿನಲ್ಲಾದರೂ ಅಷ್ಟೇ ಕುಣಿಗಲ್‌ನಲ್ಲಾದರೂ ಅಷ್ಟೆ.

ಶ್ರೀ ಯು.ಆರ್.ಸಭಾಪತಿ:- ಅಂತಹ ಭಾವನೆ ಆ ಜಿಲ್ಲೆಯವರಿಗೆ ಆಗಿಹೋಗಿದೆ. ಇವರಿಗೇನು, ಆ ಘಟ್ಟದ ಮೇಲೆ ಕುಳಿತುಕೊಂಡಿದ್ದಾರೆ, ನಮ್ಮ ಪರಿಸ್ಥಿತಿ ಏನು ಎಂದು ಜನ ಹೇಳುವುದಕ್ಕೆ ಶುರು ಮಾಡಿದ್ದಾರೆ. ನೀವು 500 ಮೆಗಾವ್ಯಾಟ್, 1000 ಮೆಗಾವ್ಯಾಟ್ ತನ್ನಿ ತೊಂದರೆ ಇಲ್ಲವೆಂದು ಹೇಳಿದೆ. ದಿವಸಕ್ಕೆ 5-6 ಸಾವಿರ ಟನ್ ಫ್ಲೈಯಿಂಗ್ ಬೂದಿ, ಅದನ್ನು ಎಲ್ಲಿಡುತ್ತಾರೆಂದು ಗೊತ್ತಿಲ್ಲ. ಅದನ್ನು ಹೊಂಡ ತೆಗೆದು ಹೂಳುತ್ತಾರೆ. ಇವತ್ತು ಹೊಂಡ ತೆಗೆದು ಹೂಳುವಂಥ ಯೋಜನೆಯನ್ನು ಹಾಕುವುದಿದ್ದರೆ, 4 ತಿಂಗಳು, 400 ಮೀಟರಿಗಿಂತಲೂ ಹೆಚ್ಚು ನಮ್ಮ ಜಿಲ್ಲೆಯಲ್ಲಿ ಮಳೆ ಬರುತ್ತದೆ. ಆಗ, ಆ ಹೊಂಡದಲ್ಲಿ ಹೂತಿಟ್ಟ ಫ್ಲೈಯಿಂಗ್ ಬೂದಿ ಎಲ್ಲಿ ಹೋಗಬೇಲ, ಆ ಸಮುದ್ರಕ್ಕೇ ಸೇರಬೇಕು. ಅದರಲ್ಲಿ ಗಂಧಕಾಂಶ ಇಲ್ಲವೇ? ಕಳೆದ 10 ವರ್ಷಗಳಿಂದ ಕುದುರೆ ಮುಖ ಐರನ್ ವರ್ಕ್ಸ್ ಸಂಸ್ಥೆ, ಎಂ.ಸಿ.ಎಫ್ ಮತ್ತು ಈಗಾಲೇ ಬಂದಿರತಕ್ಕಂಥ ಎಂ.ಆರ್.ಪಿ.ಎಲ್. ಮತ್ತು ಬೇರೆ ಬೇರೆ ಇಂಡಸ್ಟ್ರೀಗಳಿಂದ ಹೋಗತಕ್ಕಂಥ ಕಲುಷಿತ ನೀರು ಮತ್ತು ಮಲಿನ ವಸ್ತುಗಳೇನಿವೆ, ಅದರಿಂದ ಮೀನುಗಾರಿಕೆಗೆ ಆದಂಥ ಪರಿಣಾಮವನ್ನು ನೀವು ದಯವಿಟ್ಟು ತರಿಸಿ. ಅದರಿಂದ ಎಷ್ಟು ಪರಿಣಾಮವಾಗಿದೆ, ಮೀನುಗಾರರಿಗೆ ಎಷ್ಟು ತೊಂದರೆಯಾಗಿದೆ, ಆ ಕಲುಷಿತವಾದ ನೀರನ್ನು ಸ್ವೀಕಾರ ಮಾಡಿದಂಥ, ಎಣ್ಣೆ, ಗ್ರೀಸನ್ನು ತಿಂದಂಥ ಮೀನನ್ನು ಹಿಡಿದು ನಾವು ಹೇಗೋ ಬದುಕುತ್ತೇವೆ. ಆದರೆ, ತಿಂದವರು, ಅವರಿಗೆ ನಾಳೆ ಆಪರೇಷನ್ ಮಾಡಿಸಬೇಕಾದರೆ, ಅಮೇರಿಕಾಕ್ಕೆ ಹೋಗಬೇಕಾಗುತ್ತದೆ. ಇವತ್ತು ರೀಫೈನರೀಸ್‌ನಿಂದ ಜಪಾನ್‌ನಲ್ಲಿ ಬಂದಂಥ ಮೀನಾಮಾಟ ರೋಗ, ಆ ಮಕ್ಕಳು ಕೈಕಾಲು ಕ್ವಿಸ್ಟ್ ಆಗುವಂಥ ರೋಗ ಬಂದು, ಮರ್‌ಕ್ಯುರಿ ಕಂಟೆಂಟ್ಸ್ ಉಂಟೆಂದು ಹೇಳಿದರೂ ಕೂಡ, ಇವರು ಇಲ್ಲ ಎಂದು ಪ್ರತಿಪಾದನೆ ಮಾಡಿದರು. ಜಪಾನ್‌ನಲ್ಲಿ ಆ ಯೋಜನೆಯನ್ನೇ ಕ್ಲೋಸ್ ಮಾಡಿಬಿಟ್ಟರು. ಇದನ್ನು ನಾನು ಬೇರೆ ಯಾವ ಚಿಂತನೆಯಲ್ಲೂ ಹೇಳುತ್ತಾ ಇಲ್ಲ. ಇದರ ಬಗ್ಗೆ ಇನ್ನಷ್ಟು ಚಿಂತನೆ ನಡೆಯಲಿ. ಇನ್ನಷ್ಟು ಚರ್ಚೆ ನಡೆಯಲಿ. ನಿಮ್ಮದೂ ಪುರಾವೆಗಳನ್ನು ಕೊಡಿ, ನಮ್ಮ ಪುರಾವೆಗಳನ್ನೂ

ಕೊಡುವುದಕ್ಕೆ ಬಯಸುತ್ತೇವೆ. ಇಲ್ಲಿ ಈ ರೀತಿಯಾಗಿದೆ ಎಂದು, ಪುರಾವೆ ಕೊಡುವುದಕ್ಕೆ ನಾವು ಸಿದ್ಧವಿದ್ದೇವೆ. ನೀವು, ನಾವು ಕೊಟ್ಟ ಪುರಾವೆಯನ್ನು ಸಂಪೂರ್ಣವಾಗಿ ತಳ್ಳಿಹಾಕಿ, ನಿಮ್ಮ ಪುರಾವೆಯಿಂದಲೇ, ಈ ಜಿಲ್ಲೆ, ಈ ದೇಶ, ಈ ಉದ್ಯೋಗಾವಸ್ಥೆ ನಮಗೆ ವಿದ್ಯುತ್ ಕೊಡುವಂತಾದ್ದು ಎಂದು ಹೇಳಿಕೊಂಡು ಹೋದರೆ, ನಮ್ಮ ಜಿಲ್ಲೆಯ ಜನರೂ ಬದುಕುವುದಕ್ಕೆ ಹೋರಾಟ ಮಾಡುತ್ತಾರೆಂಬುದನ್ನು ನಿಮಗೆ ನೆನಪಿಸಿಕೊಡುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷರೇ, ಸಾಕಷ್ಟು ಸಮಯಾವಕಾಶವನ್ನು ಮಾಡಿಕೊಟ್ಟಿದ್ದೀರಿ. ಆದರೆ, 19 ಬೇಡಿಕೆಗಳ ಬಗ್ಗೆ ಕೇವಲ ಕೆಲವೇ ಬೇಡಿಕೆಗಳ ಬಗ್ಗೆ ನಾನು ಪ್ರಸ್ತಾವಿಸಿದ್ದೇನೆ. ನನ್ನ ಉದ್ದೇಶ ಇಷ್ಟೇ ಅಲ್ಲ. ವಿರೋಧಪಕ್ಷದ ಸದಸ್ಯನಾಗಿ, ರಚನಾತ್ಮಕವಾಗಿ, ಸರ್ಕಾರದ ನಡವಳಿಯಲ್ಲಿ ಏರುಪೇರುಗಳಾದಾಗ, ಎಚ್ಚರಿಕೆಯ ಮಾತನ್ನು ಕೆಲವೊಂದು ಸಂದರ್ಭಗಳಲ್ಲಿ ಅತ್ಯಂತ ಕಠೋರ ಶಬ್ಧಗಳಲ್ಲಿ ಹೇಳಬೇಕಾಗುತ್ತದೆ. ನಿನ್ನೆ ನಾನು ಸ್ವಲ್ಪ ಉದ್ವೇಗದಲ್ಲಿ ಮಾತನಾಡುವಾಗ, ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು, ಮೈಮೇಲೆ ಬಿದ್ದು ಮಾತನಾಡುತ್ತೀರಿ ಎಂದು ಹೇಳಿದರು. ನಾವು ಮೈಮೇಲೆ ಬಿದ್ದರೂ ಎಚ್ಚರ ಆಗದಿದ್ದರೆ, ನಾವೇನು ಮಾಡಬೇಕು. ಈಗ ಮೈಮೇಲೆ ಬಿದ್ದರೂ ಎಚ್ಚರವಾಗದೆ ಇರತಕ್ಕಂಥ ಪರಿಸ್ಥಿತಿಯಾಗಿದೆ.

ಅಧ್ಯಕ್ಷರು:- ಅವರು ಪ್ರಣಯಜೀವಿಗಳಲ್ಲ ಎಂದು ಹೇಳಬೇಕಾಗುತ್ತದೆ. I think you agree with me.

ಶ್ರೀ ಜೆ.ಹೆಚ್.ಪಟೇಲ್:- ಇಲ್ಲಿ ಮೈಮೇಲೆ ಬೀಳಬಾರದು ಎಂದು ಅವರು ಹೇಳಿದ್ದುದು ಮೈಮೇಲೆ ಬಿದ್ದರೆ ಎಚ್ಚರವಾಗುವುದಿಲ್ಲ.......

ಶ್ರೀ ಯು.ಆರ್.ಸಭಾಪತಿ:- ಅವರು ತುಂಬಾ ಹಿರಿಯರು, ತುಂಬಾ ರಸಿಕತನ ಎಲ್ಲಾ ಇದೆ.

MR.SPEAKER:- Here nobody is willing to compete with you. They are just conceded this. you are really the Leader of the House.

ಶ್ರೀ ಯು.ಆರ್.ಸಭಾಪತಿ:- ಸನ್ಮಾನ್ಯ ಸಭಾಧ್ಯಕ್ಷರೇ, ಮೊನ್ನೆ ಕಾವೇರಿ ಬಗ್ಗೆ ಇಲ್ಲಿ ಬಿಸಿಯಾದ ಚರ್ಚೆಯಾಗುತ್ತಿತ್ತು. ವಾಟಾಳ್ ನಾಗರಾಜು ಫೈಲನ್ನು ಕೆಳಗಿಟ್ಟು ಬೊಬ್ಬೆ ಹೊಡೆದು ಮಾತನಾಡುತ್ತಿದ್ದರು. ಆಗ ಉಪಮುಖ್ಯಮಂತ್ರಿಗಳು ನಿದ್ರೆ ಮಾಡುತ್ತಾ ಇದ್ದರು. ನಾನು ತೋರಿಸುತ್ತಾ ಇದ್ದೆ, ನೋಡಿ ಇಷ್ಟು ಶಬ್ದವಾಗುತ್ತಿದ್ದರೂ, ಅವರು ಎದ್ದಿಲ್ಲ ಎಂದು. ಕಡೆಗೆ, ವಾಟಾಳ್ ನಾಗರಾಜರು ನನಗೆ ಹೇಳಿದರು. ಇಲ್ಲ, ಅವರು ನಿನ್ನೆ ನಿದ್ದೆ ಬಿಟ್ಟು ಬಂದಿದ್ದಾರೇನೋ, ಮಲಗಿಕೊಳ್ಳಲಿ, ಹಿರಿಯ ಸಚಿವರು ಎಂದು ಹೇಳಿದರು. ಮತ್ತೆ ಮಾರನೇ ದಿವಸ ನೋಡುತ್ತೇನೆ. ಮತ್ತೆ ಇಲ್ಲಿ ಗಲಾಟೆಯಾಗುತ್ತಾ ಇತ್ತು. ಆಗ ಮಾನ್ಯ ಧರ್ಮಸಿಂಗ್‌ರವರಿಗೂ ಹೇಳಿದೆ. ಉಪಮುಖ್ಯಮಂತ್ರಿಗಳು ಏನು

ಮಾಡುತ್ತಿದ್ದಾರೆಂದರೆ, ಅವರು ಮಲಗಿಕೊಂಡೇ ಇದ್ದರು. ನನಗೆ ಸಂಶಯ ಬಂತು. ಮೈಮೇಲೆ ಬಿದ್ದರೂ ಕೂಡ ಎಚ್ಚರವಾಗದಿದ್ದರೆ, ಇಷ್ಟು ಜನ ಬೊಬ್ಬೆ ಹೊಡೆಯುತ್ತಿದ್ದರೂ ಅವರು ಸುಖ ನಿದ್ದೆಯಲ್ಲಿದ್ದಾರೆಂದಾದರೆ, ನಾವೇನು ಮಾಡಬೇಕು. ಒಟ್ಟಿನಲ್ಲಿ ನನ್ನ ತಾತ್ಪಾರ್ಯ ಇಷ್ಟೆ. ಈ ಸದನ, ರಾಜ್ಯದ ಜನರಿಗೆ ಒಂದು ಮಾರ್ಗದರ್ಶನವಾಗುವಂಥ ಒಂದು ಸದನ. ನಾವು ಉತ್ತಮ ನಡವಳಿಕೆಯನ್ನು ರೂಪಿಸಬೇಕಾಗಿದೆ. ಉತ್ತಮ ಆಡಳಿತವನ್ನು ರೂಪಿಸಬೇಕಾಗಿದೆ. ಕಟ್ಟುನಿಟ್ಟಿನ ಕ್ರಮವನ್ನು ನಾವು ತೆಗೆದುಕೊಳ್ಳಬೇಕಾಗಿದೆ. ನಮ್ಮ ಅಂತರಾತ್ಮದಲ್ಲಿ ಬರತಕ್ಕಂಥ ಭಾವನೆಗಳೇನಿವೆ, ಅವುಗಳನ್ನು ಪ್ರಯೋಗ ಮಾಡುವಾಗ, ಈ ರಾಜ್ಯದ ಜನರನ್ನು ನೆನಪಿಟ್ಟುಕೊಂಡು ನಾವು ಮಾತನಾಡಬೇಕಾಗುತ್ತದೆ. ರಾಜ್ಯದ ಜನರ ಹಿತವನ್ನು ನೆನಪಿಟ್ಟುಕೊಂಡು ಇಲ್ಲಿ ಮಾತನಾಡಬೇಕಾಗುತ್ತದೆ. ನಾವು 5 ವರ್ಷಗಳಿಗೊಮ್ಮೆ ಹೋಗಿ, ಈ ರಾಜ್ಯದ ಜನರ ಹಿತಾಸಕ್ತಿಯನ್ನು ಕಾಪಾಡುತ್ತೇವೆ, ಅದು ಮಾಡುತ್ತೇವೆ. ಇದು ಮಾಡುತ್ತೇವೆಂದು ಹೇಳಿಕೊಂಡು ಬಂದು ಇಲ್ಲಿ, ನಮ್ಮ ಸ್ವಂತ ಲಾಭಕ್ಕೋಸ್ಕರ, ರಾಜಕೀಯವಾಗಿ ಮಾತನಾಡಿಕೊಂಡು, ಹಾಸ್ಯಾಸ್ಪದವಾಗಿ ಮಾತನಾಡಿಕೊಂಡು, ಸಮಯಾವಕಾಶವನ್ನು ಕಳೆಯಬಾರದು. ಆಡಳಿತದಲ್ಲಿ ಒಂದು ಚುರುಕು ಹುಟ್ಟಿಸಬೇಕು. ಆಡಳಿತದಲ್ಲಿ ಚುರುಕು ಮುಟ್ಟಿಲ್ಲ. ಮುಖ್ಯಮಂತ್ರಿಗಳೇ, ನಾನು ಮತ್ತೊಮ್ಮೆ ಆರೋಪ ಮಾಡುತ್ತೇನೆ. ನಮ್ಮ ಸರ್ಕಾರಕ್ಕೆ ಇನ್ನೂ ಚುರುಕು ಮುಟ್ಟಿಲ್ಲ. ಅದಕ್ಕಾಗಿ ಚುರುಕುತನವನ್ನು ಕೊಡಬೇಕು. ಅಧಿಕಾರಿಗಳು ಎಚ್ಚರದಿಂದ ಇರಬೇಕು. ಇವತ್ತು ಸದನ ಇಷ್ಟು ವಿಳಂಬವಾಗುವುದಕ್ಕೆ ಕಾರಣವೇನು? ಅಧಿಕಾರಿಗಳು ಮಾಡಿದ ತಪ್ಪಿಗೆ ನೀವು ಬಲಿಪಶುಗಳಾಗಬೇಕು. ಅದಕ್ಕಾಗಿ, ನೀವು ನಿಮ್ಮ ಸ್ವಂತಿಕೆಯನ್ನು ಉಪಯೋಗಿಸಬೇಕು. ಅಧಿಕಾರಿಗಳನ್ನು ಯೋಗ್ಯ ರೀತಿಯಲ್ಲಿ, ಸಮರ್ಥ ರೀತಿಯಲ್ಲಿ ನಡೆಸಿಕೊಂಡು ಹೋದರೆ ಮಾತ್ರ, ಈ ರಾಜ್ಯದ ಜನ ತಿಳಿದುಕೊಳ್ಳುತ್ತಾರೆ. ಏನೆಂದರೆ, ಹೊಸ ಸರ್ಕಾರ ಅಧಿಕಾರಕ್ಕೆ ಬಂದಿದೆ, ಗಂಭೀರವಾದ ವಾತಾವರಣ ನಿರ್ಮಾಣವಾಗಿದೆ. ಈ ಸರ್ಕಾರದಿಂದ ಬದಲಾವಣೆಯನ್ನು ನಾವು ಅಪೇಕ್ಷೆ ಮಾಡಬಹುದು ಎಂಬ ಚಿಂತನೆಯನ್ನು ಜನ ಮಾಡುತ್ತಾರೆಂಬ ಭಾವನೆಯಿಂದ........

ಶ್ರೀ ಜೆ.ಹೆಚ್.ಪಟೇಲ್:- ಆ ರೀತಿ ಜನ ಚಿಂತನೆ ಮಾಡಿದ್ದರಿಂದಲೇ, ಲೋಕಸಭಾ ಚುನಾವಣೆಯಲ್ಲಿ 16 ಜನ ಗೆದ್ದರು. ಇನ್ಯಾರೂ ಆ ರೀತಿಯ ಸಾಹಸ ಮಾಡುವುದಕ್ಕೆ ಹೋಗಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನೀವು ಅದೇ ಹೇಳಿಕೊಂಡು ಹೋಗಿ. ಹೀಗೆ ಹೇಳಿ, ಹಿಂದೆ ಕಳೆದುಕೊಂಡಿರಿ. ಅದೂ ಕಾಲ ಬರುತ್ತದೆ. ನೀವು ಅದನ್ನೇ ಉದಾಹರಣೆ ಇಟ್ಟುಕೊಂಡು, 16 ಜನ ಗೆದ್ದಿದ್ದೇವೆಂದು ತಮ್ಮಟೆ ಬಾರಿಸಿಕೊಂಡು, ರಾಜ್ಯ ಮಾಡದೇ, ಒಳ್ಳೆಯ ರೀತಿಯ ಆಡಳಿತ ಕೊಡದೇ, ಮುಂದುವರಿಸಿಕೊಂಡು ಹೋಗಿ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಈಗ ಸರ್ಕಾರ ಚೆನ್ನಾಗಿ ನಡೆದಿದೆಯೆಂದು

ಹೇಳಬೇಕಾದರೆ ಇದೇ ಆಯುಧ ಅದೇ ತಾನೆ. 4 ತಿಂಗಳಲ್ಲಿ ಜನ ತೀರ್ಪು ಕೊಟ್ಟಮೇಲೆ ಅದನ್ನು ಹೇಳದೇ, ಇನ್ನಾವುದನ್ನು ಹೇಳುವುದಕ್ಕಾಗುತ್ತದೆ? ಇಲ್ಲ 36 ಕೊಟ್ಟಿದ್ದಾರೆಂದು ಹೇಳುವುದಕ್ಕಾಗುತ್ತದೆಯೇ? ಜನ 28 ಸೀಟುಗಳಿಗೆ 16 ಕೊಟ್ಟಿದ್ದಾರೆ. ಹಿಂದಿನ ಇತಿಹಾಸದಲ್ಲಿ ಜನತಾ ದಳ ಸರ್ಕಾರಕ್ಕೆ 16 ಕೊಟ್ಟಿರಲಿಲ್ಲ. 3-4 ಜನರ ಮೇಲೆ ಕೊಡುತ್ತಾ ಇರಲಿಲ್ಲ. ಇಲ್ಲಿ ಸರ್ಕಾರ ಮಾಡಿರುವುದಕ್ಕೇ, ಜನ ಅಷ್ಟು ಕೊಟ್ಟಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರು ಇವರ ಫೋಟೋ ತಲೆಮೇಲೆ ಇಟ್ಟುಕೊಂಡು ಎಲ್ಲಾ ಕಡೆ ಓಡಾಡಿದ್ದಾಯಿತು. ಆದರೂ, ಅವರಿನ್ನೂ ಜನತಾ ದಳದವರನ್ನು ಡಿಪೆಂಡ್ ಮಾಡುವುದನ್ನು ಬಿಡಲಿಲ್ಲ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಖರ್ಗೆಯವರು ಹೇಳಿದ್ದು ನನಗೆ ಅರ್ಥವಾಗಲಿಲ್ಲ, ಇನ್ನೊಂದು ಸಾರಿ ಹೇಳಿ....

ಅಧ್ಯಕ್ಷರು:- ಮಾನ್ಯ ವಾಟಾಳ್ ನಾಗರಾಜರು, ಅವರನ್ನು ಅಷ್ಟು ದೂರ ಕರೆದುಕೊಂಡು ಹೋಗಿ ಇಷ್ಟೊತ್ತು ಅವರಿಗೆ ನೀವು ಬುದ್ಧಿ ಹೇಳಿ ಮತ್ತೆ ಅವರು ಈಗ ಅವರ ಕೆಲಸವನ್ನು ಮಾಡಿದರು. ಏನೇ ಹೇಳಿದರೂ ನಿಮ್ಮ ಯೋಜನೆ ಏನೂ ಸಫಲವಾಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನನಗೇನೋ ಸ್ನೇಹಿತರು ನಿಜ. ಮಾನ್ಯ ಖರ್ಗೆಯವರು ಅವರ ವಿರುದ್ಧ ಏನೂ ಮಾತನಾಡಲಿಲ್ಲ. ಅವರು ಅವರ ಮೇಲಿನ ಅನುಕಂಪದಿಂದ ಹೇಳಿದರು. ತಾವು ಸಹ ಸದಸ್ಯರು ಸಹ ಸದಸ್ಯರು ಅಂದ್ರೆ ಒಂದು ಛೇರ್ಮನ್ ಸಹ ಮಾಡಲಿಲ್ಲ ಕೊನೆಗೆ. ನಿಮ್ಮ ಹಣೆಬರಹ ಈ ರೀತಿ ಆಯಿತು ಅಂತ. ನಾನೂ ಅದನ್ನೇ ಹೇಳುತ್ತಿದ್ದೇನೆ. ಕಡೆಯಪಕ್ಷ ಒಂದು ಛೇರ್ಮನ್ ಆದರೂ ಮಾಡಿ. ಅವರಿಗೆ ಬುದ್ಧಿ ಬಂದರೆ ಅವರು ಈ ಕಡೆಬರಲಿ. ಇಲ್ಲಾ ಅಂದ್ರೆ ನಾನು ಪಟೇಲರನ್ನು ಕೈಮುಗಿದು ಕೇಳುತ್ತೇನೆ. ಈಗಲಾದರೂ ಅವರನ್ನು ಛೇರ್ಮನ್ ಆಗಿ ಮಾಡಿ. ದಯಮಾಡಿ. ನೀವು ಕೊಡಲೇಬೇಕು. ಈ ವಿಚಾರದಲ್ಲಿ ನಾನು ಹಾಸ್ಯವಾಗಿ ಮಾತನಾಡುತ್ತಿಲ್ಲ, ಅವರು ಒಂದು ಒಳ್ಳೆಯ ಕೆಲಸ ಮಾಡುತ್ತಾರೆ. ತಾವು ದಯವಿಟ್ಟು ಒಂದು ಛೇರ್ಮನ್‌ಗಿರಿ ಕೊಟ್ಟರೆ ಒಳ್ಳೆಯದು ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ನಮ್ಮೆಲ್ಲರ ಪರವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೇ ಇಲ್ಲಿ ವಾದ ಮಾಡುವುದು ಅಲ್ಲ. ಅಲ್ಲಿಯೂ ವಾದ ಮಾಡಿ, ಬಹಳ ಅಂತರದಲ್ಲಿ ಗೆಲ್ಲಿಸಿ ಮತ್ತೇ ಅಲ್ಲಿಯೇ ಕುಳಿತುಕೊಂಡಿದ್ದಾರೇ ವಿನಹ, ಅವರು ಯಾವುದಾದರೊಂದು ಕುರ್ಚಿಯಲ್ಲಿ ಹೋಗಿ ಕೂರುವಂತಹ ಯೋಜನೆ ಹಾಕಿಕೊಂಡಿಲ್ಲ. ಅವರು ಕೊಡುವುದೂ ಇಲ್ಲ. ನೀವು ತೆಗೆದುಕೊಳ್ಳುವುದೂ ಇಲ್ಲ. ನೀವು ಹೀಗೆ ವಾದ ಮಾಡಿಕೊಂಡೇ ಕುಳಿತುಕೊಳ್ಳಿ. ಅಷ್ಟು ಹೊತ್ತಿಗೆ ನೀವು ಬೇರೆ ಪಕ್ಷ ಸೇರಿಬಿಡುತ್ತೀರಿ?

ಶ್ರೀ ಎಲ್.ಆರ್.ಶಿವರಾಮೇಗೌಡ:- ಮಾನ್ಯ ಅಧ್ಯಕ್ಷರೇ ನಾನು ಯಾವ ಪಕ್ಷಕ್ಕೂ ಸೇರಿಲ್ಲ. ನಾನು ನನ್ನ ಶಕ್ತಿಯ ಮೇಲೆ ನನ್ನ ಬಾವುಟದ ಮೇಲೆ ಗೆದ್ದು ಬಂದವನು. ಆದ್ದರಿಂದ ನಾನು ಯಾವ ಸರ್ಕಾರ ರಚನಾತ್ಮಕವಾಗಿ ಈ ರಾಜ್ಯದಲ್ಲಿ ಆಳ್ವಿಕೆ ಮಾಡುತ್ತದೆಯೋ, ಆ ಸರ್ಕಾರಕ್ಕೆ ನಾನು ಬೆಂಬಲ ಕೊಡುತ್ತೇನೆಯೇ ಹೊರತು ಬೇರೆಯದಕ್ಕೆ ಅಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ ಇವರು ಯಾವ ಪಾರ್ಟಿ? ನನಗೆ ಗೊತ್ತಿರುವ ಹಾಗೆ ಅವರು ಎಲ್ಲಾ ಸರ್ಕಾರಕ್ಕೂ ಸಹ ಸದಸ್ಯರಾಗುತ್ತಾರಲ್ಲ. ಅದರ ಉದ್ದೇಶ ಏನು ಅಂತ ನನಗೆ ಗೊತ್ತಿಲ್ಲ.

ಅಧ್ಯಕ್ಷರು:- ಅವರು ಆರಿಸಿ ಬಂದಿರತಕ್ಕಂಥ ಸರ್ಕಾರ ರಚನಾತ್ಮಕವಾಗಿರುತ್ತದೆ ಅದಕ್ಕೆ ಅವರು ರಚನಾತ್ಮಕವಾದ ಬೆಂಬಲ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಸಂತೋಷ, ಅವರು ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ. ಅವರು ಆರಿಸಿ ಬಂದಿದ್ದಾರೆ ಅದರ ಬಗ್ಗೆ ನನ್ನ ತಕರಾರು ಏನೂ ಇಲ್ಲ. ಅವರು ಗೆದ್ದು ಬಂದ ಮೇಲೆ ಇನ್ನೂ ಯಾವ ಪಕ್ಷ ಅಂತ ನಿರ್ಧಾರ ಆಗಿಲ್ಲ ಅದಕ್ಕೋಸ್ಕರ ನಾನು ಕೇಳಿದೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಮಾನ್ಯ ಅಧ್ಯಕ್ಷರೇ ಅಧಿಕೃತವಾಗಿ ಜನತಾ ದಳ ಪಕ್ಷ. ಇದನ್ನು ಅರ್ಥಮಾಡಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ಜನತಾ ದಳಕ್ಕೆ ಸೇರಿ ಆಗಿ ಹೋಯಿತೇ ಇವರು.

ಶ್ರೀ ಎಲ್.ಆರ್.ಶಿವರಾಮೇಗೌಡ:- ಹೌದು ಹೌದು.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೇ ಚುನಾವಣೆಯಲ್ಲಿ ನಮಗೆ 16 ಸ್ಥಾನ ಸಿಕ್ಕಿದೆ ಅದನ್ನೇ ಒಂದು ಮಾನ ದಂಡ ತೆಗೆದುಕೊಂಡು ಜನರು ತೀರ್ಮಾನ ಕೊಟ್ಟಿದ್ದಾರೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಚುನಾವಣೆಯಲ್ಲಿ ಗೆಲ್ಲುವುದು ಸೋಲುವುದು ವಿವಿಧ ರೀತಿಯ ರಾಜಕೀಯ ತಂತ್ರಗಾರಿಕೆ ಏನು ಇದೆ ಆ ತಂತ್ರಗಾರಿಕೆ ಮೇಲೆ ಹೋಗುತ್ತದೆಯೇ ವಿನಹ ನಿಮ್ಮ ಆದರ್ಶಗಳು ನಿಮ್ಮ ಆಡಳಿತವನ್ನು ನೋಡಿ ಜನ ಗೆಲ್ಲಿಸಿದ್ದಾರೆ ಎಂದು ಹೇಳುವಂತಾದ್ದು ಏನೂ ಇಲ್ಲ. ನಾನು ಉದಾಹರಣೆಗೆ ಹೇಳುವುದದರೆ ಎದುರು ಪಾರ್ಟಿ ಅಭ್ಯರ್ಥಿಗಳನ್ನು ಹಾಕುವಾಗ ಇವರು ಸರಿಯಾಗಿ ಹಾಕಲಿಲ್ಲ. ನಮ್ಮ ಒಂದು ವೈಫಲ್ಯದಿಂದ ನೀವು ಬಂದಿರಿ ಅಷ್ಟೇ. ನಿಮ್ಮ ಆಡಳಿತ ವೈಖರಿಯನ್ನು ನೋಡಿ ಜನ ಓಟು ಕೊಟ್ಟದ್ದು ಅಲ್ಲ. ನಮ್ಮಲ್ಲಿ ಆದ ಒಂದು ಗೊಂದಲಮಯ ವಾತಾವರಣದಿಂದ ನೀವು ಏನೋ ಒಂದು ನಕ್ಷತ್ರದಂತೆ ಬಂದು ಅದನ್ನೇ ನೀವು ಒಂದು ಮಾನದಂಡವಾಗಿ ಇಟ್ಟುಕೊಂಡು ಏನೋ ದೊಡ್ಡ ಸಾಧನೆ ಮಾಡಿದ್ದೇವೆ ಅಂತ ಹೇಳಿದರೆ.......

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಅಧ್ಯಕ್ಷರೇ ಇವರ ಮಾತಿನ ರೀತಿ ಏನಿದೆ ಅಂದರೆ, ನಮ್ಮ ಪ್ರಜಾಪ್ರಭುತ್ವದ ಮತದಾರ ಒಬ್ಬ ಮೂರ್ಖ ಅಂತ ಭಾವಿಸಿಕೊಂಡಿದ್ದಾರೆ. ಅವರು ನಮ್ಮ ಆಡಳಿತದ ವೈಖರಿ ನಡವಳಿಕೆ ಮತ್ತು ಚುನಾವಣೆ ಪ್ರಣಾಳಿಕೆಯನ್ನು ನೋಡಿ ನಿರ್ಣಯ ಮಾಡುತ್ತಾರೆಯೇ ವಿನಹ ಮತದಾರರನ್ನು ನೀವು ಆ ರೀತಿ ಕಾಣಬೇಡಿ.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೇ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಬಹಳ ಬುದ್ಧಿವಂತರಿದ್ದಾರೆ. ಇವತ್ತು ಮತದಾರರು ಚುನಾವಣೆ ಪ್ರಣಾಳಿಕೆಯನ್ನು ಓದಿ ಅದರ ಮೇಲೆ ನಿರ್ಣಯ ತೆಗೆದುಕೊಳ್ಳುತ್ತಾರೆಂದು ಹೇಳುವುದರಲ್ಲಿ ಶೇಕಡ 25ರಷ್ಟು ಸತ್ಯಾಂಶ ಇದೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಗ್ರಾಮೀಣ ಪ್ರದೇಶದ ಜನರಿಗೆ ನಿಮ್ಮ ಚುನಾವಣೆ ಪ್ರಣಾಳಿಕೆಯನ್ನು ನೀವು ತಲುಪಿಸಿದ್ದೀರಾ ಹೇಳಿ.

ಅಧ್ಯಕ್ಷರು:- ಈಗ ತಾವು ತಮ್ಮ ಭಾಷಣ ಬೇಗ ಮುಗಿಸಿ. ಯಾರ್‍ಯಾರು ಏನೇನು ತಲುಪಿಸಿದ್ದಾರೆ ಎನ್ನುವುದನ್ನು ಇನ್ನೊಂದು ದಿವಸ ಚರ್ಚೆ ಮಾಡಿಕೊಳ್ಳೋಣ.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಮತ್ತೇನೂ ಹೇಳುವುದಕ್ಕೆ ಬಯಸುವುದಿಲ್ಲ. ಮತ್ತೇಮತ್ತೇ ನಾನು ಸರ್ಕಾರವನ್ನು ಕೇಳಿಕೊಳ್ಳುವುದು ಮೊದಲನೆಯದಾಗಿ ತಾವು ಆಡಳಿತದಲ್ಲಿ ಒಂದು ಚುರುಕನ್ನು ಹುಟ್ಟಿಸಬೇಕು. ಮತ್ತಷ್ಟು ಪರಿಣಾಮಕಾರಿಯಾಗಿ ಆಡಳಿತ ನಡೆಯಬೇಕು ಎನ್ನುವುದೇ ನನ್ನ ಉದ್ದೇಶ. ಎರಡನೆಯದಾಗಿ ವಿದ್ಯುಚ್ಛಕ್ತಿ ಯೋಜನೆಗಳನ್ನು ರೂಪಿಸುವಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೆಗಾ ಇಂಡಸ್ಟ್ರಿಗಳನ್ನು ಹಾಕುವುದರ ಬಗ್ಗೆ ಜನಾಂದೋಲನ ಈಗಾಗಲೇ ಪ್ರಾರಂಭವಾಗಿಬಿಟ್ಟಿದೆ. ಎಂ.ಆರ್.ಪಿ.ಎಲ್. ಚಳುವಳಿ ಅಲ್ಲ. ಅದಕ್ಕಿಂತ ಉಗ್ರವಾದ ಹೋರಾಟ ನಡೆಯುವಂತಹ ಸಂಭವ ಇದೆ. ಮತ್ತೇ ಕೊಜೆಂಟ್ರಿಕ್ಸ್ ಸ್ಥಾಪನೆಯ ವಿಚಾರದಲ್ಲಿ ನಡೆಯುತ್ತಿದೆ. ಜನಾಂದೋಲನ ಈಗಾಗಲೇ ಪ್ರಾರಂಭವಾಗಿದೆ. ಇದನ್ನು ನೀವು ಗಮನಕ್ಕೆ ತೆಗೆದುಕೊಳ್ಳದೆ ಏಕಾಏಕಿ ನಿರ್ಧಾರವನ್ನು ತೆಗೆದುಕೊಂಡರೆ ಆಗತಕ್ಕಂಥ ಪರಿಣಾಮಕ್ಕೆ ನೀವೇ ಹೊಣೆಗಾರರು ಆಗುತ್ತೀರಿ ವಿನಹ ಸುಮ್ಮನೇ ಸುಮ್ಮನೇ ಯಾರೋ ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆ ಎನ್ನುವಂತಹ ಆರೋಪ ಹಾಕಬೇಡಿ. ಎನ್ನುವ ಮಾತಿನೊಂದಿಗೆ ಇವತ್ತು ನನಗೆ ಇಷ್ಟು ಹೊತ್ತಿನವರೆಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ ಮಾನ್ಯ ಸಭಾಪತಿಯವರು ಮಾತನಾಡುವಾಗ ಮಾನ್ಯ ಲೋಕೋಪಯೋಗಿ ಸಚಿವರ ಮೇಲೆ ಅವರಿಗೆ ನಿವೇಶನ ಕೊಟ್ಟಿದ್ದರ ಬಗ್ಗೆ ಒಂದು ಆಪಾದನೆ ಮಾಡಿದ್ದಾರೆ ಅದು ಕಡತಕ್ಕೆ ಹೋಗಿದೆ. ಮಾನ್ಯ

ಸಚಿವರು ಬಂದಿದ್ದಾರೆ ಅವರಿಗೆ ರಕ್ಷಣೆ ಕೊಟ್ಟಿದ್ದಾರೋ ಇಲ್ಲವೋ ಆ ನಿವೇಶನದ ಬಗ್ಗೆ ಮಾನ್ಯ ಸದಸ್ಯರು ಎತ್ತಿದಂತಹ ಪ್ರಶ್ನೆಗೆ ಉತ್ತರ ಕೊಡುತ್ತಾರೆ ದಯಮಾಡಿ ಅವಕಾಶ ಮಾಡಿಕೊಡಬೇಕು.

ಶ್ರೀ ಸಿ.ಎಂ.ಉದಾಸಿ:- ಮಾನ್ಯ ಅಧ್ಯಕ್ಷರೇ ಅಲ್ಲಿ ಯಾರೋ ಒಬ್ಬರು ಬಂದು ತಕರಾರು ಮಾಡಿದರೇ ಹೊರತು ಬೇರೇನೂ ಇಲ್ಲ. ಆ ಸಂದರ್ಭದಲ್ಲಿ ಬಿ.ಡಿ.ಎ.ನವರು ಮತ್ತೂ ಪೋಲೀಸ್ ಇಲಾಖೆಯವರು ಬಂದು ನಮಗೆ ರಕ್ಷಣೆಯನ್ನು ಕೊಟ್ಟಿದ್ದಾರೆ. ನಮಗೆ ಯಾವುದೇ ರೀತಿಯ ತೊಂದರೆ ಆಗಿಲ್ಲ. ಅಲ್ಲಿ ಕಟ್ಟಡದ ಕೆಲಸ ನಡೆಯುತ್ತಿರಬೇಕಾದರೆ ವೃಥಾ ನನ್ನ ಹೆಸರನ್ನು ಅವರು ಇಲ್ಲಿ ಬಳಸಿದರು ಅಂತ ನಾನು ಕೇಳಿದೆ. ಅದರಿಂದ ನನಗೆ ಬೇಸರವಾಯಿತು ಅಷ್ಟೇ.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೇ ಅವರು ಆಡಳಿತ ಪಕ್ಷದಲ್ಲಿ ಇದ್ದುಕೊಂಡು ಮಂತ್ರಿಗಳಾಗಿ ಇದ್ದುಕೊಂಡು ಇವತ್ತು ಈ ಉತ್ತರ ಹೇಳಬೇಕು ಸತ್ಯ. ಆದರೆ ಅಲ್ಲಿ ನಡೆದಂತಹ ವಿಷಯ ನನಗೆ ಮೊನ್ನೆಯವರೆಗೂ ಗೊತ್ತಿದೆ. ಏನಾಗಿದೆ ಅಂತ. ನಾನು ಸುಮ್ಮನೆ ಹೇಳುವುದಿಲ್ಲ ಇತ್ತೀಚೆಗೆ ತಾವು ಯಾರ ಯಾರ ಹತ್ತಿರ ದೂರವಾಣಿಯ ಮೂಲಕ ಮಾತನಾಡಿದ್ದೀರಿ ಯಾರ್ಯಾರಿಗೆ ಕೊಡುವುದಿಲ್ಲ ಅಂತ ಹೇಳಿದ್ದೀರಿ ಅದೆಲ್ಲಾ ನನ್ನ ಗಮನಕ್ಕೆ ಬಂದಿದೆ. ಇರಲಿ ಕಡೆಗೆ ನೀವು ಹೇಳಿದ್ದನ್ನೇ ಒಪ್ಪೋಣ.

ಶ್ರೀ ಸಿ.ಎಂ.ಉದಾಸಿ:- ಮಾನ್ಯ ಅಧ್ಯಕ್ಷರೇ, ವೃಥಾ ಒಬ್ಬರ ಹೆಸರು ಬಳಸುವುದು ಸರಿಯಾದುದು ಅಲ್ಲ. ಈಗಾಗಲೇ ನನಗೆ ಏನು ನಿವೇಶನ ಕೊಟ್ಟಿದ್ದಾರೆ ಅದರ ಪಕ್ಕದ ನಿವೇಶನದಲ್ಲಿ ಕಂಪೌಂಡ್ ಕಟ್ಟಿ ಆಗಿದೆ. ನಾನೇನು ಕಟ್ಟಲಿಕ್ಕೆ ಹೊರಟಿಲ್ಲ. ಆದರೆ ನಾನು ಅಲ್ಲಿ ಕಟ್ಟಡವನ್ನು ಕಟ್ಟಬೇಕೆನ್ನುವ ವಿಚಾರ ಇದ್ದಾಗಲೂ ಸಹ ಅಲ್ಲಿ ಯಾವುದೇ ಒಂದು ಆಕ್ಷೇಪಣೆ ಬಂದಿಲ್ಲ. ಯಾರೋ ಒಬ್ಬರು ತಕರಾರು ಮಾಡಿದಾಗ ಇಲಾಖೆಯವರಿಗೆ ದೂರನ್ನು ಕೊಟ್ಟಾಗ ರಕ್ಷಣೆ ಕೊಟ್ಟಿರುವಾಗ ವೃಥಾ ನನ್ನ ಹೆಸರನ್ನು ಬಳಸುವ ಅಶಶ್ಯಕತೆ ಇರಲಿಲ್ಲ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು:- ಈಗ ಸಭೆಯನ್ನು ಮುಂದೂಡಿ ಮತ್ತೇ ನಾಳೆ ಬೆಳಿಗ್ಗೆ 11-00 ಗಂಟೆಗೆ ಸೇರುತ್ತದೆ.

(ಸದನವು ಸಂಜೆ 7-16 ನಿಮಿಷಕ್ಕೆ ಮುಂದೂಡಿ ಮತ್ತೇ ದಿನಾಂಕ 24.7.96ರ ಬುಧವಾರ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಲಾಯಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)